ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೦
ವಿಚಾರ ಸಾಹಿತ್ಯಮಾಲೆ – ೭೩
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಧರ್ಮಶಾಸಕ ಅಯ್ಯಪ್ಪನ್

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**

(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಧರ್ಮಶಾಸಕ ಅಯ್ಯಪ್ಪನ್

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ

(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)

–ಋಗ್ವೇದ, I ೮೯–೧

ಮೂಲ

**ಪಯ್ಯಪ್ಪನ್**

ಅನುವಾದ

**ಗಿರಿಜಾ ಶಾಸ್ತ್ರಿ**


**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು

ಮತ್ತು

**ಭಾರತೀಯ ವಿದ್ಯಾ ಭವನ,** ಮೈಸೂರು

**Darmashasaka Ayyappan:** Kannada translation of *Lord Ayyappan-The Dharma Sasta* : **Pyyappan;** Kannada translation by **Girija Shastri;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxiv + 64. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxiv + ೬೪
ಬೆಲೆ : ರೂ. ೧೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ,

ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ, **'ಕನಕದಾಸರ ಕೃತಿ'**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಪೈಯಪ್ಪನ್ ಅವರ *Lord Ayyappan - The Dharma Sasta* ಪುಸ್ತಕದ ಕನ್ನಡ ಅನುವಾದ. ಇದನ್ನು ಅನುವಾದಿಸಿರುವವರು ಗಿರಿಜಾ ಶಾಸ್ತ್ರಿ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿ ಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಶುಭ ಕೋರಿಕೆ

ಕಂಚಿ ಪೀಠದ ಪರಮಹಂಸ ಜಗದ್ಗುರು ಶ್ರೀ ಶಂಕರಾಚಾರ್ಯರಿಂದ ನೀಡಲ್ಪಟ್ಟ ಶುಭ ಆಶೀರ್ವಾದಗಳು.

ಪರಮಾತ್ಮನು ತಾನಾಗಿ ಶಿವ ಮತ್ತು ನಾರಾಯಣರಾಗಿ ಅವತರಿಸುತ್ತಾನೆ. ಶಿವನಾಗಿ ಜ್ಞಾನವನ್ನು ಬೋಧಿಸಿದರೆ, ವಿಷ್ಣುವಾಗಿ ನಮ್ಮನ್ನು ಕಾಪಾಡುತ್ತಾನೆ.

ನಾವು ಶಿವನನ್ನು ರೂಪಿಸಿಕೊಳ್ಳುವುದು ಮರದ ಕೆಳಗೆ ಕುಳಿತಿರುವಂತೆ, ಅಥವಾ ಪರ್ವತದ ಶಿಖರದ ಮೇಲೆ, ವಿಭೂತಿ ಬಳಿದುಕೊಂಡ ದೇಹಕ್ಕೆ ಹುಲಿಚರ್ಮ ಮತ್ತು ಗಜಚರ್ಮ ಸುತ್ತಿಕೊಂಡು, ಶಾಂತನೂ, ಗಂಭೀರನೂ ಆಗಿ ಧ್ಯಾನಮಗ್ನನಾಗಿರುವಂತೆ ಮತ್ತು ಜ್ಞಾನದ ಚಿಹ್ನೆ ಅಥವಾ ಜ್ಞಾನದ ಮುದ್ರೆ ತೋರಿಸುತ್ತಿರುವಂತೆಯೇ, ಹೌದು. ಅವನು ಪರಮಪ್ರಧಾನ ಗುರುವೇ ಆಗಿದ್ದು, ನಮಗೆಲ್ಲರಿಗೂ, ತನಗಿಂತ ಬೇರೆ ಆಗಿಯೇ ಇಲ್ಲದಂಥ ಮೂಲಭೂತ ಸತ್ಯವನ್ನು ಕಲಿಸಿದ್ದಾನೆ.

ರಕ್ಷಣೆ ಒಂದು ಅತಿಪ್ರತಿಷ್ಠಿತ ಕರ್ತವ್ಯ. ಆದ್ದರಿಂದ ನಾವು ನಾರಾಯಣನನ್ನು, ಜಾಜ್ವಲ್ಯಮಾನವಾದ ರೀತಿಯಲ್ಲಿ ಶೃಂಗರಿಸಿಕೊಂಡಂತೆ ಮತ್ತು ಅಮೂಲ್ಯವಾದ ರತ್ನಾಭರಣಗಳನ್ನು ಧರಿಸಿರುವವನಂತೆ, ಚಿತ್ರಿಸಿಕೊಂಡು ಧ್ಯಾನಿಸುತ್ತೇವೆ.

ಶಿವನಿಗೆ ಪವಿತ್ರವಾದ ಜಲಸ್ನಾನವೇ, ಅತ್ಯಂತ ಪ್ರಿಯವಾದದ್ದು. ಆದರೆ ನಾರಾಯಣ ಶೃಂಗಾರಪ್ರಿಯ.

ಆದ್ದರಿಂದ ನಾವು ಅಲಂಕಾರ ಪ್ರಿಯ ವಿಷ್ಣು, ಅಭಿಷೇಕ ಪ್ರಿಯ ಶಿವ ಎನ್ನುತ್ತೇವೆ.

ವಿಷ್ಣುವಿನ ಸೌಂದರ್ಯ ಎಂಥ ಅಮೌಲ್ಯದ್ದು ಎಂದರೆ, ಅವನನ್ನೇ, ಬಿಡದೆ ದೃಷ್ಟಿಸಿ ನೋಡುತ್ತಿರಬೇಕೆಂಬ ಆಸೆ ಭಕ್ತರಲ್ಲಿ ಉಂಟಾಗುತ್ತದೆ. ಅವನ ಅವತಾರಿಗಳಾದ ಶ್ರೀರಾಮ ಮತ್ತು ಶ್ರೀಕೃಷ್ಣರಲ್ಲಿಯೂ, ಆ ದೈಹಿಕ ರೂಪದ ಸೌಂದರ್ಯ ಪೂರ್ಣ ರೂಪದ್ದಾಗಿದೆ.

ಶಿವನ ಬ್ರಹ್ಮಾಂಶವು ಜ್ಞಾನ ಮತ್ತು ತಪಸ್ಸಿನೊಂದಿಗೆ ಕೂಡಿದೆ ಮತ್ತು ನಾರಾಯಣನ ಕ್ಷಾತ್ರಾಂಶವು ಭಕ್ತಿ, ಪ್ರೇಮ, ಕೃಪೆಗಳಿಮದ ಕೂಡಿದೆ. ಹಾಗಾಗಿ ಎರಡೂ ನಮ್ಮನ್ನು ಸಲಹಲು ಮತ್ತು ನಮಗೆ ಮಾರ್ಗದರ್ಶನ ನೀಡಲು ಬೇಕಾಗಿವೆ.

ಪುರಾಣಗಳಲ್ಲಿ ನಾರಾಯಣನೇ ಹೆಣ್ಣಿನ ಸೌಂದರ್ಯ ಪಡೆದು ಬಂದ ಉದಾಹರಣೆಗಳಿವೆ. ಆ ಸೌಂದರ್ಯಕ್ಕೆ ಶಿವನ ಕಟ್ಟುನಿಟ್ಟಿನ ಮನಸ್ಸನ್ನೂ ಸೆಳೆಯುವ ಯೋಗ್ಯತೆ ಇತ್ತೆನ್ನಲಾಗಿವೆ. ನಾರಾಯಣನ ಈ ದಯಾಪೂರ್ಣ ಸೊಬಗು ಮತ್ತು ಶಿವನ ಪವಿತ್ರ ಜ್ಞಾನ ಎರಡೂ ಸೇರಿದಾಗ, ಒಂದು ತೇಜಸ್ಸು ಕಾಣಿಸಿಕೊಂಡಿತು.

ಈ ತೇಜಸ್ಸಿನಿಂದ ಅಯ್ಯಪ್ಪನ್ ಹುಟ್ಟಿ ಬಂದನು. ಅವನಿಗೆ ಅಯ್ಯನಾರ್, ಶಾಸ್ತ, ಹರಿಹರಪುತ್ರ ಎಂಬ ಹೆಸರುಗಳೂ ಇವೆ.

ಅಯ್ಯನ್ ಎಂಬುದು ಆರ್ಯನ್ ಎಂಬ ಪದದ, ಹದೆಗೆಟ್ಟ ಪದ. ಆರ್ಯನ್ ಎಂಬ ಪದಕ್ಕೆ ಭಕ್ತಿಯೋಗ್ಯ ವ್ಯಕ್ತಿ ಎಂಬಂಥವಿದೆ.

ಅಯ್ಯನಾರ್, ಶಿವನ ಮೂರನೆಯ ಮಗನೆಂದು ಪರಿಗಣಿಸಲಾಗಿದೆ. ಪಿಳ್ಳೈಯಾರ್ (ಗಣೇಶ) ಮತ್ತು ಕುಮಾರನ್ (ಕಾರ್ತಿಕೇಯ) ಇಬ್ಬರೂ ಶಿವನ ಮಕ್ಕಳೇ. ಎರಡು ಹೆಸರುಗಳೂ 'ಮಗು' ಎಂಬರ್ಥವನ್ನೇ ನೀಡುತ್ತದೆ.

ಅಯ್ಯನಾರ್ ತನ್ನ ದೇಹದಲ್ಲಿ, ಶಿವ ಮತ್ತು ವಿಷ್ಣು ಇಬ್ಬರ ಗುಣಗಳನ್ನೂ ಮೈಗೂಡಿಸಿಕೊಂಡಿದ್ದಾನೆ.

ದಕ್ಷಿಣದಲ್ಲಿ ಅಯ್ಯನಾರ್‌ಗಾಗಿ ದೇವಾಲಯುಗಳನ್ನು ನಿರ್ಮಿಸಿದ್ದಾರೆ. ತಮಿಳುನಾಡಿನಲ್ಲಿ ಮತ್ತು ಹೆಚ್ಚಾಗಿ ಕೇರಳದಲ್ಲಿ ಅಯ್ಯನಾರ್‌ನ ದೇವಾಲಯಗಳಿವೆ. ಅವನು ನಮ್ಮನ್ನು ಕಾಯುತ್ತಾನೆ, ಕೆಟ್ಟ ಶಕ್ತಿಗಳಿಂದ ನಮ್ಮನ್ನು ರಕ್ಷಿಸುತ್ತಾನೆ. ಜೊತೆಗೆ ನಮಗೆ ಜ್ಞಾನದ ಸಹಜ ಸಾಮರ್ಥ್ಯ ನೀಡಿ, ಮುಕ್ತಿಯ ಕಡೆಗೊಯ್ಯುತ್ತಾನೆ.

ಒಂದು ಕಡೆ ರಾಜ್ಯಾಂಗವು ವಾಕ್ ಸ್ವಾಂತಂತ್ರ್ಯ ನೀಡಿರುವುದರಿಂದಾಗಿ ಕೆಲವರು ಜನಗಳಲ್ಲಿ ನಾಸ್ತಿಕತೆಯನ್ನು ಹರಡಲು ಪ್ರಯತ್ನಿಸುತ್ತಿದ್ದರೆ, ಅಯ್ಯಪ್ಪನನ ಮೇಲಿನ ಭಕ್ತಿ, ಕ್ರಮೇಣ ವೃದ್ಧಿಸುತ್ತಲೇ ಇರುವುದಂತೂ ಅತ್ಯಂತ ಗಮನಾರ್ಹ.

ದೂರದ ಕೇರಳದಿಂದ, ಅಯ್ಯಪ್ಪನ್, ತನ್ನ ಪ್ರಭಾವದ ವಲಯವನ್ನು ಅನುಕ್ರಮವಾಗಿ ಹೆಚ್ಚಿಸುತ್ತಿದ್ದಾನೆ.

ಇದೊಂದು ಸ್ಫೂರ್ತಿದಾಯಕ ಚಿಹ್ನೆ ಮತ್ತು ದೇವವಿರುದ್ಧ ಪ್ರಚಾರಕ್ಕೆ ನಿಖರವಾದ ಪ್ರತ್ಯುಪಾಯ.

ಭಗವಂತನ ಕೃಪೆಗಾಗಿ ಬೇಡಿಕೊಳ್ಳುವಾಗ, ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸಿದರೆ, ನಮಗೆ ಗೆಲುವು ಮತ್ತು ಯಶಸ್ಸು ಖಚಿತ.



# ಮುನ್ನುಡಿ

ಸ್ವಾಮಿ ಅಯ್ಯಪ್ಪನಿಗೆ, ಹರಿಹರರ ಪುತ್ರನಿಗೆ, ಎಲ್ಲಾ ಹೃದಯಗಳಲ್ಲಿರುವವನಿಗೆ, ಎಲ್ಲರ ಹೃದಯಗಳನ್ನಾಳುವ ಅಂತರಾತ್ಮನಿಗೆ, ಕಾಲಾತೀತವಾಗತೀತ ಕಾರಕ ಬ್ರಹ್ಮನಿಗೆ ಜಯವಾಗಲಿ. ಅವನಿಗೆ ನನ್ನ ನಮಸ್ಕಾರಗಳು.

ಬಹಳ ಹಿಂದಿನಿಂದಲೂ ಶಬರಿಮಲೈ ಎಂಬ ಸ್ಥಳ, ದಕ್ಷಿಣ ಭಾರತದ ಕೇರಳ ರಾಜ್ಯದಲ್ಲಿದ್ದು, ಅಸಂಖ್ಯಾತ ಭಗವದ್ ಭಕ್ತರಿಗೆ ಶ್ರದ್ಧಾಕೇಂದ್ರವಾಗಿದೆ ಮತ್ತು ಸ್ಫೂರ್ತಿದಾಯಕದ್ದಾಗಿದೆ. ಸ್ವಾಮಿ ಅಯ್ಯಪ್ಪನ ಹೆಚ್ಚಿನ ಲೀಲೆಗಳು ದಕ್ಷಿಣ ಭಾರತೀಯರಿಗೆ, ಅದರಲ್ಲಿಯೂ ಕೇರಳದವರಿಗೆ ತಿಳಿದಿವೆ. ಉತ್ತರ ಭಾರತದವರಿಗೆ ಮತ್ತು ವಿದೇಶೀಯರಿಗೆ, ಈ ಅಯ್ಯಪ್ಪನ ಸ್ಫೂರ್ತಿಯುಕ್ತ ಕಥೆಗಳೇ ತಿಳಿದಿಲ್ಲ. ಜೊತೆಗೆ ಅವನ ಕೃಪಾಶೀರ್ವಾದದ ಅದ್ಭುತಗಳು ಮತ್ತು ಅವನ ಅಸಂಖ್ಯಾತ ಭಕ್ತರ ತೀವ್ರವಾದ ಭಾವನಾಪೂರ್ಣ ಅನುರಕ್ತಿಯು ತಿಳಿದಿಲ್ಲ. ಪೂರ್ಣತೇಜ ಪರಮಾತ್ಮನು ಅದ್ವಿತೀಯನಾದರೂ, ಅವನ ದಿವ್ಯ ಪ್ರಕೃತಿಗಳಿಗನುಗುಣವಾಗಿ, ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಮನ್ನಣೆ ನೀಡಿ, ಅವನನ್ನು ಪೂಜಿಸಲಾಗುತ್ತದೆ. ಅಯ್ಯಪ್ಪ ಸ್ವಾಮಿಯ ಪ್ರತಿಯೊಂದು ಗುಡಿಯೂ, ಭಕ್ತರಿಗೆ, ತನ್ನದೇ ಆದ ಒಂದು ವಿಶೇಷ ಸೊಬಗು, ಒಂದು ವಿಶೇಷ ಮಹಿಮೆ ಮತ್ತು ಒಂದು ವಿಶೇಷ ಪ್ರಾಮುಖ್ಯತೆಯನ್ನು ನೀಡುತ್ತದೆ.

ಈ ಪುಸ್ತಕವನ್ನು ರಚಿಸಿರುವ ಶ್ರೀ ಪೈಯ್ಯಪ್ಪನರು, ಇಂಗ್ಲಿಷ್ ಭಾಷೆಯ ಮೂಲಕ, ಜನಸಾಮಾನ್ಯರಿಗೆ ಭಗವಂತನ ಲೀಲೆಗಳನ್ನು ತಿಳಿಸಿ, ಒಂದು ಅಪ್ರತಿಮ ಸೇವೆಯನ್ನೇ ಸಲ್ಲಿಸಿದ್ದಾರೆ. ಸ್ವಾಮಿ ಅಯ್ಯಪ್ಪನ ಕಥೆಯನ್ನು ಅತ್ಯಂತ ಆಸಕ್ತಿಯುಕ್ತದ್ದಾಗಿಯೂ ಸ್ಫೂರ್ತಿದಾಯಕದ್ದಾಗಿಯೂ, ಪದವೀವೃದ್ಧಿದಾಯಕದ್ದಾಗಿಯೂ, ಚಿತ್ರಿಸಿದ್ದಾರೆ. ಸಾಹಿತ್ಯ ಸೌಂದರ್ಯದೊಂದಿಗೆ ಈ ಪುಸ್ತಕದಲ್ಲಿರುವ ಪ್ರತಿ ಸಾಲಿನಲ್ಲಿಯೂ ಭಕ್ತರ ಅಪಾರ ಭಕ್ತಿಯ ಘನತೆ ಎದ್ದು ಕಾಣುತ್ತದೆ ಮತ್ತು ಸ್ಥಿರ ಶ್ರದ್ಧೆ, ಆತ್ಮಸಾಕ್ಷಾತ್ಕಾರಕ್ಕಾಗಿ ಕುದಿಯುತ್ತಿರುವ ಆಕಾಂಕ್ಷೆಯ ಜೊತೆಗೆ ಪೂರ್ಣ ಅರ್ಪಣೆ ಹಾಗೂ ವೈರಾಗ್ಯಕ್ಕಾಗಿ ಕಾತರತೆಯೂ ಇದೆ.

ಸ್ವಾಮಿಯ ಕಥೆಯಲ್ಲಿ ಅಪ್ರತಿಮ ಸೊಬಗು ಮತ್ತು ವಿಶೇಷವಾದ ಮಾಧುರ್ಯ ಕಂಡುಬರುತ್ತದೆ.

ಭಗವಂತ ಚಿಕ್ಕ ಮಗುವಾಗಿ, ಪಂಪಾನದಿ ತೀರದಲ್ಲಿ ರಾಜ ರಾಜಶೇಖರನಿಗೆ ಹೇಗೆ ಕಾಣಿಸಿಕೊಂಡ, ಸಂತಾನಹೀನರಾಗಿದ್ದ ರಾಜ–ರಾಣಿಯರು ಮಣಿಕಂಠನನ್ನು ಹೇಗೆ ಬೆಳೆಸಿದರು, ಮಣಿಕಂಠ ತನ್ನ ಗುರುಪುತ್ರನಿಗೆ ಗುರುದಕ್ಷಿಣೆಯ ರೂಪದಲ್ಲಿ ಹೇಗೆ ವಾಕ್ ಶಕ್ತಿ ಮತ್ತು ಶ್ರವಣಶಕ್ತಿ ನೀಡಿದ, ಅವನ ಜೀವನವನ್ನೇ ಮುಗಿಸಲು ಆಸೆ ಪಟ್ಟ, ಹೊಟ್ಟೆ ಉರಿ ಇದ್ದ ರಾಣಿಗೆ ಅವನು ಹೇಗೆ ಚಿರತೆಯ ಹಾಲನ್ನು ಕರೆದುಕೊಟ್ಟ, ರಾಕ್ಷಸಿ ಮಹಿಷಿಯನ್ನು ಅವನು ಹೇಗೆ ನಾಶಮಾಡಿದ, ರಾಜನಿಗೆ ಹೇಗೆ ಅವನು ಅಮರತ್ವವನ್ನು ಕರುಣಿಸಿದನು, ಇತ್ಯಾದಿ ಅನೇಕ ಉಪಾಖ್ಯಾನಗಳು, ಭಗವಂತನ ಮಹಿಮೆಯನ್ನು ಸಾರುತ್ತವೆ.

ಗ್ರಂಥಕರ್ತರು ಭಗವಂತ ಅಯ್ಯಪ್ಪನ ಪೂಜೆಯ ವಿಧಾನಗಳ ಬಗ್ಗೆ ಮತ್ತು ಆ ಯಾತ್ರೆಯ ಗೂಢತತ್ವದ ಪ್ರಾಧಾನ್ಯತೆಯ ಬಗ್ಗೆ ಒಂದು ಸ್ಫೂರ್ತಿದಾಯಕ ಅಧ್ಯಾಯವನ್ನೇ ಬರೆದಿದ್ದಾರೆ. ಬ್ರಹ್ಮಚರ್ಯೆ, ಸ್ವಾರ್ಥರಹಿತ ಸೇವೆ, ಸಾತ್ವಿಕ ಆಹಾರ, ಎಲ್ಲವನ್ನೂ, ಭಗವಂತನ ದಿವ್ಯಮಂದಿರದ ಯಾತ್ರೆಯ ಸಿದ್ಧತೆಗಾಗಿ ಎಂದೇ ವಿವರಿಸಿದ್ದಾರೆ.

ಜೀವನ, ನಿಜವಾಗಿಯೂ ಯೋಗ ಮತ್ತು ಭಕ್ತಿಗಳ ಅಭ್ಯುದಯದ ಮೆಟ್ಟಿಲುಗಳ ಮೂಲಕ ಪರಮಾತ್ಮನತ್ತ ಹೋಗುವ ಆತ್ಮದ ಯಾತ್ರೆ. ಬಾಹ್ಯಯಾತ್ರೆಯು, ಅಂತರ್ ವಿಧಾನದ ಬಾಹ್ಯ ವಿಧಾನ. ಯಾತ್ರಿಕನಿಗೆ ಅಪಾರ ಶಕ್ತಿ ಶ್ರದ್ಧೆಗಳಿದ್ದರೆ, ದೇವಸ್ಥಾನದತ್ತ ಆತನಿಡುವ ಪ್ರತಿ ಹೆಜ್ಜೆಯೂ, ಒಳಹಾದಿಯು ಒಳತೊಂದರೆಗಳನ್ನು ನಾಶಪಡಿಸುತ್ತದೆ ಮತ್ತು ಭಗವಂತನ ದಿವ್ಯಧಾಮದ ಹತ್ತಿರಕ್ಕೆ ಅವನ ಆತ್ಮವನ್ನು ಸೆಳೆಯುತ್ತದೆ. ಪೂಜೆಯ ವಿವಿಧ ವಿಧಾನಗಳು ಎಂದರೆ ತುಪ್ಪದಿಂದ ತುಂಬಿದ ತೆಂಗಿನಕಾಯನ್ನು ಎತ್ತಿಕೊಂಡು ಹೋಗುವುದು ಇತ್ಯಾದಿ, ಒಂದು ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಹೀಗೆ ಎಲ್ಲದರ ಬಗ್ಗೆಯ ಅರಿವು, ರಸ್ತೆಯಲ್ಲಿ ಉಂಟಾಗುವ ಬೌದ್ಧಿಕ ಆಸಕ್ತಿಯನ್ನು ತೃಪ್ತಿಪಡಿಸಲು ಅತ್ಯಂತ ಸಹಾಯಕದ್ದಾಗಿರುತ್ತದೆ.

ಸಾಂಸಾರಿಕ ಕೋಶಗಳ ಆಸಕ್ತಿಗಳ ಹಿಂದೆ, ಪ್ರಪಂಚದಾದ್ಯಂತ ಆತ್ಮ ಓಡಾಡುತ್ತದೆ. ವ್ಯಕ್ತಿಯು, ಭಗವಂತನ ದಯೆಯನ್ನು ಪಡೆಯಲು ತನ್ನ ಹೃದಯವನ್ನು ಭಗವದ್ಭಕ್ತಿ, ಪೂಜೆ ಮತ್ತು ಕಟ್ಟುನಿಟ್ಟಿನ ಅಭ್ಯಾಸಗಳಿಂದ ಶುಚಿಗೊಳಿಸಿಕೊಳ್ಳಬೇಕು. ಹೃದಯದ ಅನೈತಿಕತೆಗಳನ್ನೆಲ್ಲಾ ಅಳಿಸುವುದು, ಬಂಧನಗಳ ಸಂಕೋಲೆಗಳನ್ನೆಲ್ಲಾ ಬಿಚ್ಚುವುದು ಮತ್ತು ಅಮರತ್ವದ ಸನ್ನಿಧಿಗೆ ಆತ್ಮವನ್ನೊಯ್ಯುವುದು ಎಲ್ಲವೂ ಭಗವಂತನ ಆಶೀರ್ವಾದವೇ. ಅದು ಶ್ರದ್ಧೆ ಮತ್ತು ಆಕಾಂಕ್ಷೆಗಳೆಂಬ ಹೊಳಪಿನ ರೆಕ್ಕೆಗಳನ್ನು ಹೊಂದಿರುತ್ತದೆ. ಇದೇ ಭಗವದ್ಬೋಧನೆಗಳ ಸಾರ.

ಆಧ್ಯಾತ್ಮಿಕ ಸಾಧನೆಗಳ ಬಗ್ಗೆಯ ಸಾಮಾನ್ಯ ಸೂಚನೆಗಳು ಈ ಪುಸ್ತಕದಲ್ಲಿ ತುಂಬಿವೆ. ಆಸೆಯ ಬಗ್ಗೆ ಮೋಡಿ ಮಾಡುವ ಶಕ್ತಿ ಮತ್ತು ಅದರ ಕೇಡಿಗ ಪರಿಣಾಮಗಳನ್ನೂ ಸಾಕಷ್ಟು ಚಿತ್ರಿಸಲಾಗಿದೆ. ಹೊಟ್ಟೆ ಕಿಚ್ಚು, ಕೋಪ, ಅಪವಿತ್ರತೆ, ಮತ್ತು ಹೃದಂಯದ ಇತರ ಹಿಂಸಾತ್ಮಕ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಹಿಡಿತದಲ್ಲಿಟ್ಟುಕೊಳ್ಳಬೇಕು ಎನ್ನುವುದಕ್ಕಿಂತ, ಭಗವಂತನ ಬಗ್ಗೆ ನಿಜವಾದ ಭಕ್ತಿ ಬೆಳೆಸಿಕೊಳ್ಳಲು ಹೃದಯವನ್ನೇ ಅಳಿಸಿಹಾಕಬೇಕು ಎನ್ನುವುದು ಸರಿಯಾಗಿರುತ್ತದೆ. ಬೆಳೆಸಿಕೊಳ್ಳಲು ಹೃದಯವನ್ನೇ ಅಳಿಸಿಹಾಕಬೇಕು ಎನ್ನುವುದು ಸರಿಯಾಗಿರುತ್ತದೆ.

ಭಕ್ತಿ ಸಾಹಿತ್ಯದ ಬಗ್ಗೆಯ ಒಂದು ಮನೋಜ್ಞವಾದ ಪುಸ್ತಕವಿದು, ಎಂಬುದರಲ್ಲಿ ಅನುಮಾನವೇ ಇಲ್ಲ. ಇದರ ಪ್ರತಿದಿನದ ಸ್ವಾಧ್ಯಾಯವೂ ಅತ್ಯಂತ ಶುಭಕರವಾದದ್ದು. ಇದು ಎಲ್ಲರಿಗೂ ಸ್ಫೂರ್ತಿದಾಯಕವಾದ ಪುಸ್ತಕ. ಈ ಸುಂದರವಾದ ಪುಸ್ತಕದಲ್ಲಿ ಭಗವದ್ಭಕ್ತರು ಒಂದು ಅಪೂರ್ವವಾದ ಖಜಾನೆಯನ್ನೇ ಕಂಡುಕೊಳ್ಳುತ್ತಾರೆ ಎಂದು ಭಾವಿಸಿದ್ದೇನೆ. ಈ ಪುಸ್ತಕದ ಲೇಖಕರಿಗೆ ದೀರ್ಘ ಆಯಸ್ಸು, ಶಾಂತಿ, ಸಮೃದ್ಧಿ, ಎಲ್ಲಾ ವಿಷಯಗಳಲ್ಲಿಯೂ ಗೆಲುವು, ಅಮರತ್ವ ಮತ್ತು ಶಾಶ್ವತ ಸ್ವರ್ಗಸುಖವನ್ನು ಅಯ್ಯಪ್ಪ ನೀಡಲಿ. ಭಗವಂತ ಅಯ್ಯಪ್ಪನ ಆಶೀರ್ವಾದಗಳು, ನಮ್ಮೆಲ್ಲರ ಮೇಲೂ ಇರಲಿ.

**ಸ್ವಾಮಿ ಶಿವಾನಂದ ಜೀ**
ಋಷಿಕೇಶ



# ಪರಿವಿಡಿ


| | | |
|---|---|---|
| | ಮುನ್ನುಡಿ | v |
| | ಸಂದೇಶ | vii |
| | ಹಾರೈಕೆ | viii |
| | ಪ್ರಾಸ್ತಾವಿಕ ನುಡಿ | ix |
| | ಪೀಠಿಕೆ | xi |
| | ಅರಿಕೆ | xiv |
| | ಕುಲಪತಿಗಳ ಪ್ರಸ್ತಾವನೆ | xv |
| | ಶುಭ ಕೋರಿಕೆ | xvii |
| | ಮುನ್ನುಡಿ | xix |
| ೧. | ವಾಗ್ದಾನ ಉಳಿಸಿಕೊಂಡದ್ದು | ೧ |
| ೨. | ಭಗವಂತನ ಅವತಾರ | ೫ |
| ೩. | ಮಣಿಕಂಠ | ೮ |
| ೪. | ವರಗಳು ಮತ್ತು ನಿಗೂಢತತ್ವಗಳು | ೧೫ |
| ೫. | ಚಿರತೆಗಳು! | ೨೬ |
| ೬. | ಶಬರಿಮಲೈ ಮೇಲೆ ದೇವಸ್ಥಾನ | ೩೧ |
| | ಪರಿಶಿಷ್ಟ | ೪೦ |

Blank

# ಧರ್ಮಶಾಸಕ ಅಯ್ಯಪ್ಪನ್

# ೧. ವಾಗ್ದಾನ ಉಳಿಸಿಕೊಂಡದ್ದು

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।**
**ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥**

ಎಲ್ಲಾ ಧರ್ಮಗಳನ್ನೂ ತ್ಯಜಿಸಿ, ನನಗೆ ಶರಣಾಗು, ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಮುಕ್ತನಾಗಿಸುತ್ತೇನೆ. ದುಃಖ ಪಡಬೇಡ.

ಭಗವಂತನ ಬಾಯಿಂದಲೇ ಹೊರಬಂದ ಈ ಪದಗಳು ಒಂದು ಕರಾರುವಾಕ್ಕಾದ ವಾಗ್ದಾನ. ಅದು ನಿಸ್ಸಂದಿಗ್ಧವಾದ ಮತ್ತು ದೃಢವಾದ ನಿಯಮ. ನಾವು ಅವನಲ್ಲಿ ಶರಣಾಗತರಾದಾಗ, ಪಾಪಗಳು ಎಷ್ಟೇ ಘೋರವಾಗಿದ್ದರೂ, ಅವುಗಳಿಂದ ಮುಕ್ತಿ ನಿಶ್ಚಿತ. ಈ ಶ್ಲೋಕವಿಲ್ಲದೇ ಒಂದು ದಿನವೂ ಕಳೆಯುವುದಿಲ್ಲ. ಹಿಂದೂಗಳ ಮನೆಗಳಲ್ಲಿ ಹೇಳಲ್ಪಡುವ ಈ ಶ್ಲೋಕ ಅರ್ಥದಿಂದ ತುಂಬಿದೆ. ಆದರೆ ಭಗವಂತನು, ಅದನ್ನು ಗಿಣಿಗಳಂತೆ ಬಾಯಿಯಲ್ಲಿ ಹೇಳಿಕೊಳ್ಳುವುದಕ್ಕಾಗಿ ಮಾತ್ರವೆಂದು ನೀಡಿಲ್ಲ. ಅವು ದಿವ್ಯ ಶಬ್ದಗಳು. ಅವುಗಳ ನಿಜವಾದ ಅರ್ಥ ಅರಿತುಕೊಂಡು, ಅದರಂತೆಯೇ ಜೀವನ ಸಾಗಿಸಲು ಭಗವಂತನಿಗೆ ಹೇಳಿರುವ ಮಾತುಗಳು. ಅದರಿಂದ, ಜನರು ಪ್ರಾಪಂಚಿಕತೆಯ ರಾಡಿಯಲ್ಲಿ ಆಳವಾಗಿ ಅಡಗಿಹೋಗದೆ, ಪಾಪಮುಕ್ತರಾಗಿ, ಭಗವಂತನಲ್ಲಿ ಚಿರಸ್ಥಾಯಿಯಾಗಿ ಐಕ್ಯರಾಗಲು ಸಾಧ್ಯ.

ಭಗವಂತನಲ್ಲಿ ಆಶ್ರಯ ಪಡೆಯಲು ಇರುವ, "ಮಾಮೇಕಂ ಶರಣಂ ವ್ರಜ" ಎಂಬ ಕರೆಯ ಹಿಂದೆ, ಎಲ್ಲಾ ಧರ್ಮಗಳನ್ನೂ ಪರಿತ್ಯಜಿಸು ("ಸರ್ವಧರ್ಮಾನ್ ಪರಿತ್ಯಜ್ಯ") ಎಂದೂ ಹೇಳಲಾಗಿದೆ. ಹಾಗಾದರೆ ಈ ಧರ್ಮಗಳು ಯಾವುವು ಮತ್ತು ಭಗವಂತನು ನಮ್ಮನ್ನೇ ಅವುಗಳನ್ನು ತ್ಯಜಿಸಲು ಯಾಕೆ ಹೇಳುತ್ತಿದ್ದಾನೆ? ಆ ಎಲ್ಲಾ ಧರ್ಮಗಳೂ ಮನಸ್ಸಿನ, ಜೀವದ, ಮತ್ತು ದೇಹದ ಅಜ್ಞಾನದ ಪ್ರಜ್ಞೆಯುಳ್ಳವು. ಸಮಾಜವು ತನ್ನ ಕೈಕೆಳಗಿನ ಜನರ ಮೇಲೆ ಹೊರಿಸಿದ ಅನೇಕ ಕಾನೂನುಗಳು, ಮಟ್ಟಗಳು ಮತ್ತು ನಿಯಮಗಳನ್ನು ಸಮಾಜದ ಮನುಷ್ಯನೇ ಕಲ್ಪಿಸಿಕೊಂಡಂತೆ, ವಿಧಿಸದೆ, ಅವೆಲ್ಲವೂ ದಿವ್ಯಕ್ಷದ ಪ್ರಪಂಚದಲ್ಲಿ ಅನವಶ್ಯಕ. ಅವು ಒಂದು ಶಾಶ್ವತ

ಧರ್ಮದ ಅರಿವಿನತ್ತದ ವಿಧಾನವನ್ನೂ ರಚಿಸುವುದಿಲ್ಲ. ಶಾಶ್ವತ ಧರ್ಮ ಎಂಬುದು ಅತ್ಯುನ್ನತವಾದ ಆಧ್ಯಾತ್ಮಿಕ ದಿವ್ಯ ಪ್ರಜ್ಞೆ. ಆದ್ದರಿಂದ ಬೇರೆ ಎಲ್ಲವನ್ನೂ ತಳ್ಳಿಹಾಕಬೇಕು. ಕೆಳಮಟ್ಟದ ಅಜ್ಞಾನದ ಪ್ರಜ್ಞೆಯ ಧರ್ಮಗಳನ್ನು ಕಡೆಗಾಣಿಸದೇ ವಿಧಿಯಿಲ್ಲ. ಏಕೆಂದರೆ ಅವು ಕೇವಲ ಜೀವನದ ವಿಧಾನಗಳಷ್ಟೇ. ಅದನ್ನು ತಳ್ಳಿಹಾಕಿ, ನಾವು ದಿವ್ಯಾತ್ಮನಿಗೆ ಶರಣಾಗಿ ನಮ್ಮ ಎಲ್ಲಾ ಪಾಪಗಳನ್ನು ಪರಿಹರಿಸಿಕೊಂಡು, ಶಾಶ್ವತ ಧರ್ಮದ ಅರಿವಿನತ್ತ ಸಾಗಬೇಕು. ಆದ್ದರಿಂದಲೇ ಭಗವಂತ, "ಎಲ್ಲಾ ಧರ್ಮಗಳನ್ನೂ ತ್ಯಜಿಸಿ, ನನ್ನಲ್ಲಿ ಶರಣಾಗಿ. ನಾನು ನಿಮ್ಮನ್ನು ಪಾಪಗಳಿಂದ ಮುಕ್ತರನ್ನಾಗಿಸುತ್ತೇನೆ. ಅತ್ಯುಕ್ತರಾಗಬೇಡಿ" ಎಂದಿದ್ದಾನೆ.

ಭಗವಂತನ ವಾಗ್ದಾನವನ್ನು ಯಾರಾದರೂ ಅರಸಿಕೊಂಡು ಹೋಗಿದ್ದಾರೆಯೇ, ಎಂದರೆ, ನನ್ನ ಉತ್ತರ 'ಹೌದು' ಎಂದೇ ಇದೆ. ಶಬರಿಮಲೈ ಎಂಬ ಬೆಟ್ಟದಲ್ಲಿ ಭಗವಂತ ಅಯ್ಯಪ್ಪನ (ಭಗವಾನ್ ಧರ್ಮಶಾಸ್ತ್ರ) ದೇವಸ್ಥಾನವಿದೆ. ಅಲ್ಲಿ ಮನುಷ್ಯರು ಅದರ ಸಾರ್ಥಕತೆಯನ್ನು ಅರಸುತ್ತಾರೆ.

ಮುಂದುವರಿಯುವುದಕ್ಕಿಂತ ಮುಂಚೆ, ನಾವು ಭಗವಂತನ ಈ ರೀತಿಯ ತೋರಿಕೆಯ ವಿರೋಧದ ಕರೆಯ ಬಗ್ಗೆ, ಮಾನವರಾಗಿ, ರಾಜಿ ಮಾಡಿಕೊಳ್ಳ ಬೇಕಾಗಿದೆ. ಮತ್ತೊಂದೆಡೆ 'ಧರ್ಮಶಾಸ್ತ್ರ'ದ ಬಗ್ಗೆಯ ಮೇಲ್ಮನವಿ ಮಾಡುತ್ತಾ, ಧರ್ಮದ ಪರಿಪಾಲನೆಯ ಬಗ್ಗೆ ಬಲವಂತ ಮಾಡುತ್ತಾನೆ. 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬ ಬೋಧೆಯ ಸತ್ಯವನ್ನು ವಿಶದವಾಗಿ ವಿವರಿಸಲು, ಅತ್ಯಂತ ಎಚ್ಚರಿಕೆಯ ವ್ಯಾಸಂಗವೇ ಬೇಕು. ಈ ರೀತಿಯಾಗಿ ನಾವು ಶಬರಿಮಲೈ, ಅದರಲ್ಲಿನ ದೈವ ಮತ್ತು ಆ ದೈವದ ಹಿರಿಮೆ ಎಲ್ಲವನ್ನೂ ಇಲ್ಲಿ ಅರಿಯಬೇಕಾಗಿದೆ.

ಧರ್ಮಶಾಸ್ತ್ರ ಎಂಬ ಹೆಸರೇ ಅತ್ಯಂತ ಅರ್ಥವತ್ತಾದದ್ದು. ಧರ್ಮ ಎಂಬ ಪದ ಏಕೈಕವಾಗಿ ಸೂಕ್ತ. ಧರ್ಮಗಳನ್ನೆಲ್ಲಾ ಅನುಸರಿಸಬೇಕು ಎಂದು ಅವನು ಬಲವಂತ ಮಾಡಿದಿದ್ದರೆ, ಎಂದರೆ ಒಂದಕ್ಕಿಂತ ಹೆಚ್ಚು ಧರ್ಮಗಳ ಬಗ್ಗೆ ಹೇಳಿದ್ದಿದ್ದರೆ, ಅವನು ತನ್ನ ಹೆಸರಿಗೆ 'ಧರ್ಮಾನ್' ಎಂಬ ಪದವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದನು. ನಿಸ್ಸಂಶಯವಾಗಿ ಅವನು, ಮನುಷ್ಯನ ಏಕೈಕ ಧರ್ಮ, ಏಕೈಕ ಶಾಶ್ವತ ಧರ್ಮದ ಬಗ್ಗೆ ಬಲವಂತ ಮಾಡುತ್ತಿದ್ದಾನೆ. ಎಂದರೆ, ಅತ್ಯುತ್ತಮ ಆಧ್ಯಾತ್ಮಿಕ ಪ್ರಜ್ಞೆಯ ಅರಿವೇ, ತನ್ನ ಬೋಧನೆಗಳನ್ನು ಅನುಸರಿಸಿ ಪಡೆಯಬೇಕಾದಂಥ (ಈ ಜೀವನದ) ಏಕೈಕ ಗುರಿ.

ಶಬರಿ ಬೆಟ್ಟಕ್ಕೆ ಯಾತ್ರೆ ಹೋಗುವಾಗ ಸಾಕಷ್ಟು ಉಗ್ರ ಸಂಯಮಗಳನ್ನು ಪಾಲಿಸಬೇಕು. ನಮಗೆ ಅದರಿಂದ ಒಳ್ಳೆಯದಾಗಬೇಕು ಎಂದಿದ್ದರೆ, ಪರಮಾತ್ಮನೇ ಅಪ್ಪಣೆ ಮಾಡಿ ತಿಳಿಸಿರುವಂತೆ, ಆ ಪಾಲನೆ ಅತಿ ಮುಖ್ಯ. ಯಾತ್ರೆಗೆ, ಆ ತಪಶ್ಚರ್ಯೆಗಳು ತಳಪಾಯ ಅಥವಾ ಅಡಿಗಲ್ಲು. ಹೇಗೆ ಬಲವತ್ತಾದ ಅಡಿಪಾಯವಿಲ್ಲದೆ



ಮಹಾಸೌಧ ನಿಲ್ಲಲಾರದೋ, ಅದೇ ರೀತಿ, ಸಂಯಮಗಳನ್ನು ವಿಧಿವತ್ತಾಗಿ ಪಾಲಿಸದಿದ್ದರೆ, ಬೆಟ್ಟವನ್ನೇರಿದ ಯಾತ್ರೆಯೂ ಫಲಪ್ರದವಾಗಿರುವುದಿಲ್ಲ.

ಶಬರಿ ಬೆಟ್ಟದ ಮೇಲಿನ ದೇವಸ್ಥಾನ ಹೇಗೆ ಅಸ್ತಿತ್ವಕ್ಕೆ ಬಂತು? ಅದನ್ನು ಕಟ್ಟಿಸಿದವರು ಯಾರು? ಅದರಲ್ಲಿನ ಮುಖ್ಯ ದೇವರಾದ ಅಯ್ಯಪ್ಪಸ್ವಾಮಿ ಯಾರು? ಪುರಾಣಗಳಲ್ಲಿ ಎಲ್ಲಿಯೂ ಈ ಹೆಸರು ಕಂಡುಬರುವುದೇ ಇಲ್ಲ. ಅವನು ಕೇವಲ ಕೇರಳದವರಿಗೆ ಮಾತ್ರ ತಿಳಿದಿರುವ ದೇವರಾಗಿದ್ದಾನೆ ಎನ್ನಿಸುತ್ತದೆ. ಇತ್ತೀಚೆಗೆ ಆ ದೇವಸ್ಥಾನ, ಅಕ್ಕಪಕ್ಕದ ರಾಜ್ಯಗಳಲ್ಲಿಯೂ ಹೆಸರು ಗಳಿಸಿತು, ಜನರ ಮೆಚ್ಚುಗೆ ಗಳಿಸಿತು.

ಭಗವಂತ ಅಯ್ಯಪ್ಪನ್, ಧರ್ಮಶಾಸ್ತ್ರ ಭಗವಂತನೇ ಆಗಿದ್ದಾನೆ. ಧರ್ಮಶಾಸ್ತನ ಅವತಾರವು ಒಂದು ಅಂಗೀಕೃತ ಅವತಾರ ಎಂದು ಪುರಾಣಗಳು ಹೇಳಿವೆ. ಅವನನ್ನು, ಅವನ ಭಕ್ತರು, ಬಹಳಷ್ಟು ಹೆಸರುಗಳಿಂದ ಕರೆಯುತ್ತಾರೆ. ಅಂಥ ಒಂದು ಹೆಸರು, 'ಆರ್ಯ ತಾತ'. ತಾತ ಎಂದರೆ ಅಪ್ಪ, ಅಪ್ಪನ್, ತಂದೆ ಎಂದೆಲ್ಲಾ ಅರ್ಥವಿದೆ. ಆದ್ದರಿಂದ ಪ್ರಾಯಶಃ ಭಗವಂತನನ್ನು ಪ್ರೀತಿಯಿಂದ 'ಆರ್ಯಅಪ್ಪ' ಎನ್ನುತ್ತಿದ್ದಿರಬಹುದು. ಹಾಗಿದ್ದರೆ, ಆರ್ಯ ಅಪ್ಪ ಎಂಬ ಪದ, ಆಡುಮಾತಿನಲ್ಲಿ "ಅಯ್ಯಪ್ಪ", "ಅಯ್ಯಪ್ಪನ್" ಎಂದಾಗಿರಲೂ ಸಾಧ್ಯ.

ಅವನು ಕೇರಳೀಯರ ದೇವರೇ ಆಗಿದ್ದಾನೆ. ಏಕೆಂದರೆ ಅವನು ತನ್ನ ಮಾನವ ರೀತಿಯ ನಾಟಕವನ್ನು ಆಡಿದ್ದೂ ಕೇರಳದಲ್ಲಿಯೇ. ಜನರು ಎಂದೂ ನೋಡಿರದಿದ್ದ ದಿವ್ಯ ಲಕ್ಷ್ಯವನ್ನು ಪೂರೈಸಲು ಅವನು ಅವತಾರ ತಾಳಿದನು ಎಂದು ನಾವು ಪುರಾಣಗಳಲ್ಲಿ ಓದಿದ್ದೇವೆ. ಅಯ್ಯಪ್ಪನಿಂದ ಮನುಷ್ಯಾತೀತವಾದದ್ದೇನೂ ಬಹಿರಂಗವಾಗಿ, ಜನರ ಮೆಚ್ಚಿಕೆಗಾಗಿ, ಏನೂ ನಡೆಯಲಿಲ್ಲ. ಕೇರಳದಲ್ಲಿ ಅವತಾರ ಮಾಡಿದ್ದರಿಂದ, ಅವನು ಅಲ್ಲಿನವರಿಗೇ ಹೆಚ್ಚು ತಿಳಿದವನಾಗಿದ್ದಾನೆ ಎಂದರೆ ಆಶ್ಚರ್ಯವೇನೂ ಇಲ್ಲ.

ಕೇರಳದಲ್ಲಿ ಮಾತ್ರ ಅವನು ವಿಶ್ವವ್ಯಾಪಿ ಗುರುವಾಗಿ ಪ್ರಸಿದ್ಧಿ ಪಡೆದಿದ್ದರೂ, ಅವನ ಪಾದಾರವಿಂದಗಳನ್ನು ಅರಸುವವರಿಗೆಲ್ಲ ಅಯ್ಯಪ್ಪ ತಂದೆಯಾಗಿದ್ದಾನೆ. ಅವನು ಕೇರಳದ ನದಿಯ ದಂಡೆಯ ಮೇಲೆ ಗಂಡು ಮಗುವಿನಂತೆ ಕಂಡುಬಂದನೋ ಅಥವಾ ಉತ್ತರ ಭಾರತದ ಗಂಗಾನದಿ ದಡದ ಮೇಲೆ ಕಾಣಿಸಿಕೊಂಡನೋ ಅಥವಾ ಪಂತಲಂ ಅರಮನೆಯಲ್ಲಿ ತನ್ನ ಮಾನವೀಯ ನಾಟಕ ಆಡಿದನೋ, ಅಥವಾ ಹಿಮಾಲಯದ ದೂರದ ಗುಡಿಸಲಿನಲ್ಲಿದ್ದನೋ ಎಂಬುದೆಲ್ಲಾ ಮುಖ್ಯವಲ್ಲ. ಜೊತೆಗೆ ವಾದಿಸಬೇಕಾದ ವಿಷಯವೂ ಅಲ್ಲ, ಅದು. ಏಕೆಂದರೆ, ನಮಗೆ ಬೇಕಾಗಿರುವುದು ಅವನ ಜನ್ಮಸ್ಥಳವಲ್ಲ ಅಥವಾ ಅವನ ಚಟುವಟಿಕೆಗಳ ವ್ಯೂಹವೂ ಅಲ್ಲ. ಬದಲಿಗೆ ಅವನ ವಿಶ್ವವ್ಯಾಪಿ ಬೋಧನೆ. ಅದನ್ನು

ಒಪ್ಪಿ, ಸಂಗ್ರಹಿಸಿಟ್ಟುಕೊಂಡು, ಅದರಂತೆ ನಡೆದರೆ ಉಂಟಾಗುವ ಪರಿಣಾಮಗಳು, ಮಾನವ ಜಾತಿಗೆ ಕೆಳಗಿನ ಮಟ್ಟದಿಂದ ದಿವ್ಯಪ್ರಜ್ಞೆಯವರೆಗೆ ಮಾರ್ಗದರ್ಶಕ ದೀವಿಗೆಗಳಾಗಿರುತ್ತವೆ. ಅವು ಧರ್ಮಗಳ ಅಂತರ್ಗತ, ಅಭೇದ್ಯ, ಪರಸ್ಪರ ಸಂಬಂಧವಿಲ್ಲದ ಅಂಕಣಗಳನ್ನು, ಅವರ ಸಿದ್ಧಾಂತಗಳನ್ನು, ರೀತಿನೀತಿಗಳನ್ನು ಒಡೆದು, ಪುನರ್ಜನ್ಮದ ಚಕ್ರಗತಿಯಿಂದ ಮನುಷ್ಯರನ್ನು ಪಾರಾಗಿಸುತ್ತವೆ. ವಿಷಯದ ಬಗ್ಗೆಯ ಮುಖ್ಯವಲ್ಲದ ಪ್ರಶ್ನೆಗಳನ್ನು ಮತ್ತೆ ಮತ್ತೆ ಬೇಜಾರು ತರುವಂತೆ ನೆನಪಿಸಿ ಕೊಳ್ಳುತ್ತಿದ್ದರಂತೂ, ನಮ್ಮನ್ನು ಪರಮಾತ್ಮನತ್ತದ ಹುಡುಕಾಟದತ್ತ ಕೊಂಡೊಯ್ಯುವುದೇ ಇಲ್ಲ. ಏಕೆಂದರೆ, ನಮ್ಮ ಗುರಿ ಅವನ ಕಥೆಯ ಬಗ್ಗೆಯ ವಿವರಗಳನ್ನು ಶೋಧಿಸುವದಂತೂ ಅಲ್ಲವೇ ಅಲ್ಲ. ಬದಲಿಗೆ ಅವನನ್ನು ಅರಿತುಕೊಳ್ಳುವುದಷ್ಟೇ ಆಗಿದೆ. ಅಯ್ಯಪ್ಪನ ದೇವಸ್ಥಾನಕ್ಕೆ ಹೋಗುವ ಕೋಟ್ಯಾಂತರ ಜನರ ಹೃದಯಗಳಲ್ಲಿ ಆಳವಾಗಿ ಬೇರುಬಿಟ್ಟಿರುವ ಆ ಪ್ರಭಾವಯುಕ್ತ ಆಸ್ಥೆಯನ್ನು ಅಳಿಸಿಹಾಕುವಂಥದ್ದು. ಈ ಭೂಮಿಯ ಮೇಲೆ ಯಾವದೂ ಇಲ್ಲ. ಏಕೆಂದರೆ, ಅವರೆಲ್ಲರೂ ತಮ್ಮದೇ ಆದ ರೀತಿಯಲ್ಲಿ ಗಳಿಸಿರುವ ಅನುಭವಗಳು ಮತ್ತು ಅವನ ಬೋಧನೆಯ ಪಾಲನೆಗಳು, ಅದರ ಸತ್ಯದ ಶಾಶ್ವತ ಕೀರ್ತಿಸ್ತಂಭಗಳಾಗಿ ಶಾಶ್ವತವಾಗಿ ನಿಲ್ಲುತ್ತವೆ. ಅವರ ಅನುಭವಗಳ ಮೂಲಕ, ಅಯ್ಯಪ್ಪನ ಇರವೂ ಸಹ, ಅನುಮಾನರಹಿತ ವಿಧಾನದಲ್ಲಿ ಸಾಧಿಸಲ್ಪಟ್ಟಿದೆ. ಅವರ ನಿಷ್ಠೆಯ ಶ್ರದ್ಧೆ, ಅಯ್ಯಪ್ಪನ ಅವತಾರದ ಬಗ್ಗೆ ಮತ್ತು ಭೂಮಿಯ ಮೇಲಿನ ಅವನ ಚಟುವಟಿಕೆಗಳ ಸತ್ಯದ ಬಗ್ಗೆ, ಪ್ರಮಾಣಿತ ಹೇಳಿಕೆ ನೀಡಲು, ಸಾಕಷ್ಟಿದೆ. ಅವನ ಬೋಧನೆಗಳನ್ನು ಒಪ್ಪಿಕೊಳ್ಳುವುದು ಎಂದರೆ ಅವನಿಂದ ಬಹುಮಾನವನ್ನು ಸ್ವೀಕರಿಸುವುದಷ್ಟೇ. ಅವನನ್ನೇ ಸ್ವೀಕರಿಸುವುದಲ್ಲ. ಕೊಡುವಾತನೇ, ಬಹುಮಾನದ ಮೌಲ್ಯವನ್ನು ವಿವರಿಸಬಲ್ಲ. ಅವನ ಬೋಧನೆಗಳನ್ನು ಸ್ವೀಕರಿಸುವಾಗ, ನಾವು, ಅವನನ್ನು ಅರಿಯಲು ಯತ್ನಿಸೋಣ. ಕೇವಲ ಗುರುವಾಗಿ ಮಾತ್ರ ಅರಿಯಲೆತ್ನಿಸದೆ, ಈ ಭೂಮಿಯಲ್ಲಿ ಅವತರಿಸಿ, ಮಾನವ ಜಾತಿಯನ್ನು ಪಾಪಗಳಿಂದ ಮುಕ್ತಗೊಳಿಸಲು, ಪವಿತ್ರವಾದ ಭೂತನಾಥಗೀತ ಎಂಬುದನ್ನೂ ಕೊಟ್ಟು ಆಶೀರ್ವದಿಸಿದ್ದಾನೆ ಎಂತಲೂ ತಿಳಿಯೋಣ.

* * * *



# ೨. ಭಗವಂತನ ಅವತಾರ

ಕೇರಳದ ನಡುವೆ ಇದ್ದ ‘ಪಂಕಳಂ’ ಎಂಬ ಚಿಕ್ಕ ಊರನ್ನು, ಸ್ವಾಮಿ ಅಯ್ಯಪ್ಪನ್ ಆಯ್ಕೆ ಮಾಡಿಕೊಂಡು, ಅಲ್ಲಿ ತನ್ನ ಮಾನವ ಶರೀರದ ಹನ್ನೆರಡು ವರ್ಷಗಳನ್ನು ಕಳೆದ ನಂತರ, ಭೂಮಿಯ ಮೇಲಿನ ತನ್ನ ದಿವ್ಯ ಕೆಲಸವನ್ನು ಪೂರೈಸಲಾರಂಭಿಸಿದನು. ಪುರಾಣ ಪ್ರಸಿದ್ಧ ಕಾಲದಲ್ಲಿ, ಪಂತಲಂ ಎಂಬುದೇ ಒಂದು ರಾಜ್ಯವಾಗಿತ್ತು. ಅದನ್ನು ರಾಜ ರಾಜಶೇಖರ ಆಳುತ್ತಿದ್ದನು. ನಂತರ ರಾಜ ಮಾರ್ತಾಂಡವರ್ಮನ ಆಳ್ವಿಕೆ ಆರಂಭವಾಯಿತು. ಆಗ ಆ ರಾಜ್ಯವು ಇತರ ಅಂಥವೇ ಚಿಕ್ಕ ರಾಜ್ಯಗಳನ್ನು ಸೇರಿಸಿಕೊಂಡು, ತಿರುವಾಂಕೂರು ಎಂಬ ಊರಾಯಿತು. ಅದು ಈಗ ಕೇರಳ ರಾಜ್ಯದ ಒಂದು ಅಂಗ.

ರಾಜಶೇಖರ ಧರ್ಮ ಪರಾಯಣ, ದಾನಶೂರ, ನ್ಯಾಯವಾದಿ ರಾಜನೂ ಭಗವದ್ಭಕ್ತನೂ ಆಗಿದ್ದನು. ಆದ್ದರಿಂದ ಅವನ ಪ್ರಜೆಗಳು ಅವನನ್ನು ಅತ್ಯಂತ ಗೌರವಿಸುತ್ತಿದ್ದರು.

ರಾಜದಂಪತಿಗಳಿಗೆ ಸಾಂಸಾರಿಕ ಸುಖಕ್ಕೇನೂ ಕಡಿಮೆ ಇಲ್ಲದಿದ್ದರೂ, ಅವರ ಸಂತಾನಹೀನತೆ ಅವರನ್ನು ಕಾಡುತ್ತಿತ್ತು. ರಾಜ್ಯಕ್ಕೆ ಉತ್ತರಾಧಿಕಾರಿ ಇಲ್ಲದಿರುವ ಚಿಂತೆ, ಅವರ ಮುಖಗಳಲ್ಲಿ ಎದ್ದು ಕಾಣಿಸುತ್ತಿತ್ತು. ಯಾವ ರಾಜನಿಗೆ ತಾನೇ, ಉತ್ತರಾಧಿಕಾರಿಯ ಚಿಂತೆ ಇರುವುದಿಲ್ಲ? ಸಾಮಾನ್ಯ ಮನುಷ್ಯರಿಗೇ ತಮ್ಮ ಆಸ್ತಿಗೆ ವಾರಸುದಾರನಿರಬೇಕು ಎನ್ನಿಸುತ್ತಿರುತ್ತದೆ, ಅಲ್ಲವೇ? ರಾಜ ತನ್ನ ಕಿರೀಟವನ್ನು ಯಾರಿಗೆ ಒಪ್ಪಿಸಬೇಕು? ತನ್ನ ಸರ್ಕಾರದ ನಿಯಂತ್ರಣಕ್ಕೆ ಅವನು ಯಾರನ್ನಾರಿಸಬೇಕು? ಇವು ಅವನಿಗೆ ನಿತ್ಯದ ಚಿಂತೆಗಳಾಗಿ ಕಾಡಿದವು. ಅವನು ಮತ್ತು ಅವನ ಹೆಂಡತಿ, ಚಿಂತೆಯಲ್ಲೇ ಸಮಯವನ್ನು ಕಳೆಯುತ್ತಿದ್ದರಾದರೂ, ಅವರು ತಮಗೆ ಒಬ್ಬ ಮಗನನ್ನು ನೀಡಲೆಂದೂ ಭಗವಂತನನ್ನು ನಿರಂತರವಾಗಿ ಬೇಡುತ್ತಿದ್ದರು. ಅವರ ಪ್ರಾರ್ಥನೆ ಎಷ್ಟು ಅತ್ಯಾಸಕ್ತಿಯದಾಗಿತ್ತು ಮತ್ತು ಸ್ವಯಂಪ್ರೇರಿತವಾಗಿತ್ತು ಎಂಬುದನ್ನು ಊಹಿಸಿಕೊಳ್ಳಲು ನಾವು ಓದುಗರಿಗೇ ಬಿಡುತ್ತೇವೆ. ಏಕೆಂದರೆ, ಅವರ ಆಸೆಯನ್ನು ಪೂರೈಸಲು, ಪರಮಾತ್ಮ ತಾನಾಗಿ ಧರೆಗಿಳಿದು ಬಂದನು. ಸಮಯ ಕಳೆದಂತೆಲ್ಲಾ, ಆ ಆಸೆಯು ರಾಜನ ಅಸ್ಮಿತೆಯನ್ನು ಮುಚ್ಚಿಹಾಕಿತು.

ಈ ಪ್ರಪಂಚದಲ್ಲಿ ಯಾರೂ ಸುಖವಾಗಿಲ್ಲ. ಏಕೆಂದರೆ ಆಸೆ, ಅದರಲ್ಲಿಯೂ ಅಂತ್ಯವೇ ಇಲ್ಲದ ಆಸೆ, ಸುಖಕ್ಕೆ ಅದೃಷ್ಟ ಸೂಚಕ, ಕೊನೆಯೇ ಇಲ್ಲದ ದುರ್ಗತಿಯ ಮೂಲ ಮತ್ತು ಒಂದು ಶಾಶ್ವತ ಶಾಪವೇ ಆಗಿರುತ್ತದೆ, ಮನುಷ್ಯನಿಗೆ.

ರಾಜಕುಮಾರರ ಮನರಂಜನೆಗಳು ಅನೇಕ ಇರಬಹುದು. ಆದರೆ, ಆಗಿನ ಕಾಲದಲ್ಲಿ ಅತ್ಯಂತ ಸಾಮಾನ್ಯವಾಗಿದ್ದದ್ದು ಎಂದರೆ ಬೇಟೆ. ರಾಜಶೇಖರ ಒಂದು ದಿನ ಬೇಟೆಗೆ ಹೊರಡಲು ನಿರ್ಧರಿಸಿ, ತನ್ನ ದಿವಾನ ಮತ್ತು ಇತರ ಬೇಟೆಗಾರರೊಂದಿಗೆ ಕಾಡಿಗೆ ಹೋದನು. ಆಗ ಅವನಿಗೆ, ಅಲ್ಲಿನ ಕಾಡುಮೃಗಗಳನ್ನು ಅಟ್ಟಿಸಿಕೊಂಡು ಹೋಗುವುದು, ಅತ್ಯಂತ ನವಚೈತನ್ಯ ಮೂಡಿಸುತ್ತಿತ್ತು.

ದಿನವಿಡೀ ಬೇಟೆ ಆಡಿ, ರಾಜ ಮತ್ತು ಅವನ ಗುಂಪು, ಸಂಜೆಯ ವೇಳೆಗೆ ಪಂಪಾನದೀ ತೀರಕ್ಕೆ ಬಂದಾಗ, ಸೂರ್ಯ ದಿಗಂತದ ಅಂಚಿನಲ್ಲಿದ್ದ. ತಣ್ಣನೆಯ ಗಾಳಿ ಬೀಸುತ್ತಿತ್ತು. ನದಿಯು ವಿವಿಧ ಕಡೆಗಳಿಂದ ಧುಮುಕುತ್ತಿದ್ದದ್ದು ಮತ್ತು ನದಿಯ ದಡದಲ್ಲಿದ್ದ ಗಿಡಗಳೆಲ್ಲವೂ ವರ್ಣರಂಜಿತ ಪುಷ್ಪಗಳಿಂದ ಶೋಭಿಸುತ್ತಿದ್ದದ್ದು, ಎರಡೂ ಬಾಯಾರಿ ಬಳಲಿದ್ದ ರಾಜನಿಗೆ ಮತ್ತು ಅವನ ಪರಿಜನರಿಗೆ ಒಂದು ಆಹ್ಲಾದಕರ ಸ್ವಾಗತ ನೀಡುತ್ತಿದ್ದಂತಿತ್ತು. ತಮ್ಮ ಬಾಯಾರಿಕೆಗಳನ್ನು ತೀರಿಸಿಕೊಂಡು ರಾಜನ ಪರಿವಾರದವರೆಲ್ಲರೂ ಅಲ್ಲಿನ ದಡದಲ್ಲೇ ಮಲಗಿದರು. ಆದರೆ, ರಾಜ, ಒಂಟಿ ಸ್ಥಳವನ್ನು ಹುಡುಕಿಕೊಂಡು ಹೋಗಿ ಅಲ್ಲಿ ಮಲಗಿದನು. ತನ್ನ ಪರಿವಾರದಿಂದ ದೂರವಾಗಿ ಮಲಗಿದ್ದ ರಾಜ, ಪ್ರಕೃತಿಯ ನಿಷ್ಕಳಂಕ ಸೌಂದರ್ಯವನ್ನು ಅನುಭವಿಸುತ್ತಾ ಕಲ್ಪನಾವಿಹಾರದಲ್ಲಿ ವಿಹರಿಸಲಾರಂಭಿಸಿದನಲ್ಲದೆ, ನಂತರ ವಿಚಾರಮಗ್ನನಾದನು. ಆಗ ಇದ್ದಕ್ಕಿದ್ದಂತೆ, ಅವನಿಗೆ, ಅಳು ಕೇಳಿಬಂತು, ಹತ್ತಿರದಲ್ಲಿಯೇ. ಅವನು "ಇದಂತೂ ಯಾವುದೋ ಮಗುವಿನ ಅಳು. ನನಗಂತೂ ಖಚಿತವಾಗಿದೆ" ಎಂದುಕೊಂಡನು. ಅವನು ತಕ್ಷಣ ಎದ್ದು, ಆ ಅಳು ಕೇಳಿಸುತ್ತಿದ್ದತ್ತ ಹೊರಟನು. ಅವನ ಹಿಂದೆ ದಿವಾನನೂ ಹೋದನು. ಸ್ವಲ್ಪ ದೂರ ಹೋಗುವಷ್ಟರಲ್ಲಿ, ಅವನಿಗೆ ಒಂಟಿಯಾದ ಸುಂದರವಾದ ಗಂಡು ಮಗುವೊಂದು, ನಿಸ್ಸಹಾಯಕನಂತೆ ಬೆಟ್ಟದ ಮೇಲೆ ಮಲಗಿ, ತನ್ನ ಎರಡೂ ಕಾಲುಗಳನ್ನು ಗಾಳಿಯಲ್ಲಿ ಒದೆಯುತ್ತಿದ್ದದ್ದು ಕಾಣಿಸಿತು. ಆ ಮಗುವಿನ ಮುಖದ ತೇಜಸ್ಸು, ಸಾವಿರ ಸೂರ್ಯರ ತೇಜಸ್ಸಿಗಿಂತಲೂ ಹೆಚ್ಚಾಗಿತ್ತು. ರಾಜನ ಮಾನವೀಯತೆ ಮಿಡಿಯಿತು. ಅವನಿಗೆ ಸಂತಾನವೂ ಇರಲೇ ಇಲ್ಲ. ಅಲ್ಲವೇ? ಹಾಗಾಗಿ ಅವನು ಭಾವುಕನಾದ. "ಈ ಘೋರ ಅರಣ್ಯದಲ್ಲಿ ಇಂಥ ಕಂದನನ್ನು ಬಿಟ್ಟು ಹೋಗಿರುವವರು ಎಂಥಾ ಕ್ರೂರಿಗಳು ಮತ್ತು ಹೃದಯಹೀನರಿರಬೇಕು?" ಎಂದುಕೊಂಡನು. ತಕ್ಷಣವೇ ಎರಡನೆಯದೊಂದು ಭಾವನೆ ಬಂತು– "ಅಲ್ಲಾ, ಜನರು ಓಡಾಡಬಹುದಾದ ರಸ್ತೆಯೇ ಇಲ್ಲದಿರುವಾಗ, ಹೇಗೆ ತಾನೇ ಇಲ್ಲಿಗೆ ಬರಲು ಮಗುವಿಗೆ ಸಾಧ್ಯ?" ಎನ್ನಿಸಿತು. ಅವನ ತಲೆಗೆ ಹೊಳೆಯಲೇ ಇಲ್ಲ ಏನೂ! ಆಶ್ಚರ್ಯವೂ ಆಯಿತು



ಅವನಿಗೆ. ರಾಜ ಅಲ್ಲೇ ನಿಂತು ಬಿಟ್ಟನು. ಮನೆಗೆ ಮಗುವನ್ನೆತ್ತಿಕೊಂಡು ಹೋಗಲೇ? ಅಥವಾ ಅದರ ಹಣೇಬರಹ ಇದ್ದ ಹಾಗೆ ಆಗಲಿ ಎಂದು ಹೊರಟುಹೋಗಲೇ, ಎಂದೆಲ್ಲಾ ಭಾವನೆಗಳು ಬಂದವು. ಅವನು ಏನು ಮಾಡಲೂ ತೋಚದೆ ನಿಂತಿದ್ದಾಗ, ಇದ್ದಕ್ಕಿದ್ದಂತೆ ಒಳ್ಳೆಯ ಶೋಭೆಯಿಂದ ಹೊಳೆಯುತ್ತಿದ್ದ ವೃದ್ಧ ಬ್ರಾಹ್ಮಣರೊಬ್ಬರು ಅಲ್ಲಿಗೆ ಬಂದರು. ಅವರ ಆಗಮನದಿಂದ ಪರಮಶಾಂತಿ ಉಂಟಾದಂತಾಯಿತು ಆ ಸ್ಥಳದಲ್ಲಿ. ರಾಜನ ಭಾವನೆಗಳನ್ನು ಅರಿತವರಂತೆ, ಆ ಬ್ರಾಹ್ಮಣರು, ರಾಜನನ್ನು ಉದ್ದೇಶಿಸಿ, "ಮಹಾರಾಜ, ಏಕೆ ಹಿಂದೆ ಮುಂದೆ ನೋಡುತ್ತಿದ್ದೀ? ಆ ಮಗುವನ್ನೆತ್ತಿಕೊಂಡು ಅರಮನೆಗೆ ಹೋಗು. ಅವನಿಂದ ನಿನಗೆ ಹಿರಿಮೆ ಉಂಟಾಗುತ್ತದೆ. ಅವನ ಗುಟ್ಟುಗಳನ್ನು ಶೋಧಿಸಲು ತೊಡಗಬೇಡ. ಹನ್ನೆರಡು ವರ್ಷಗಳ ನಂತರ, ನಿನಗೇ ಅವನ ಬಗ್ಗೆಯ ಪೂರ್ಣ ಅರಿವು ಉಂಟಾಗುತ್ತದೆ. ಅದರ ಕುತ್ತಿಗೆಯಲ್ಲಿ ಚಿನ್ನದ ಗಂಟೆ ಇರುವುದು ಕಾಣಿಸುತ್ತಿದೆಯಲ್ಲವೇ? ಆದ್ದರಿಂದ, ಅದನ್ನು ನೀನು ಮಣಿಕಂಠ ಎಂದು ಕರೆಯಲಾರಂಬಿಸು" ಎಂದು ಹೇಳಿ ಬ್ರಾಹ್ಮಣನು ರಾಜನನ್ನು ಆಶೀರ್ವದಿಸಿ, ಮಾಯವಾದನು.

ಆ ಬ್ರಾಹ್ಮಣನ ದಯಾಪೂರಿತ ಸ್ಫೂರ್ತಿದಾಯಕ ವಚನಗಳು ರಾಜನ ಅನುಮಾನಗಳನ್ನೆಲ್ಲಾ ನಿವಾರಿಸಿದವು. ಅವನ ಬೋಧನೆಯನ್ನು ದಿವ್ಯಬೋಧೆಯೆಂದೇ ಪರಿಗಣಿಸಿ, ರಾಜನು ಆ ಮಗುವನ್ನು ತನ್ನ ಅರಮನೆಗೆ ಕರೆದುಕೊಂಡು ಹೋದನು. ಆದರೆ ಬ್ರಾಹ್ಮಣನ ರೂಪದಲ್ಲಿ ಬಂದಿದ್ದವನು ಸಾಕ್ಷಾತ್ ವಿಷ್ಣುವೇ ಎಂದು ಅವನಿಗೆ ತಿಳಿಯಲೇ ಇಲ್ಲ. ರಾಜ ಅರಮನೆಗೆ ಹಿಂದಿರುಗಿದನು. ಆಗಂತೂ ಆನಂದದ ಕಂದೀಲು ಅರಮನೆಯಲ್ಲೆಲ್ಲಾ ಬೆಳಗುತ್ತಿತ್ತು. ತನಗೆ ಕಡೆಗೂ ದಕ್ಕಿದ ಉಡುಗೊರೆ ಪಡೆದು, ರಾಣಿ, ಅತ್ಯಂತ ಆನಂದದಿಂದಿದ್ದಳು.

ಆ ಗಂಡು ಮಗು ಉಡುಗೊರೆಯಾಗಿದ್ದ; ಅಪರೂಪದ ಉಡುಗೊರೆ! ಕೇವಲ ರಾಜ ದಂಪತಿಗಳಿಗಷ್ಟೇ ಅಲ್ಲದೆ, ಇಡೀ ವಿಶ್ವಕ್ಕೇ ಅವನು ವರದಂತೆ ಕಾಣಿಸಿಕೊಂಡಿದ್ದನು. ಅಂದಿನ ದಿನಗಳಲ್ಲಿ ಅವತಾರಿ ಪುರುಷರ ಬಗ್ಗೆ ಯಾರಿಗೂ ಏನೂ ಅರಿವಿರಲಿಲ್ಲ. ಅವನು ಅವತಾರವೆತ್ತಿ ಬಂದಿದ್ದದ್ದು, ಒಂದು ದಿವ್ಯ ಸಂಕಲ್ಪದಿಂದಷ್ಟೇ! ಆ ಸಂಕಲ್ಪವನ್ನು ಪೂರ್ಣಗೊಳಿಸುವುದೂ ಅವನ ಗುರಿಯೇ ಆಗಿತ್ತು. ರಾಜನಿಗೂ ತನ್ನ ಮೋಕ್ಷದ ಘಳಿಗೆ ಹತ್ತಿರದಲ್ಲೇ ಇದೆ ಎಂಬುದರ ಅರಿವಿರಲೇ ಇಲ್ಲ. ಮುಕ್ತಿದಾಯಕ ಪ್ರಭು ತನ್ನ ಅರಮನೆ ಪ್ರವೇಶಿಸಿದ್ದಾನೆ ಎಂಬುದೂ ರಾಜನಿಗೆ ತಿಳಿದಿರಲಿಲ್ಲ.

ದಿವ್ಯ ಅಭಿನಯಗಳ ಕ್ರಮವಂತೂ ಊಹಿಸಲಾಗದಂಥದ್ದು ಮತ್ತು ಮಾನವನಿಗೆ ಊಹಾತೀತವಾದದ್ದು. ಪರಮಾತ್ಮನ ವಿಧಾನಗಳು ಅತ್ಯಂತ ಗೋಪ್ಯವಾದವುಗಳು, ಅಲ್ಲವೇ?

* * * *

# ೩. ಮಣಿಕಂಠ

ಚಿಕ್ಕ ಮಗು ಬೆಳೆದು, ಬಾಲಕನಾದನು. ಅವನನ್ನು ವಿದ್ಯಾಭ್ಯಾಸಕ್ಕಾಗಿ ಮತ್ತು ದೈಹಿಕ ತರಬೇತಿಗಾಗಿ, ಗುರುಗಳ ಬಳಿ ಬಿಟ್ಟರು. ವಿದ್ಯೆಯಲ್ಲಿ ಮಣಿಕಂಠ ತನ್ನ ಸ್ನೇಹಿತರನ್ನೆಲ್ಲಾ ಮೀರಿಸಿದನು. ಕತ್ತಿ ಯುದ್ಧದಲ್ಲಿ, ಬಿಲ್ಲಿನ ವಿದ್ಯೆಯಲ್ಲಿ ಅಪಾರ ತಜ್ಞತೆ ಪ್ರದರ್ಶಿಸಿದನು. ಅವನ ಗುರುಗಳಿಗೆ, ಅವನ ಸಾಧನೆಗಳಿಂದ ಅತ್ಯಂತ ಸಂತೋಷವಾಗಿತ್ತು, ಅವನೊಬ್ಬ ದಿವ್ಯ ವ್ಯಕ್ತಿಯೇ ಎಂದು ನಂಬಿದ್ದ ಗುರುಗಳು, ಅವನ ಕಾರ್ಯಸಾಧನೆಗಳು ಮುಂತಾದವನ್ನು ನೋಡಿ ಸಂತೋಷ ಪಡುತ್ತಿದ್ದರು, ಮತ್ತು ಅವನನ್ನು ಭಕ್ತಿ ಶ್ರದ್ಧೆಗಳಿಂದ ಗಮನಿಸುತ್ತಿದ್ದರು.

ಕ್ರಮೇಣ, ಮಣಿಕಂಠನ ವಿದ್ಯೆ ಮತ್ತು ಅಭ್ಯಾಸಗಳು ಮುಗಿದವು. ಅವನು ತನ್ನ ಗುರುವಿನ ಸಮ್ಮುಖದಲ್ಲಿ ನಿಂತು, ಪದ್ಧತಿಯಂತೆ ಬಹುಮಾನಗಳನ್ನು ನೀಡಲೆಂದು ನಿಂತನು. ಆಗ ಗುರುಗಳು, "ನಿನ್ನ ದಿವ್ಯ ಪ್ರಕೃತಿಯ ಅರಿವು ನನಗಾಗಿದೆ. ನೀನು ಸಾಧಾರಣ ವ್ಯಕ್ತಿ ಅಲ್ಲ. ನನ್ನ ಮಗ ಕುರುಡ ಹಾಗೂ ಮೂಗ. ಅವನಿಗೆ ದೃಷ್ಟಿ ಮತ್ತು ಮಾತನಾಡುವ ಶಕ್ತಿ ನೀಡಿ, ಅನುಗ್ರಹಿಸಪ್ಪಾ" ಎಂದರು. ಗುರುಗಳ ಮನವಿ ಕೇಳಿದ ತಕ್ಷಣವೇ, ಮಣಿಕಂಠ, ಮಗುವನ್ನು ತನ್ನೆರಡು ಕೈಗಳಲ್ಲಿ ಹಿಡಿದನು. ಅವನ ಸ್ಪರ್ಶದಿಂದ ಕ್ಷಣದಲ್ಲಿಯೇ ಮಗುವಿಗೆ ದೃಷ್ಟಿಯೂ ಬಂತು. ಮಾತನಾಡುವುದೂ ಬಂತು. ಅವನು ಮಗುವಿನ ತಲೆ ಸವರಿ ಆಶೀರ್ವದಿಸಿದನು. ಮಣಿಕಂಠ ಗುರುಗಳಿಗೆ ನಮಸ್ಕರಿಸಿದಾಗ, ಅವರು ಅವನನ್ನು ಆಶೀರ್ವದಿಸುತ್ತಾ, "ನೀನು ಚಕ್ರವರ್ತಿ ಆಗುವೆ" ಎಂದರು.

ಮಣಿಖಂಠನಿಂದ ಅನೇಕ ಚಮತ್ಕಾರಗಳು ನಡೆದವು ಎನ್ನಲಾಗಿದೆ. ಆದರೆ ಈಗ ನಾವು ತಿಳಿಸಲಿರುವುದು ಮುಖ್ಯವಾದದ್ದು. ಅದು ನಡೆದುಕೊಳ್ಳಬೇಕೆಂದ ಒಂದು ವರ್ತನೆಯನ್ನು ಒಳಗೊಂಡಿದೆ.

ಕೆಲವು ವರ್ಷಗಳ ನಂತರ ರಾಣಿ ಮಗನನ್ನು ಹಡೆದಳು. ಅವಳ ಮಾತೃಪ್ರೇಮ, ತನ್ನ ಹೊಸದಾಗಿ ಹುಟ್ಟಿದ ಮಗುವಿನತ್ತಲೇ ಹೆಚ್ಚಾಗಿತ್ತು. ಏಕೆಂದರೆ, ಅದರಲ್ಲಿ ಅವಳ ರಕ್ತವೇ ಹರಿಯುತ್ತಿತ್ತು. ಮಣಿಕಂಠ ಎಷ್ಟೇ ಆದರೂ, ಹೊರಗಿನವನಾಗಿದ್ದ. ಅವಳನ್ನು ಅವನಿಗೆ ವಿರುದ್ಧವಾಗಿಸಲು ಮತ್ತು ಅರಮನೆಯಲ್ಲಿ ಸಂಕಟವನ್ನು ಹರಡಲು, ಕೇವಲ ಒಂದು ಕಿಡಿ ಮಾತ್ರ ಬೇಕಾಗಿತ್ತು.



ಮಣಿಕಂಠ ಅರಮನೆಗೆ ಬಂದಾಗಿನಿಂದ, ಅರಮನೆಯಲ್ಲಿದ್ದ ದಿವಾನನಿಗೆ, ಅವನ ಬಗ್ಗೆ ಅಸಹ್ಯವೇ ಇತ್ತು. ಅವನಿಲ್ಲದೇ ಇದ್ದಿದ್ದರೆ, ರಾಜನಾದ ನಂತರ ದಿವಾನನೇ ಅಲ್ಪ ಸಮಯದವರೆಗಾದರೂ ರಾಜ್ಯವನ್ನು ಆಳಬಹುದಾಗಿತ್ತು ಎಂಬ ಆಶಯವಿತ್ತು. ಎಷ್ಟೋ ಸಂದರ್ಭಗಳಲ್ಲಿ ಅವನು ಮಣಿಕಂಠನ ಮೇಲೆ ಪ್ರಾಣಾಘಾತವನ್ನು ಮಾಡಲೂ ಪ್ರಯತ್ನಿಸಿದ್ದನು. ಆದರೆ ಅವೆಲ್ಲವೂ ವ್ಯರ್ಥವಾಗಿದ್ದವು, ನಿಜ. ಆದರೂ ಅವನ ತಲೆ ಮಾತ್ರ ಸದಾ ಕೆಲಸ ಮಾಡುತ್ತಲೇ ಇದ್ದು, ಒಂದಾದ ನಂತರ ಮತ್ತೊಂದರಂತೆ ಪ್ರಯತ್ನಗಳನ್ನು ಮಾಡಲು ಅವಕಾಶಕ್ಕಾಗಿ ಕಾಯುತ್ತಿತ್ತು.

ಕಾಲಚಕ್ರ ಉರುಳುತ್ತಿತ್ತು. ಪಂಪಾ ನದಿಯ ದಡದ ಮೇಲೆ ಬ್ರಾಹ್ಮಣರು ಭವಿಷ್ಯ ಹೇಳಿದ್ದ ಹನ್ನೆರಡು ವರ್ಷಗಳ ಕಾಲಾವಧಿ ಮುಗಿಯುವುದರಲ್ಲಿತ್ತು. ದೊರೆಯಾದರೋ, ಆ ಭವಿಷ್ಯದ ಬಗ್ಗೆ ಮರೆತೇ ಹೋಗಿದ್ದನು.

ಅವನು ಮಣಿಕಂಠನನ್ನು ತನ್ನ ಹಿರಿಯ ಪುತ್ರನನ್ನಾಗಿ ಭಾವಿಸಿದ್ದನು. ಆಗಿನ ಕಾಲದಲ್ಲಿನ ಪದ್ಧತಿಯಂತೆ, ಅವನು ಮಣಿಕಂಠನನ್ನು ಯುವರಾಜನನ್ನಾಗಿ ಮಾಡಲು ನಿರ್ಧರಿಸಿ, ಅವನ ಪಟ್ಟಾಭಿಷೇಕಕ್ಕೆ ತಕ್ಷಣ ಸಿದ್ಧತೆಗಳನ್ನು ಮಾಡಲು ದಿವಾನನಿಗೆ ತಿಳಿಸಿದನು. ಸುದ್ದಿ ಪ್ರಜೆಗಳಿಗೆಲ್ಲರಿಗೂ ತಿಳಿಯಿತು. ಇಡೀ ರಾಜ್ಯವು ಆ ಸಮಾರಂಭಕ್ಕಾಗಿ ಆನಂದದಿಂದ ಕಾಯುತ್ತಿತ್ತು. ಮಣಿಕಂಠ ಅವರೆಲ್ಲರ ಪ್ರಿಯನಾಗಿದ್ದು, ಅವರ ಗೌರವವನ್ನೂ, ತನ್ನ ಪ್ರೇಮದಿಂದ ಗಳಿಸಿಕೊಂಡಿದ್ದನು.

ಇದರಿಂದ ದಿವಾನನು ಅತ್ಯಂತ ದುಃಖಿತನಾದನು. ಅವನು ತನ್ನ ತಲೆ ಉಪಯೋಗಿಸಿ, ತನ್ನ ಆಸೆ ಪೂರೈಸಿಕೊಳ್ಳಲು ರಾಣಿಯ ಮೂಲಕ ಪ್ರಯತ್ನಿಸಲು ನಿರ್ಧರಿಸಿ, ಅವಳೊಂದಿಗೆ ಪಿತೂರಿ ನಡೆಸಿದನು. ಆಗ ರಾಮಾಯಣವೇ ಮತ್ತೆ ಪುನರಾವರ್ತಿಸಿತು! ಮಂತ್ರಿ ಮಂಥರೆಯ ಪಾತ್ರ ವಹಿಸಿದ. ರಾಣಿ, ಕೈಕೇಯಿಯ ಪಾತ್ರ ವಹಿಸಿ, ರಾಮನನ್ನು ಕಾಡಿಗೆ ಕಳುಹಿಸುವಂತೆ ಹೇಳಿ, ರಾಜನ ಉಪಾಯವನ್ನು ಕೆಡಿಸಲಿಲ್ಲವೇ?

ಅದೇರೀತಿಯಲ್ಲಿ ಮಂತ್ರಿ ರಾಣಿಗೆ ಚಾಡಿ ಹೇಳಿ, ಮಣಿಕಂಠ ಯುವರಾಜನಾದರೆ, ರಾಜಕುಮಾರನಿಗೆ ರಾಜನಾಗುವ ಯೋಗ ಇರುವುದಿಲ್ಲ ಎಂದು ಹೆದರಿಸಿ, ರಾಣಿ ಸೂಕ್ತ ಕ್ರಮ ತೆಗೆದುಕೊಳ್ಳಲು ಪ್ರೇರಿಸಿದನು. ರಾಣಿ ತನಗೆ ಅಸಾಧ್ಯ ತಲೆನೋವು ಇದೆಯೆಂದೂ, ಅದಕ್ಕಾಗಿ ರಾಜವೈದ್ಯರು ಅವಳಿಗೆ ಚಿರತೆಯ ಹಾಲನ್ನು ಕುಡಿಯುವಂತೆ ಹೇಳಿದ್ದಾರೆಂದು ಹೇಳಬೇಕೆಂದೂ, ಮಂತ್ರಿ ರಾಣಿಗೆ ಸೂಚಿಸಿದನು. ಮತ್ತೆ, ಮಣಿಕಂಠ ತಾನಾಗಿ ಚಿರತೆಯ ಹಾಲನ್ನು ತರಲು ಕಾಡಿಗೆ ಹೋಗುವನೆಂದೂ ಮತ್ತು ಅಲ್ಲಿ ಅವನು ದುಷ್ಟ ಮೃಗಗಳಿಗೆ ಬಲಿಯಾಗುವನೆಂದೂ ಗುಟ್ಟಾಗಿ ತಿಳಿಸಿದನು.

ಅದೇರೀತಿ, ನಾಟಕ ಪ್ರಾರಂಭವಾಯಿತು. ರಾಣಿ ತನಗೆ ಅಸಾಧ್ಯದ ತಲೆನೋವೆಂದು ನರಳಲಾರಂಭಿಸಿದಳು. ಆದರೆ ಮಣಿಕಂಠನನ್ನು ಯುವರಾಜನನ್ನಾಗಿ ಮಾಡಬೇಕಾಗಿ ಸಿದ್ಧತೆಗಳು ನಡೆಯುತ್ತಿರುವಾಗ, ರಾಣಿಯ ನರಳಿಕೆ, ಅವನಿಗೆ ಆ ಅಸಮಾಧಾನವನ್ನು ಉಂಟುಮಾಡಿತು. ಅವಳ ತಲೆನೋವನ್ನು ವಾಸಿ ಮಾಡಲೆಂದು ಬಂದ ವೈದ್ಯರು ಯಾರಿಂದಲೂ, ಅವಳನ್ನು ಗುಣಪಡಿಸಲು ಆಗಲೇ ಇಲ್ಲ. ಅವಳಿಗೆ ಕಾಯಿಲೆಯೇ ಕಟ್ಟುಕಥೆ ಆಗಿತ್ತಲ್ಲವೇ? ಅವಳ ಚಿಕಿತ್ಸೆಯ ಉಸ್ತುವಾರಿ ದಿವಾನನ ಕೈಯ್ಯಲ್ಲಿತ್ತು. ಘಟನೆಗಳೆಲ್ಲವೂ ಅವನ ಉಪಾಯದಂತೆ ರೂಪುಗೊಳ್ಳುತ್ತಿದ್ದವು. ಅವನು ಮೋಸಗಾರ ವೈದ್ಯನೊಬ್ಬನನ್ನು ಕರೆದು, ಅವನ ಮೂಲಕ ರಾಣಿಯ ಚಿಕಿತ್ಸೆಗೆ ಬೇಕಾಗಿರುವುದು ಚಿರತೆಯ ಹಾಲು ಎಂದು ಹೇಳಿಸಿದನು. ಅದಲ್ಲದೆ ಬೇರೆ ಯಾವ ಔಷಧವೂ ಪ್ರಭಾವಕಾರಿಯಲ್ಲ ಎಂದೂ ಹೇಳಿಸಿದನು.

ಆಗಂತೂ ರಾಜನಿಗೆ ಹೃದಯಾಘಾತವಾದಂತಾಯಿತು. ಚಿರತೆಯ ಬಳಿಗೆ ಹೋಗುವ ಕೆಲಸವೇ ಊಹಾತೀತದ್ದಾಗಿದ್ದಾಗ, ಹಾಲು ಕರೆಯುವುದಂತೂ ಮತ್ತೂ ಆಗದ ಕೆಲಸ!

ಅಸಾಧ್ಯದ ಕೆಲಸವೇ ಆಗಿ ಕಂಡುಬಂತು. ವೈದ್ಯರು ತಿಳಿಸಿದ್ದ ಈ ಔಷಧಿಯ ವಿಚಾರ ಮಣಿಕಂಠನ ಕಿವಿಗೂ ಬಿತ್ತು. ಅವನು ಆ ಕ್ಷಣವೇ ರಾಜನೆದುರಿನಲ್ಲಿ ನಿಂತು, "ನಾನು ಆ ಕೆಲಸ ಮಾಡುತ್ತೇನೆ" ಎಂದು ಘೋಷಿಸಿದನು.

**ಮಣಿಕಂಠ:** ಪ್ರಭುಗಳೇ! ನಾನು ಕಾಡಿಗೆ ಹೋಗಿ, ಬೇಕಾಗಿರುವ ಹಾಲನ್ನು ತರಲಂತೂ ಸಿದ್ಧನಾಗಿದ್ದೇನೆ. ಆದರೆ ಅದರಿಂದ ನಿಜವಾಗಿ ರಾಣಿಯ ತಲೆನೋವು ವಾಸಿ ಆಗುವುದಿದ್ದರೆ ಮಾತ್ರ!

**ರಾಜ:** ಮಗೂ, ಚಿರತೆಗಳ ಬಗ್ಗೆ ನಿನಗೆ ಏನೂ ತಿಳಿದಿಲ್ಲ. ಅವು ಅತ್ಯಂತ ಕುಯುಕ್ತಿಯವು ಮತ್ತು ಕ್ರೂರ ಪ್ರಾಣಿಗಳು. ನೀನು ಅವುಗಳನ್ನು ಹಿಡಿಯುವುದಿರಲಿ, ಅದರ ಬಳಿಗೂ ಹೋಗಲಾರೆ.

**ಮಣಿಕಂಠ:** ಪ್ರಭೂ, ಅದನ್ನೆಲ್ಲಾ ನನಗೇ ಬಿಡಿ. ನಾನು ಹೋಗಿ, ಖಂಡಿತ ಹಾಲನ್ನು ತರುತ್ತೇನೆ.

**ರಾಜ:** ಇಲ್ಲ ಮಗು, ನಾನು ನಿನ್ನನ್ನು ಕಳುಹಿಸಲಾರೆ. ನೀನು ಯುವರಾಜ ಆಗಬೇಕು.

**ಮಣಿಕಂಠ:** ಹಾಗಾದರೆ, ನೀವು ನನಗೆ ಒಂದು ವರ ನೀಡುವಿರಾ?

**ರಾಜ:** ಹೇಳು.

**ಮಣಿಕಂಠ:** "ನೀವು ನನ್ನನ್ನು ಕಾಡಿಗೆ ಕಳುಹಿಸಿ, ರಾಣಿಯ ಸೇವೆಗಾಗಿ ಹಾಲು ತರಲು ಬಿಡಬೇಕು" ಎಂಬುದೇ ವರ. ತಾನು ನೀಡಿದ ವರವನ್ನು ವಾಪಸ್ಸು



ತೆಗೆದುಕೊಳ್ಳಲಾಗದಿದ್ದಾಗ, ರಾಜನಿಗೆ ಆ ವರವನ್ನು ನೀಡಲೇಬೇಕಾಗಿ ಬಂತು. ಅವನ ಅಂತರ್ಯದಲ್ಲಿ, ತನ್ನ ಈ ಪೆದ್ದುತನಕ್ಕೆ ಅಪಾರ ದುಃಖವಿತ್ತು.

ಇದರಿಂದ ನಮಗೆ ಕರ್ತವ್ಯ ಮತ್ತು ತ್ಯಾಗಗಳೇನೆಂದು ಅರ್ಥವಾಗುತ್ತದೆ. ಮಣಿಕಂಠನೇ ಹೊರಡಲೇಕೆ ಸಿದ್ಧನಾದ ಎಂಬುದಕ್ಕೂ ಕಾರಣವಿರಲಿಲ್ಲ. ಆದರೆ ಒಬ್ಬ ಸೇವಾವರ್ತಿಯಾಗಿ, ಅವನು, ರಾಜನ ಸೇವೆಯನ್ನು ಪ್ರಜ್ಞಾಪೂರ್ಣವಾಗಿ ಮಾಡುವುದು ತನ್ನ ಕರ್ತವ್ಯವೆಂದು ಭಾವಿಸಿದ್ದನು. ಜೊತೆಗೆ ಯಾರಿಂದಲೂ ಹೇಳಿಸಿಕೊಳ್ಳದೆ, ಯಾರಿಗೆ ಏನು ಬೇಕೋ ಅದನ್ನು ಮಾಡುವುದೂ, ಅವನನ್ನು ಸಂತೋಷಪಡಿಸುತ್ತಿತ್ತು. ಸದ್ಯದಲ್ಲಿ ರಾಜ ದುಃಖದಲ್ಲಿದ್ದಾಗ, ಮಣಿಕಂಠ ಆ ಪ್ರಯತ್ನವನ್ನು ಮಾಡುವುದು ತನ್ನ ಕರ್ತವ್ಯವೆಂದುಕೊಂಡನು. ಮಣಿಕಂಠ ಕರ್ತವ್ಯದ ಕಾರ್ಯದಲ್ಲಿ, ಅಪಾರ ತ್ಯಾಗವೂ ಸೇರಿತ್ತು. ಅವನು ಒಪ್ಪಿಕೊಂಡಿದ್ದದ್ದು ಸಾಮಾನ್ಯ ಕೆಲಸವೇನೂ ಆಗಿರಲಿಲ್ಲ. ಏಕೆಂದರೆ, ಅದರಲ್ಲಿ ಅವನ ಜೀವಕ್ಕೇ ಅಪಾಯವಿತ್ತು. ತ್ಯಾಗ ಎಂದರೆ ಏನನ್ನಾದರೂ ದಾನವಾಗಿ ಕೊಟ್ಟುಬಿಡುವುದು ಎಂದು ಮಾತ್ರವಲ್ಲ, ಸಹಾಯ ನೀಡುವುದೂ ಅಲ್ಲ. ಬದಲಿಗೆ, ಯಾರು ಅತ್ಯಂತ ಆತ್ಮೀಯದ್ದೆಂದು ಏನನ್ನು ಇಟ್ಟುಕೊಂಡಿರುತ್ತಾರೆಯೋ, ಅದನ್ನೇ ತ್ಯಾಗ ಮಾಡುವುದು. ಎಂದರೆ, ಪರಿಸ್ಥಿತಿಗೆ ತಕ್ಕಂತೆ, ಮತ್ತೊಬ್ಬರಿಗಾಗಿ ಸ್ವಂತ ಆಸ್ತಿ, ಅಪೇಕ್ಷೆಗಳು, ಲಾಭಗಳು, ಕಡೆಗೆ ಮತ್ತೊಬ್ಬರಿಗಾಗಿ ಸ್ವಂತ ಜೀವವನ್ನೂ ನೀಡುವುದು, ಆಯಾಯಾ ಪರಿಸ್ಥಿತಿಗಳಿಗೆ ಅನುಗುಣವಾಗಿ, ಎಂದರ್ಥ. ಇಲ್ಲಿ ನಾವು, ರಾಣಿಯ ತಲೆನೋವು ಚಿರತೆಯ ಹಾಲಿಂದಲ್ಲದೆ, ಬೇರೆ ಏತರಿಂದಲೂ ಗುಣವಾಗುವುದಿಲ್ಲವೆಂದು ತಿಳಿದು ಎಷ್ಟೇ ಕಷ್ಟಗಳು, ಅಪಾಯವಿದ್ದರೂ, ಮಣಿಕಂಠ 'ಸೇವಾಕರ್ತನ ಕರ್ತವ್ಯವೇ ಸೇವೆ' ಎಂದು ಭಾವಿಸಿ, ಅದನ್ನು ಹುಡುಕಿಕೊಂಡು ಹೋಗುವುದನ್ನು ನೋಡುತ್ತಿದ್ದೇವೆ.

ದೊರೆಯಿಂದ ಅನುಮತಿಯನ್ನು ಮೋಸದಿಂದ ಪಡೆದು, ಮಣಿಕಂಠ ತಾನಾಗಿ ಆ ಯಾತ್ರೆಗೆ ಸಿದ್ಧನಾಗುತ್ತಾನೆ. ಆಗ ದೊರೆ, ಅವನನ್ನು ಕುರಿತು, "ನೀನು ಹೋಗುವಾಗ ಕೈಯಲ್ಲಿ ಒಂದು ತೆಂಗಿನಕಾಯಿ ಹಿಡಿದು ಹೋಗು. ಆ ತೆಂಗಿನಕಾಯಿ ತ್ರಿನೇತ್ರನಾದ ಶಿವನನ್ನು ಪ್ರತಿನಿಧಿಸುತ್ತದೆ. ಅದರಿಂದ ನೀನು ರಸ್ತೆಯಲ್ಲಿ ಉಂಟಾಗಬಹುದಾದ ಅಪಾಯಗಳಿಂದ ಪಾರಾಗುವೆ" ಎಂದು ಹೇಳಿದನು. ಅದರಂತೆ, ಮಣಿಕಂಠ ಕೈಯಲ್ಲಿ ತೆಂಗಿನಕಾಯಿ ಹಿಡಿದು, ರಸ್ತೆಯಲ್ಲಿ ತನಗೆ ಹಸಿವಾದಾಗ ತಿನ್ನಲೆಂದು ಸ್ವಲ್ಪ ತಿಂಡಿಗಳನ್ನು ತೆಗೆದುಕೊಂಡು, ಒಂದು ಹೊರೆಯಾಗಿ ಮಾಡಿಕೊಂಡು, ಅದನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು ಹೊರಟನು. ಯಾತ್ರಿಕರು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗುವ ಗಂಟು, ಆ ಹೊರೆಯನ್ನು ಪ್ರತಿಬಿಂಬಿಸುತ್ತದೆ. ದೊರೆ, ಅವನೊಂದಿಗೆ ಕೆಲವು ಮಂದಿಯನ್ನು ಅವರ ಸಹಾಯಕ್ಕಾಗಿ ಕಳುಹಿಸುತ್ತೇನೆ

ಎಂದಾಗಲೂ, ಮಣಿಕಂಠ ಅದಕ್ಕೊಪ್ಪದೆ, "ಚಿರತೆಗಳು ಜನಸಮೂಹ ನೋಡಿ ಓಡಿ ಬಿಡುತ್ತವೆ. ಆದ್ದರಿಂದ ನನ್ನನ್ನು ಒಂಟಿಯಾಗಿ ಕಳುಹಿಸಿಕೊಡಿ" ಎಂದು ಬೇಡಿದನು.

ಈ ರೀತಿಯಾಗಿ ಕಥೆ ಮುಂದುವರಿಯುತ್ತದೆ. ಆದರೆ ಕೆಲವು ಪ್ರಶ್ನೆಗಳು ಏಳುತ್ತವೆ:

ಮಣಿಕಂಠ, ಭಗವಂತನ ಅವತಾರವೇ ಆಗಿದ್ದಾಗ್ಯೂ ಅವನು, ರಾಣಿ ದಿವಾನನನ್ನು ತಡೆಯುವಂತೇಕೆ ಮಾಡಲಿಲ್ಲ. ಅಥವಾ ದಿವಾನ ಅಂಥ ಹೀನ ನಾಟಕ ಆಡದಂತೆ ತಡೆಯಲಿಲ್ಲವೇಕೆ? ಅದಲ್ಲದೆ, ಅವನು ತಾನಾಗಿ ಕಾಡಿಗೆ ಹೋಗದೆ, ಕಾಡಿನಿಂದ ಚಿರತೆಗಳನ್ನು ಕರೆಸಿ, ಹಾಲನ್ನು ತೆಗೆದುಕೊಳ್ಳ ಲಾಗುತ್ತಿರಲಿಲ್ಲವೇ? ಅವನು ಅರಮನೆಯಲ್ಲಿ ಉಂಟಾಗುತ್ತಿದ್ದ ಅಸೌಖ್ಯದ ಮತ್ತು ದುಃಖದಾಯಕ ಘಟನೆಗಳನ್ನು ತಡೆಯಬಹುದಾಗಿತ್ತು. ಆದರೂ ಅವನೇಕೆ ಅಂಥ ಪರಿಸ್ಥಿತಿಯನ್ನು ಸೃಷ್ಟಿಸಿದನು? ಅಥವಾ ಅವನೇಕೆ ಅಂತ ಪರಿಸ್ಥಿತಿಯನ್ನು ಸೃಷ್ಟಿಸಿ, ಕುತಂತ್ರ ನಡೆಸಿದನು? ಇತ್ಯಾದಿ.

ಭಗವಂತ, ತನ್ನ ಉದ್ದೇಶಗಳನ್ನು ಸಾಧಿಸಿಕೊಳ್ಳುವ ವಿಧಾನವಂತೂ ಅತ್ಯಂತ ಅನಿರೀಕ್ಷಿತ. ಅವುಗಳನ್ನು ಅರ್ಥಮಾಡಿಕೊಳ್ಳುವುದು ಅಥವಾ ವಿಶ್ಲೇಷಿಸುವುದು ಬಹಳ ಕಷ್ಟದ್ದು. ಏಕೆಂದರೆ ಭಗವಂತನ ಆಟದಲ್ಲಿ ಸಾಕಷ್ಟು ಗೋಪ್ಯತೆಗಳು ಇರುತ್ತವೆ ಮತ್ತು ಅವು ಮಾನವರ ಗ್ರಾಹ್ಯತೆಗೆ ಮೀರಿದವು. ತನ್ನದೇ ಆದ ರೀತಿಯಲ್ಲಿ ಭಗವಂತ ತನ್ನ ಉದ್ದೇಶವನ್ನು ಪೂರೈಸಿಕೊಳ್ಳುತ್ತಾನೆ.

ಪ್ರಾಯಶಃ ಅವತಾರದ ಉದ್ದೇಶ ಚಿರತೆಗಳನ್ನು ತರುವುದಾಗಿರಲಿಲ್ಲ ಅಥವಾ ರಾಣಿಯ ಕಾಯಿಲೆಯನ್ನು ಗುಣಪಡಿಸುವುದೂ ಆಗಿರಲಿಲ್ಲ. ಭಗವಂತನ ಉದ್ದೇಶವೇ ಬೇರೆ ಆಗಿತ್ತೋ ಏನೋ! ದಿವಾನನ ಸಂಚು ಮತ್ತು ರಾಣಿಯ ಸೋಗಿನ ಕಾಯಿಲೆ ಎರಡೂ, ಪರಮಾತ್ಮನ ಆಟವೇ ಆಗಿದ್ದು, ತನ್ನ ಗುರಿಯನ್ನು ಪೂರೈಸಿಕೊಳ್ಳಲು ಕಾಡಿಗೆ ಹೋಗಲು ದಾರಿಯನ್ನು ಕಂಡುಕೊಳ್ಳಬೇಕಾಗಿತ್ತು ಎನ್ನಬಹುದಲ್ಲವೇ? ಆ ಸಂದರ್ಭದಲ್ಲಿ ಅವನಿಗೆ ತನ್ನ ದಿವ್ಯತೆಯನ್ನು ಬಹಿರಂಗಗೊಳಿಸಲು ಇಷ್ಟವಿರಲಿಲ್ಲ. ಏಕೆಂದರೆ, ಅರಮನೆಯಲ್ಲಿ ತಾನು ಪೂರೈಸಬೇಕಾಗಿದ್ದ ಯಾವುದೋ ದಿವ್ಯ ಕೆಲಸಕ್ಕೆಂದು, ಈ ದಿವ್ಯತೆಯನ್ನು ಬಹಿರಂಗಗೊಳಿಸುವುದೂ ಅಕಾಲಿಕದ್ದಾಗಿತ್ತು.

ಯಾರು ಎಷ್ಟೇ ಹಂಬಲಿಸಿದರೂ, ಯಾರು ಎಷ್ಟೇ ಆಸೆ ಪಟ್ಟರೂ, ವ್ಯಕ್ತಿಯ ಮುಕ್ತಿಗೆ ಬೇಕಾದ ಭಗವದನುಗ್ರಹದ ಪ್ರಾಪ್ತಿಗೆ, ಸಮಯ ಬರಲೇಬೇಕು. ಅಲ್ಲಿಯವರೆಗೂ ಅದು ಕತ್ತಲೆಯಲ್ಲಿ ಅಲೆದಾಡುವಂತೆ ಆಗುತ್ತದೆ. ಮನುಷ್ಯನ



ಒಂದೇ ಪ್ರಯತ್ನವೇನೆಂದರೆ, ಅವನು ಭಗವಂತನ ಚದುರಂಗದ ಹಲಗೆಯ ಮೇಲಿನ ಕಾಯಿ ಆಗಿರುವುದಷ್ಟೇ.

ಮಣಿಕಂಠನೊಬ್ಬನೇ ಕಾಡಿಗೆ ನಡೆದನು. ಹತಾಶನಾಗಿದ್ದ ರಾಜ, ಆ ಬಡಪಾಯಿ ಹುಡುಗ ಒಂಟಿಯಾಗಿ ತನ್ನ ತಲೆಯ ಮೇಲೆ ಗಂಟನ್ನು ಹೊತ್ತು ನಡೆಯುತ್ತಾ ಹೋಗುತ್ತಿದ್ದುದನ್ನು, ಅವನು ಕಾಣಿಸುವವರೆಗೂ ನೋಡುತ್ತಾ ನಿಂತಿದ್ದನು. ರಸ್ತೆಯಲ್ಲಿ ಅವನನ್ನು ನೋಡಿದವರೆಲ್ಲರೂ ಅವನನ್ನು ಕಂಡು ಆಶ್ಚರ್ಯಪಟ್ಟು ಪ್ರಶಂಸಿಸುತ್ತಾ, "ಎಂಥಾ ಕಷ್ಟದ ಕೆಲಸವನ್ನು ತನ್ನ ಮೇಲೆ ಹೊತ್ತಿದ್ದಾನೆ. ಯಜ್ಞದಂಥ ಕಾರ್ಯವದು!" ಎನ್ನುತ್ತಿದ್ದರು. ದುಃಖಿತನಾದ ರಾಜ ಅರಮನೆಗೆ ಹಿಂದಿರುಗುತ್ತಾ, ಪರಿಸ್ಥಿತಿಗಳು ಉಂಟಾದ ರೀತಿಯ ಬಗ್ಗೆ ದುಃಖಿಸುತ್ತಿದ್ದನು.

ಮಣಿಕಂಠನನ್ನು ಕಾಡುಪ್ರಾಣಿಗಳು ಜೀವಸಹಿತ ಬಿಡುತ್ತವೆಯೇ? ಅವನಿನ್ನೂ ಚಿಕ್ಕ ಹುಡುಗ, ಜೊತೆಗೆ ಅಪಾರ ಸುಖಸಂಪದ್ಭರಿತ ಜೀವನದಲ್ಲಿ ಬೆಳೆದವನು. ಎಂದೂ ಕಷ್ಟಪಟ್ಟು ಜೀವನ ಸಾಗಿಸಿದವನೇ ಅಲ್ಲ. ಅಂಥ ಅಸಹಾಯಕ ಬಾಲಕ, ಕಾಡುಪ್ರಾಣಿಗಳೆಲ್ಲವೂ ಅವನನ್ನು ಸುತ್ತುವರಿದಾಗ ಏನು ತಾನೇ ಮಾಡಬಲ್ಲ? ಹೀಗೆ ಪಶ್ಚಾತ್ತಾಪ ಪಡುತ್ತಾ, ಕಳೆದುಹೋದ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾ, ರಾಜನು ತನ್ನ ದಿನಗಳನ್ನು "ಮಣಿಕಂಠ ಸುಖವಾಗಿ ವಾಪಸ್ಸು ಬರಲಿ" ಎಂದು ಭಗವಂತನನ್ನು ಬೇಡಿಕೊಳ್ಳುತ್ತಲೇ ಕಳೆದನು.

ಮಣಿಕಂಠ ಕಾಡನ್ನು ಪ್ರವೇಶಿಸಿದ ಕೂಡಲೆ, ವಪರ, ಕಟುಶಬ್ದ, ವೀರಭದ್ರ, ಕೂಪನೇತ್ರ, ಕೂಪಕರ್ಮ, ಗಂಡಕರ್ಣ ಮತ್ತು ಅವನ ಕೈಕೆಳಗಿನ ಸೈನ್ಯಾಧಿಕಾರಿಗಳು, ಶಿವಪರಮಾತ್ಮನ ಆಜ್ಞೆಯಂತೆ ಬಂದು, ಮಣಿಕಂಠನ ಕಾಲಿಗೆ ನಮಸ್ಕರಿಸಿ ಸೇವೆಗಾಗಿ ನಿಂತರು. ಅವರನ್ನು ಆಶೀರ್ವದಿಸಿ, ಮಣಿಕಂಠ ಕಾಡನ್ನು ಪ್ರವೇಶಿಸಿ, ಪಂಪಾನದಿಯ ದಡ ತಲುಪಿದನು. ಅವನು ಬಂದ ತಕ್ಷಣವೇ ಎಷ್ಟೋ ಮಂದಿ ಋಷಿಗಳು ಎಂದರೆ, ಅಲ್ಲಿ ಸುತ್ತಮುತ್ತ ಜೀವಿಸುತ್ತಿದ್ದ ಋಷಿಗಳು ಅಲ್ಲಿಗೆ ಬಂದು ಅವನಿಗೆ ನಮಸ್ಕರಿಸಿದರು. ನಂತರ ಅವರು ಅವನನ್ನು ಒಂದು ಚಿನ್ನದ ದೇವಸ್ಥಾನದಲ್ಲಿ ಕೂಡಿಸಿದರು. ಆ ದೇವಸ್ಥಾನ ಪಂಪ ಎಂಬಲ್ಲಿಂದ ಹದಿನೇಳು ಕಿಲೋಮೀಟರ್ ದೂರದಲ್ಲಿತ್ತು. ಅದನ್ನು ಅವರು ಬೆಟ್ಟದ ಮೇಲೆ, ತಮ್ಮ ತಪಶ್ಶಕ್ತಿಯಿಂದ ಕಟ್ಟಿದ್ದರು. ಇಂದು ಸ್ವರ್ಣಮಂದಿರದ ಬೆಟ್ಟ "ಪೊನ್ನಾಂಪಲಮೇಡು" ಎಂದು ಭಕ್ತರು ಸದಾ ಹೇಳುವ ದೇವಸ್ಥಾನದ ಬೆಟ್ಟ ಪ್ರಾಯಶಃ ಇದೇ ಇದ್ದರೂ ಇರಬಹುದು.

ಅಲ್ಲಿಗೆ ಎಂದಾದರೂ ಯಾರಾದರೂ ಹೋಗಿದ್ದರು ಎನ್ನುವುದರ ಬಗ್ಗೆ ನಮ್ಮಲ್ಲಿ ಯಾವ ದಾಖಲೆಯೂ ಇಲ್ಲ. ಪ್ರಾಯಶಃ ಯಾರೂ ಪ್ರಯತ್ನ ಪಟ್ಟೇ ಇಲ್ಲವೋ ಏನೋ! ಹಾಗೆ ಯಾರಾದರೂ ಏರಿ ಹೋಗಿ, ಅಲ್ಲಿ ದೇವಸ್ಥಾನವನ್ನು

ಕಾಣದೆ ನಿರಾಶೆಗೊಂಡು ಹಿಂದಿರುಗಿದ್ದರೆ, ಅದರಲ್ಲಿ ಆಶ್ಚರ್ಯಪಡುವಂಥದ್ದೇನೂ ಇಲ್ಲ. ಏಕೆಂದರೆ, ಅದು ಋಷಿಗಳ ಇಚ್ಛಾಶಕ್ತಿಯ ಮೂಲಕ, ಅವರ ಸ್ವಂತದ ತಪಶ್ಶಕ್ತಿಯಿಂದಲೇ ಕಟ್ಟಲ್ಪಟ್ಟಿದ್ದ ದೇವಸ್ಥಾನ. ಹಾಗಾಗಿ ಅವರಿಗಿಷ್ಟ ಬಂದಾಗ, ಯಾವಾಗ ಬೇಕಾದರೂ ಅದನ್ನು ಅವರು ಉರುಳಿಸುವ ಸಾಧ್ಯತೆಯೂ ಇತ್ತು. ಹಾಗಾಗಿ, ಭಗವಂತ ದೇವಲೋಕಕ್ಕೆ ಹೊರಟಾಗ ಹಾಗೆ ಮಾಡಿರಲೂ ಸಾಧ್ಯ.

* * * *



# ೪. ವರಗಳು ಮತ್ತು ನಿಗೂಢತತ್ವಗಳು

ಆ ಸಮಯದಲ್ಲಿ, ಅತ್ಯಂತ ಶಕ್ತಿವಂತಳಾಗಿದ್ದ ರಾಕ್ಷಸಿಯೊಬ್ಬಳು, ದೇವತೆಗಳ ಮೇಲೆ ತನ್ನ ಪಾಶವೀ ಕೃತ್ಯಗಳನ್ನು ಮತ್ತೆ ಶುರುಮಾಡಿದಳು. ಅವಳ ಶೋಷಣೆಗಳನ್ನು ಸಹಿಸಲಾಗದೆ, ದೇವತೆಗಳು ಭಗವಂತನ ಭೂತನಾಥ(ಮಣಿಕಂಠ)ನ ಪಾದಾರವಿಂದಗಳನ್ನು ಪೊನ್ನಂಪಲಂ ಎಂಬಲ್ಲಿ ಹುಡುಕಿದರು ಮತ್ತು ಆ ರಾಕ್ಷಸಿಯನ್ನು ಸಂಹರಿಸಿ, ತಮ್ಮ ಸಂಕಟಗಳನ್ನು ನಿವಾರಿಸಬೇಕೆಂದು, ಬೇಡಿಕೊಳ್ಳಲು ಅವರು, "ಸ್ವಾಮಿ ಭೂತನಾಥ, ವಿಶ್ವೇಶ, ದಯಾಮಯ, ಪ್ರೇಮಪೂರ್ಣ ಪ್ರಭೂ, ಈ ರಾಕ್ಷಸಿಯ ತೊಂದರೆಗಳಿಂದ ನಮ್ಮನ್ನು ರಕ್ಷಿಸು. ನಮ್ಮ ರಕ್ಷಣೆಗಾಗಿ, ಪ್ರಭೂ, ನಿನ್ನ ಚರಣಾರವಿಂದಗಳನ್ನು ಬಿಟ್ಟರೆ ಬೇರೆ ಏನಿದೆ? ನಿನ್ನನ್ನು ಬಿಟ್ಟರೆ, ನಮ್ಮನ್ನು ರಕ್ಷಿಸುವವರಾದರೂ ಯಾರಿದ್ದಾರೆ?" ಎಂದು ಪ್ರಾರ್ಥಿಸಿದರು.

ಈ ರಾಕ್ಷಸಿ ಯಾರಾಗಿದ್ದಳು? ಅವಳೇಕೆ ದೇವತೆಗಳನ್ನು ಗೋಳು ಹುಯ್ದುಕೊಂಡಳು? ದೇವತೆಗಳು ಭಗವಂತ ಭೂತನಾಥನ ಚರಣಗಳನ್ನೇಕೆ ಅಪ್ಪಿ ಶರಣಾದರು?

ಪ್ರಪಂಚದಲ್ಲಿ ತ್ರಿಮೂರ್ತಿಗಳಾಗಿ ಮಾನವ ಆಕಾರಗಳನ್ನು, ಭಗವಂತ ವಿಶ್ವದಲ್ಲಿನ ಧರ್ಮಸಂಸ್ಥಾಪನೆಗಾಗಿ ಪಡೆದಾಗ, ಅವುಗಳಿಂದ 'ದತ್ತ' ಎಂಬ ಶಕ್ತಿಯು ಹೊರಕ್ಕೆ ಬಂತು. ಪ್ರಾಯಶಃ ಅವನಿಗೇ ದತ್ತಾತ್ರೇಯ ಎಂಬ ಹೆಸರು ಬಂತು ಎನ್ನಿಸುತ್ತದೆ. ಅವನು ಉತ್ತರದಲ್ಲಿನ ಅತ್ಯಂತ ಜನಪ್ರಿಯ ದೇವರು. ಅದನ್ನು ಸಿದ್ಧಗೊಳಿಸಲು ಯಾವ ದಾಖಲೆಯೂ ಇಲ್ಲ. ಆದರೆ ಜನರಲ್ಲಿರುವ ಸಾಮಾನ್ಯ ಭಾವನೆ ಅದು. ದತ್ತನನ್ನು ದತ್ತಾತ್ರೇಯ ಮಹರ್ಷಿ ಎನ್ನುವ ದಾಖಲೆಗಳೂ ಇವೆ.

ಅದಕ್ಕನುಗುಣವಾಗಿ ತ್ರಿಮೂರ್ತಿಗಳ ಪತ್ನಿಯರು, ತಮ್ಮ ಯೋಗ ಮಾಯೆಯಿಂದ ಮಾನವ ರೂಪ ಪಡೆದರು. ಈ ಪ್ರಪಂಚಕ್ಕೆ ಮಹರ್ಷಿ ಗಾಲವರ ಪುತ್ರಿಯಾಗಿ ಬಂದರು. ಮಹರ್ಷಿಗಳು ಅವಳಿಗೆ ಲೀಲ ಎಂದು ಹೆಸರಿಟ್ಟು ಬೆಳೆಸಿ, ದತ್ತನಿಗೆ ಕೊಟ್ಟು ಮದುವೆ ಮಾಡಿದರು. ದತ್ತ, ಲೀಲ ಇಬ್ಬರೂ ಚಿಕ್ಕವರೇ ಆಗಿದ್ದು, ಅವರು ಧರೆಗಿಳಿದು ಬಂದು, ಯೌವನದ ಜೀವನ ಕಳೆಯಲು, ಕಾಡುಗಳಲ್ಲೆಲ್ಲಾ ಓಡಾಡಿಕೊಂಡಿದ್ದರು. ಲೀಲ, ತಾನು ಯಾರೆಂಬುದನ್ನೇ ಮರೆತು, ಸಾಂಸಾರಿಕ

ಆಸೆಗಳಿಗೆ ತುತ್ತಾಗಿ ಹುಚ್ಚಳಂತಾದಳು. ದತ್ತ, ಅವಳ ಆಶಯಗಳನ್ನೆಲ್ಲಾ, ಪೂರೈಸಿದನು. ಈ ರೀತಿಯಾಗಿ ಅವರು ಪ್ರಪಂಚದಲ್ಲಿ ದೀರ್ಘಕಾಲ ಬಾಳಿದರು.

ನಂತರ ದತ್ತನಿಗೆ ದಿವ್ಯಪ್ರಕೃತಿಯ ಪ್ರಜ್ಞೆ ಮೂಡಿತು. ಅವನು ಅವಳಿಂದ ತನ್ನ ಸಂಬಂಧಗಳನ್ನು ಕಳೆದುಕೊಳ್ಳಲು ನಿರ್ಧರಿಸಿದನು. ಇದು ಲೀಲಳಿಗೆ ಒಪ್ಪಿಗೆ ಆಗಲಿಲ್ಲ. ಏಕೆಂದರೆ ಅವಳ ಆಸೆಗಳಿನ್ನೂ ಪೂರ್ಣವಾಗಿರಲಿಲ್ಲ. ಅವಳು ದತ್ತನನ್ನು ಬಿಡದೆ, ಬೇಡಿಕೊಳ್ಳುತ್ತಾ ನಿಂತಳು.

**ಲೀಲ:** ಪ್ರಭೂ, ನನ್ನನ್ನು ಬಿಟ್ಟು ಹೋಗಬೇಡಿ. ನಾನಿನ್ನೂ ಈ ಪ್ರಾಪಂಚಿಕ ಸುಖಗಳಿಂದ ಪೂರ್ಣಳಾಗಿ ತೃಪ್ತಳಾಗಿಲ್ಲ. ಆದ್ದರಿಂದ ದಯವಿಟ್ಟು ನನ್ನನ್ನು ಬಿಡಬೇಡಿ.

**ದತ್ತ:** ಏನು? ನೀನೂ ಮರ್ತ್ಯರಂತೆಯೇ ಮಾತನಾಡುತ್ತೀಯಲ್ಲ! ನಿನ್ನ ಆಸೆ ಅವಿವೇಕದ್ದು.

**ಲೀಲ:** ಪ್ರಭೂ, ಪ್ರಿಯಾ! ಅಂಥ ಕೆಟ್ಟ ಶಬ್ದಗಳನ್ನು ಬಳಸಬೇಡಿ ಮಾತನಾಡುವಾಗ.

**ದತ್ತ:** ನೀನು ಸಾಂಸಾರಿಕ ಹೆಂಗಸಾಗಬೇಡ. ಸಾಂಸಾರಿಕ ಸುಖಗಳ ಆಸೆಗೆ ಅಂತ್ಯವೆಂಬುದೇ ಇಲ್ಲ. ಅದು ಕೇವಲ ದುಃಖದೆಡೆಗೇ ಒಯ್ಯುವಂಥದ್ದು. ಆದ್ದರಿಂದ ಅದರಿಂದ ಮುಕ್ತಳಾಗು. ನಿನ್ನನ್ನು ನೀನು ಈ ಲೌಕಿಕ ಸುಖಗಳಿಂದ ದೂರವಿಟ್ಟುಕೋ. ಪ್ರಾಪಂಚಿಕದ್ದಾದ ಯಾವ ವಸ್ತುವಿನ ಹಿಂದೆ ನಿನ್ನ ಆಸೆ ಬೆನ್ನು ಹತ್ತುತ್ತದೆಯೋ, ಅದೇ ಅಸುಖ ಮತ್ತು ಅಪಾರ ದುಃಖಗಳಿಗೆ ಕಾರಣಭೂತವಾಗುತ್ತದೆ. ಪ್ರಪಂಚದ ಶ್ರೀಮಂತಿಕೆಗಳೂ ತಾತ್ಕಾಲಿಕದವು. ಈ ಪ್ರಪಂಚದಲ್ಲಿ ಶಾಶ್ವತ ಸುಖ ಎಂಬುದಿಲ್ಲವೇ ಇಲ್ಲ. ಶಾಶ್ವತ ಸುಖವನ್ನು ನೀನು ಅರಸಬೇಕು. ಸಾಂಸಾರಿಕ ಸುಖಗಳ ಮೇಲೆ ಏರು. ನಿನ್ನೊಳಗಿನ ಶಾಶ್ವತ ಸತ್ಯವನ್ನು ಅರಿತುಕೊಳ್ಳಲು ಜೀವಿಸು. ಪ್ರಾಪಂಚಿಕ ಸುಖಗಳ ಹಿಂದೆ ಬೀಳಬೇಡ. ವಿಷಯ ಲೋಲುಪತೆಯ ಆಸೆಗಳು ನಾಶಪಡಿಸುವಂಥವು. ನಿನ್ನ ಆತ್ಮವನ್ನು ಅವುಗಳಿಗೆ ಬಲಿಯಾಗಲು ಬಿಡಬೇಡ.

ಹೀಗೆ ದತ್ತ, ತನ್ನ ಪೂರ್ಣಪ್ರಯತ್ನದಿಂದ, ಲೀಲಳನ್ನು ಜಾಗೃತಗೊಳಿಸಲು ಯತ್ನಿಸಿದನು. ಆದರೆ, ಸಾಂಸಾರಿಕ ಸುಖಗಳು, ಅವಳನ್ನು ತಮ್ಮ ಹಿರಿಮೆಯಿಂದ ಸೆಳೆದುಕೊಂಡಿದ್ದವು. ಅವಳು ಆಸೆ ಆಕಾಂಕ್ಷೆಗಳಿಂದಾಗಿ ಕುರುಡಾಗಿದ್ದಳು ಮತ್ತು ತನ್ನ ಆಸೆ ಆಕಾಂಕ್ಷೆಗಳು ಮತ್ತು ದುರಾಕರ್ಷಣೆಗಳನ್ನು ತಡೆದುಕೊಳ್ಳಲಾರದವಳಾಗಿದ್ದಳು. ಆದರೆ ತನ್ನ ಪತಿಯಿಂದ ದೂರವಾಗುವ ಯೋಚನೆಯೂ ಅವಳಿಗೆ ಬೇಡವಾಗಿತ್ತು. ಒಳ್ಳೆಯ ಮಾತುಗಳಿಂದ ಅವನು ಪ್ರಭಾವಿತನಾಗುವುದಿಲ್ಲವೆಂದು ಕಂಡುಕೊಂಡು, ಲೀಲ, ಅವನಿಗೇ ಸವಾಲು ಹಾಕುವಂತೆ, "ನೀನು ಹೀಗೆ ನನ್ನನ್ನು ಬಿಟ್ಟು ಹೋಗಲಾರೆ. ನಾನು ನಿನ್ನ ಮಹಿಷಿ" ಎಂದಳು. ಆಗಂತೂ ದತ್ತನ ಕೋಪ ನೆತ್ತಿಗೇರಿತು. ಅವನು



ಅವಳನ್ನು ಶಪಿಸುತ್ತಾ, "ನಿನ್ನನ್ನು ನೀನು ಮಹಿಷಿ ಎಂದು ಹೇಳಿಕೊಂಡು, ನನ್ನನ್ನೇಕೆ ವಿರೋಧಿಸುತ್ತೀ? ನೀನು ರಾಕ್ಷಸರ ಕುಟುಂಬದಲ್ಲಿ ಮಹಿಷಿಯಾಗಿ (ಹೆಣ್ಣು ಎಮ್ಮೆ) ಹುಟ್ಟು" ಎಂದನು. ಅದನ್ನು ಕೇಳಿ ಲೀಲ ದಿಗ್ಭ್ರಾಂತಳಾದಳು. ಕೋಪದಲ್ಲಿ ಅವಳೂ ದತ್ತನಿಗೆ ಶಾಪ ನೀಡುತ್ತಾ, "ನಾನು ಮಹಿಷಿಯಾಗಿ ಹುಟ್ಟಿದಾಗ, ನೀನು ಮಹಿಷನಾಗಿ ಹುಟ್ಟಿ, ನಿನ್ನ ಸಮಯವನ್ನೆಲ್ಲಾ ನನ್ನೊಂದಿಗೇ ಕಳೆಯಬೇಕು" ಎಂದಳು.

ದತ್ತ ಮೊದಲೇ ಎಚ್ಚರಿಸಿದ್ದಾಗ್ಯೂ, ಲೀಲ ಅವನನ್ನು ಅತ್ಯಂತ ಪ್ರೀತಿಸಿದ್ದಳು. ದತ್ತನ ಸಾಂಗತ್ಯಕ್ಕಾಗಿ ಅವಳ ಆಸೆ ಅತಿಯಾಗಿತ್ತು. ಅದೇ ಅವಳ ನಾಶಕ್ಕೆ ಕಾರಣವಾಯಿತು. ಅವಳ ಸಾಂಸಾರಿಕ ಭೋಗದ ತೀವ್ರ ಆಕಂಕ್ಷೆ, ಅವಳನ್ನು ಒಂದು ಘೋರವಾದ ದುಃಖಕ್ಕೀಡುಮಾಡಿತು.

ಈ ಪ್ರಪಂಚದಲ್ಲಿ ಆಸೆಯಿಂದ ಆಗಿರುವ ಸರ್ವನಾಶಗಳು ಯಾವುದಿಲ್ಲ? ಆದರೂ, ಈ ರಾಕ್ಷಸೀ ಶತ್ರುವಿಗೆ ಗುಲಾಮರಾಗಿಯೇ ಇರುವ ಆಸೆ ಜನಗಳಿಗೆ. ಅವರ ಆತ್ಮಗಳ ನಾಶಕ, ಆಸೆ. ಪ್ರಪಂಚದ ಚರಿತ್ರೆಯಲ್ಲಿ, ವೈಯಕ್ತಿಕ, ಜಾತಿಗೆ ಮತ್ತು ರಾಷ್ಟ್ರಕ್ಕೆ ಸಂಬಂಧಿಸಿದಂತೆ ಆತ್ಮಹತ್ಯೆಗಳು, ನಾಶ ಮತ್ತು ವಿಧ್ವಂಸಗೊಳಿಸುವಿಕೆಗಳೇ ತುಂಬಿವೆ. ಪರಿಣಾಮ ಸ್ವರೂಪವಾಗಿ ತಮಗೆ ಬೇಕಾದವುಗಳನ್ನು ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಪಡೆಯಲು ಯತ್ನಿಸುತ್ತಾರೆ. ಭಾರತದ ಎರಡು ಭವ್ಯವಾದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳು, ಆಸೆಯ ಹಿಂದೆ ಬಿದ್ದು ಹುಡುಕಿಕೊಂಡು ಹೋದರೆ, ಉಂಟಾಗುವ ನಾಶಕಾರಕ ಮತ್ತು ಅನರ್ಥಕಾರಕ ಪರಿಣಾಮಗಳ ಬಗ್ಗೆ ನಮಗೆ ಉತ್ತಮವಾದ ಪಾಠಗಳನ್ನು ಕಲಿಸುತ್ತವೆ. ರಾವಣನ ಪ್ರಾಣಹಾನಿಗೆ ಕಾರಣವಾದದ್ದು ಅವನ ಆಸೆಯೇ ಆಗಿತ್ತಲ್ಲವೇ? ಅದು ಅವನ ಸಾವಿನಿಂದ ಪೂರ್ಣಗೊಂಡಿತೇನು? ಇಲ್ಲ, ಅವನ ಇಡೀ ಕುಲ ನಾಶವಾಯಿತು. ಅವನ ರಾಜ್ಯವೂ ಮುಂದೆಂದೂ ಏಳಲಾಗದ ರೀತಿಯಲ್ಲಿ ನೆಲಸಮವಾಯಿತು. ನಂತರದ ಮಹಾಕೃತಿಯಾದ ಮಹಾಭಾರತದಲ್ಲಿಯೂ, ನಾವು ಕಲಿತ ಪಾಠ ಕಡಿಮೆಯದೇನೂ ಅಲ್ಲ. ಅಧಿಕಾರ ಮತ್ತು ಸಿರಿಸಂಪತ್ತುಗಳು ಆಸೆಗಳೇ, ಕೌರವರ ಮತ್ತು ಅವರ ಸಮರ್ಥಕರ ಮುಖ್ಯಸ್ಥನನ್ನು ನಿರ್ನಾಮದ ಮಾರ್ಗದತ್ತ ಸೆಳೆದಿದ್ದು? ಮನುಷ್ಯನಲ್ಲಿರುವ ಕೆಟ್ಟ ಗುಣ ಎಂದರೆ ಆಸೆ. ಅದು ಅವನ ಸ್ಫೂರ್ತಿಯನ್ನು ಜಯಪ್ರದವಾಗಿ ಮುಚ್ಚಿಡುತ್ತದೆ ಮತ್ತು ತನ್ನತ್ತ ಸೆಳೆಯುತ್ತದೆ. ಎಲ್ಲಿಯವರೆಗೆ ಪ್ರಾಪಂಚಿಕ ವೃದ್ಧಿಗಳು ನಮ್ಮ ಜೀವನಗಳನ್ನು ಆಳುತ್ತವೆಯೋ, ಅಲ್ಲಿಯವರೆಗೆ ನಾವು ಪರಸ್ಪರ, ಮೂಕ ಪಶುಗಳು ಜಮೀನಿನಲ್ಲಿ ಒಂದರ ಹಿಂದೆ ಮತ್ತೊಂದು ಹೋಗುವಂತೆಯೇ, ಇತರರನ್ನು ಹಿಂಬಾಲಿಸುತ್ತಿದ್ದು, ಅವುಗಳಿಗೆ ಗುಲಾಮರಾಗಿದ್ದುಕೊಂಡು, ಅವುಗಳ ತಾಳಕ್ಕೆ ಸರಿಯಾಗಿ ಕುಣಿಯುತ್ತೇವೆ.

ನಮ್ಮ ಜೀವನಗಳ ನಿಜವಾದ ಉದ್ದೇಶವನ್ನು ಸಾಧಿಸಿಕೊಳ್ಳುವ ಪ್ರಯತ್ನದಲ್ಲಿ, ಆಸೆ ಎಂಬ ದೊಡ್ಡ ತಡೆಯನ್ನು ತ್ಯಜಿಸಬೇಕು. ಏಕೆಂದರೆ ಎಲ್ಲೆಲ್ಲಿ ಆಸೆ ಇರುತ್ತದೆಯೋ, ಅಲ್ಲೆಲ್ಲಾ ಕಾರಣ ಸೋಲುತ್ತದೆ. ಕಾರಣ ಸೋತಾಗ, ಪ್ರತಿಯೊಂದು ವಿಫಲವಾಗುತ್ತದೆ.

ದತ್ತನಲ್ಲಿ ಕಾರಣ, ಆಸೆಗೆ ವಿರುದ್ಧವಾಗಿ ಕದನದಲ್ಲಿ ಸ್ಥಿರವಾಗಿ ನಿಂತಿತು. ಆದ್ದರಿಂದ ಗೆದ್ದಿತು. ಆಸೆ, ಕಾರಣವನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಸೋತಿತು. ಜೊತೆಗೆ ಆತ್ಮವನ್ನು ಪ್ರಜ್ಞೆಯ ಕೆಳಮಟ್ಟದ ಅಜ್ಞಾನದ ಮಟ್ಟಕ್ಕೆ ಎಳೆಯುವುದರಲ್ಲಿಯೂ ಗೆಲ್ಲಲಿಲ್ಲ.

ದತ್ತನ ಶಾಪದ ಪರಿಣಾಮವಾಗಿ ಲೀಲ, ಮಹಿಷಿಯಾಗಿ ಎಮ್ಮೆಯ ಮುಖ ಹೊತ್ತು, ಕರಂಬ ಎಂಬ ಅಸುರನ ಮಗಳಾಗಿ ಜನ್ಮ ತಾಳಿದಳು. ಮಹಿಷಾಸುರ ಕರಂಬನ ಅಣ್ಣ ರಂಬನ ಮಗನಾಗಿದ್ದನು. ಚಂಡಿಕಾದೇವಿ ಮಹಿಷಾಸುರನನ್ನು ಕೊಂದಳು. ಆ ಸಾವಿಗೆ ಸೇಡು ತೀರಿಸಿಕೊಳ್ಳಲು, ಮಹಿಷಿ ವಿಂಧ್ಯಪರ್ವತಗಳ ಮೇಲೆ ತಪಸ್ಸು ಮಾಡಿ, ಬ್ರಹ್ಮನನ್ನು ಒಲಿಸಿಕೊಳ್ಳಲು ಯತ್ನಿಸಿದಳು. ಮಹಿಷಿಯ ಭಕ್ತಿಯಿಂದ ಸಂತುಷ್ಟವಾಗಿ, ಅವಳನ್ನು ಬ್ರಹ್ಮ, ಏನಾದರೂ ವರವನ್ನು ಕೇಳಲು ಹೇಳಿದನು. ಆದರೆ ದೈಹಿಕ ಅಮರತ್ವವನ್ನು ಮಾತ್ರ ಕೇಳಕೊಡದೆಂದನು. ನಂತರ, ಅವಳ ಆಸೆಯಂತೆ, ವರವನ್ನು ನೀಡುತ್ತಾ, "ನೀನು ದೇವಲೋಕವನ್ನು ಆಳುವೆ, ದೇವೇಂದ್ರ ನಿನ್ನ ಗುಲಾಮನಾಗುತ್ತಾನೆ. ನಿನ್ನ ಕುಲ ಬೆಳೆಯುತ್ತದೆ. ಹರಿ, ಹರರಿಗೆ ಹುಟ್ಟಿದವನ ಕೈಗಳಿಂದ ಮಾತ್ರ ನಿನಗೆ ಸಾವು ನಿಖರ. ನಿನ್ನನ್ನು ಕೊಲ್ಲುವವನು ಈಗಾಗಲೇ ಒಬ್ಬನ ಗುಲಾಮನಾಗಿ ಹನ್ನೆರಡು ವರ್ಷಗಳನ್ನು ಕಳೆದಿದ್ದಾನೆ" ಎಂದನು.

ಹಾಗಾದರೆ ದೇವಿ ಚಂಡಿಕೆ, ಮಹಿಷಾಸುರನಿಗೆ ಮಾಡಿದ ತಪ್ಪೇನು, ಮತ್ತು ಮಹಿಷಿ, ದೇವೇಂದ್ರನನ್ನು ಗುಲಾಮನನ್ನಾಗಿ ಮಾಡಿಕೊಂಡು ದೇವಲೋಕವನ್ನು ಆಳಬೇಕೆಂದು ಏಕೆ ಆಸೆ ಪಟ್ಟಳು?

ಧನುವಿನ ಮಕ್ಕಳಾಗಿ ಕದಂಬ ಮತ್ತು ರಂಬ ಎಂಬ ಇಬ್ಬರು ಅಸುರರು ಹುಟ್ಟಿದರು. ಇಬ್ಬರೂ ಭಗವದ್ಭಕ್ತರು. ಅವರಿಬ್ಬರಿಗೂ, ಸಂತತಿಯನ್ನು ಮುಂದುವರಿಸಲು ಗಂಡು ಮಕ್ಕಳೇ ಇರಲಿಲ್ಲ. ಪುತ್ರಪ್ರಾಪ್ತಿಗಾಗಿ ಅವರಿಬ್ಬರೂ ಘೋರ ತಪಸ್ಸು ಮಾಡಿ, ಅಗ್ನಿದೇವನನ್ನು ಪ್ರಸನ್ನಗೊಳಿಸಿಕೊಳ್ಳಲು ಯತ್ನಿಸಿದರು. ರಂಬ ಉರಿಯುತ್ತಿದ್ದ ಅಗ್ನಿಯಲ್ಲಿ ನಿಂತು ತಪಸ್ಸು ಮಾಡಿದರೆ, ಕದಂಬ ನೀರಿನಲ್ಲಿ ನಿಂತು ತಪಸ್ಸು ಮಾಡಿದನು. ಅವರಿಬ್ಬರ ತಪಸ್ಸುಗಳ ತೀಕ್ಷ್ಣತೆ ದೇವೇಂದ್ರನನ್ನೇ ನಡುಗಿಸಿದವು. ಅವರಿಬ್ಬರಲ್ಲಿ ಯಾರಾದರೊಬ್ಬರು ತನ್ನ ಸ್ಥಾನವನ್ನೇ ಕಿತ್ತುಕೊಳ್ಳಬಹುದೆಂದು ಭಾವಿಸಿ, ಇಂದ್ರನು ಅವರಿಬ್ಬರನ್ನೂ ಸಾಯಿಸುವ ನಿರ್ಧಾರ ಮಾಡಿಕೊಂಡನು. ಮೊಸಳೆಯ ರೂಪ ತಾಳಿ ಅವನು ಕರಂಬನನ್ನು ಕೊಂದನು. ತನ್ನ ಪ್ರೀತಿಯ ಸಹೋದರನ



ಮೃತ್ಯುವಿನಿಂದ ಬಹಳ ದುಃಖಗೊಂಡಿದ್ದ ರಂಬ, ತನ್ನ ತಲೆಯನ್ನೇ ಕಡಿದುಕೊಂಡು ಸಾಯಲು ನಿರ್ಧರಿಸಿದನು. ಕತ್ತಿಯನ್ನು ತೆಗೆದುಕೊಳ್ಳಲು ಕೈಹಾಕಿದ ತಕ್ಷಣ, ಅಗ್ನಿ ಅವನೆದುರಿಗೆ ಪ್ರತ್ಯಕ್ಷನಾಗಿ ಅವನನ್ನು ಸಮಾಧಾನಪಡಿಸಿ, ತನಗೇನು ವರಬೇಕೋ ಅದನ್ನು ಕೇಳಲು ಹೇಳಿದನು. ಆಗ ರಂಬ, "ನನಗೆ ನೀನು ಒಬ್ಬ ಪುತ್ರನನ್ನು ಕರುಣಿಸು. ಆದರೆ ಅವನು ದೇವತೆಗಳು, ಅಸುರರು ಅಥವಾ ಮನುಷ್ಯರು ಯಾರಿಂದಲೂ ಕೊಲ್ಲಲಾಗದವನಾಗಿರಬೇಕು." ಎಂದನು. ಅಗ್ನಿದೇವ ತಕ್ಷಣವೇ ವರ ನೀಡುತ್ತಾ "ನಿನಗೆ ನಿನ್ನಿಷ್ಟದಂತೆ ಒಬ್ಬ ಮಗ ಹುಟ್ಟುತ್ತಾನೆ, ನೀನು ಯಾರನ್ನು ಪ್ರೇಮಿಸುವೆಯೋ ಅವಳಿಂದ" ಎಂದನು.

ರಂಬನಿಗೆ ಆ ವರದಿಂದ ಬಹಳ ಆನಂದವಾಯಿತು. ಅವನು ಹಿಂದಿರುಗುತ್ತಿದ್ದಾಗ, ಅವನಿಗೆ ಯಕ್ಷರ ಪ್ರಪಂಚದಲ್ಲಿ ಒಂದು ಗರ್ಭಿಣಿ ಎಮ್ಮೆ ಕಾಣಿಸಿತು. ಅದರ ಬಗ್ಗೆ ಅವನಲ್ಲಿ ಪ್ರೇಮವುಂಟಾಯಿತು. ಅವನು ಅದನ್ನು ಪಾತಾಳ ಲೋಕದ ಒಂದು ಏಕಾಂತ ಪ್ರದೇಶಕ್ಕೆ ಕೊಂಡೊಯ್ದನು. ಪಾತಾಳದಲ್ಲಿದ್ದ ಮತ್ತೊಂದು ಎಮ್ಮೆಗೆ, ಆ ಗರ್ಭಿಣಿ ಎಮ್ಮೆಯ ಮೇಲೆ ಮೋಹವುಂಟಾಯಿತು. ಅದಕ್ಕಾಗಿ ಅದು ಪ್ರಯತ್ನಿಸುತ್ತಿದ್ದಾಗ, ಅಲ್ಲಿಂದ ರಂಬನನ್ನು ಅಟ್ಟಿಸಿತು. ರಂಬ ಓಡಿಹೋಗಿ ಯಕ್ಷರ ಪ್ರಪಂಚ ತಲುಪಿದನು. ಆದರೂ ಆ ಎಮ್ಮೆ ಅಟ್ಟಿಸಿಕೊಂಡು ಬಂದು, ಅವನನ್ನು ಕೊಂದುಹಾಕಿತು. ಯಕ್ಷರೇ ಅವನ ದೇಹವನ್ನು ಸುಟ್ಟರು. ಆ ಬೆಂಕಿಯೊಳಕ್ಕೆ ಗರ್ಭಿಣಿ ಎಮ್ಮೆ ಪ್ರವೇಶಿಸಿತು. ಆ ಬೆಂಕಿಯಿಂದ ಮಹಿಷಾಸುರ ಆಚೆಗೆ ಬಂದನು. ರಂಬ ಮತ್ತೊಮ್ಮೆ ಅಸುರರ ಕುಟುಂಬದಲ್ಲಿಯೇ ಜನ್ಮ ತಾಳಿ, ರಕ್ತಬೀಜ ಎಂದು ಹೆಸರು ಪಡೆದನು.

ಮಹಿಷಾಸುರ ತಪಸ್ಸಿಗೆ ಕುಳಿತು, ಬ್ರಹ್ಮದೇವನನ್ನು ಒಲಿಸಿಕೊಂಡನು. ಆಗ "ದೈಹಿಕ ಅಮರತ್ವವೊಂದನ್ನು ಬಿಟ್ಟು, ಬೇರೆ ಯಾವ ವರವನ್ನು ಬೇಕಾದರೂ ಕೇಳು" ಎಂದು ಬ್ರಹ್ಮದೇವನು ಹೇಳಿದನು. ಆಗ ಮಹಿಷಾಸುರ, "ತನ್ನನ್ನು ಯಾವ ಮನುಷ್ಯನೂ ಕೊಲ್ಲುವಂತಿಲ್ಲ" ಎಂದು ಬೇಡಿದನು. ಆದರೆ ಅವನು, "ಹೆಂಗಸರು ನನ್ನನ್ನು ಕೊಲ್ಲುವಂತಿಲ್ಲ" ಎಂದು ಕೇಳಲಿಲ್ಲ. ಪ್ರಾಯಶಃ "ಅದು ಹೆಂಗಸರಿಂದ ಆಗದ ಕೆಲಸ" ಎಂದೇ ಭಾವಿಸಿದ್ದನೋ ಏನೋ. ಬ್ರಹ್ಮದೇವ ವರ ನೀಡಿದನು.

ಮಹಿಷಾಸುರ ಇಡೀ ವಿಶ್ವವನ್ನು ಜಯಿಸಿ, ಚಕ್ರವರ್ತಿಯಾಗಿ ಮೆರೆದನು. ಅವನಿಂದ ನಡೆಯುತ್ತಿದ್ದ ಅತ್ಯಾಚಾರಗಳನ್ನು ತಡೆದುಕೊಳ್ಳಲಾಗದೆ, ದೇವತೆಗಳು ಮತ್ತು ತ್ರಿಮೂರ್ತಿಗಳು ಒಂದೆಡೆ ಸೇರಿ, ಮಹಿಷಾಸುರನನ್ನು ಕೊಲ್ಲಲು ನಿರ್ಧರಿಸಿದರು. ಅವನು ಬ್ರಹ್ಮನಿಂದ ಪಡೆದಿದ್ದ ವರವನ್ನು ಪರಿಹರಿಸಲು, ಅವರು ತಮ್ಮಲ್ಲಿದ್ದ ಆಧ್ಯಾತ್ಮಿಕ ಶಕ್ತಿಗಳನ್ನೆಲ್ಲಾ ಒಂದುಗೂಡಿಸಿ, ಸುಂದರಿಯಾಗಿದ್ದ ಹೆಂಗಸೊಬ್ಬಳನ್ನು ಸೃಷ್ಟಿಸಿದರು. ಅವಳಿಗೆ ಹದಿನೆಂಟು ಕೈಗಳು, ಮೂರು ಕಣ್ಣುಗಳು

ಇದ್ದವು. ಅವಳನ್ನು ಚಂಡಿಕಾ ದೇವಿ ಎಂದು ಕರೆದರು. ಇತರ ವಿವಿಧ ದೇವತೆಗಳು ಆಕೆಗೆ ತಮ್ಮಲ್ಲಿದ್ದ ವಿವಿಧ ಶಸ್ತ್ರಾಸ್ತ್ರಗಳನ್ನು ಕಾಣಿಕೆಗಳಾಗಿ ಅರ್ಪಿಸಿದರು.

ದೇವತೆಗಳು ಅವಳನ್ನು ಶ್ಲಾಘಿಸಿದರು. ತನ್ನ ಆನಂದದಲ್ಲಿ ಅವಳು ಎಷ್ಟು ಗಟ್ಟಿಯಾಗಿ ನಕ್ಕಳು ಎಂದರೆ, ಮೂರು ಪ್ರಪಂಚಗಳೂ ನಡುಗಿದವು. ಆ ನಗುವಿನಿಂದ ಮಹಿಷಾಸುರನ ಕೋಪ ಏರಿತು. ಅವನು ತನ್ನ ಜನರನ್ನು ಕರೆದು, ಹಾಗೆ ನಕ್ಕವಳನ್ನು ತನ್ನ ಮುಂದೆ ಕರೆತಂದು ನಿಲ್ಲಿಸಲು ಹೇಳಿದನು. ಅವನು ಹಾಗೆ ನಕ್ಕ ಆ ದುರಹಂಕಾರದ ವ್ಯಕ್ತಿಗೆ ಶಿಕ್ಷೆ ನೀಡಲು ಮನಸ್ಸು ಮಾಡಿದ್ದನು. ಅಲ್ಪ ಸಮಯದ ನಂತರವೇ, ಅವರೆಲ್ಲರಿಗೂ, ಹಾಗೆ ನಕ್ಕ ತಪ್ಪಿತಸ್ಥೆ ಚಂಡಿಕಾದೇವಿಯೇ ಎಂದು ತಿಳಿಯಿತು. ಆದರೆ ಅವಳ ಮುಂದೆ, ಆ ರಾಕ್ಷಸರು ಶಕ್ತಿಹೀನರೇ ಆಗಿದ್ದರು. ಹಾಗಾಗಿ, ಅವರೆಲ್ಲರೂ ಮಹಿಷಾಸುರನ ಬಳಿಗೆ ಓಡಿಹೋಗಿ, ತಾವು ಅವನ ಆಜ್ಞೆಯನ್ನು ಪಾಲಿಸಲಾಗಲಿಲ್ಲವೆಂದು ಹೇಳಿಕೊಂಡರು. ಮಹಿಷಾಸುರ ತನ್ನ ಹಿರಿಯ ಸೇನಾಧಿಪತಿಯನ್ನು ಕರೆದು ದೇವಿಯನ್ನು ಕರೆತಂದು ತನ್ನ ಎದುರಿಗೆ ನಿಲ್ಲಿಸಲು ಹೇಳಿದನು. ಆ ಸೇನಾಧಿಪತಿಯಿಂದ ದೇವಿಯನ್ನು ಪ್ರಲೋಭನಗೊಳಿಸುವ ಕೆಲಸ ಸಾಧ್ಯವಾಗಲಿಲ್ಲ. ಬದಲಿಗೆ ದೇವಿಯೇ ಅವನನ್ನು ಚೆನ್ನಾಗಿ ಬೈದು ಕಳುಹಿಸಿದಳು. ಅದನ್ನು ಕೇಳಿದ ಮಹಿಷಾಸುರ ತಾನೇ ಹೊರಟನು. ದೇವಿಯೊಂದಿಗೆ ಅವನು ಯುದ್ಧವನ್ನೇ ಮಾಡಿದನು. ಘೋರವಾಗಿ ಕಾದಾಡಿದನಾದರೂ, ಅವಳ ಕೈಯಿಂದಲೇ ಮೃತನಾದನು. ಆಗ ವಿಶ್ವದಲ್ಲಿ ಶಾಂತಿ ಉಂಟಾಯಿತು. ದೇವಿ ವಿಶ್ವವನ್ನು ಆಶೀರ್ವದಿಸಿದಳು. ನಂತರ ತಾನೆಲ್ಲಿಂದ ಬಂದಿದ್ದಳೋ ಅದೇ ಶಕ್ತಿಯಲ್ಲಿ ಲೀನಳಾದಳು.

ಮಹಿಷಿ, ಮಹಿಷಾಸುರನ ಸಾವಿಗೆ ಸೇಡು ತೀರಿಸಿಕೊಳ್ಳಲು ಬಯಸಿ, ವರವನ್ನು ಆಯ್ಕೆ ಮಾಡಿಕೊಂಡು, ದೇವತೆಗಳನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡು ಅವರ ರಾಜ್ಯವನ್ನೂ ಆಳಬೇಕೆಂದು ಆಸೆ ಪಟ್ಟಳು.

ತನಗೆ ಸಿಕ್ಕಿದ್ದ ವರದಿಂದ ಅತ್ಯಂತ ತುಷ್ಟಳಾಗಿದ್ದ ಮಹಿಷಿ, ಸಮಯ ವ್ಯರ್ಥ ಮಾಡಲೇ ಇಲ್ಲ. ಅವಳು ನೇರವಾಗಿ ದೇವಲೋಕಕ್ಕೆ ಹೋದಳು. ದೇವೇಂದ್ರನನ್ನು ಯುದ್ಧಕ್ಕೆ ಪ್ರೇರಿಸಿ, ಅವನೊಂದಿಗೆ ಹೋರಾಡಿ, ಅವನನ್ನು ಸೋಲಿಸಿದ್ದಲ್ಲದೆ, ಅವನ ಸಿಂಹಾಸನವನ್ನೂ ಹಕ್ಕಿಲ್ಲದೆ ಆಕ್ರಮಿಸಿಕೊಂಡಳು. ದೇವೇಂದ್ರ ಗುಲಾಮನಾಗಿದ್ದ. ಮಹಿಷಿ ದೇವತೆಗಳನ್ನು ತೊಂದರೆಗೀಡುಮಾಡಲಾರಂಭಿಸಿದಳು. ಅವಳ ಕ್ರೂರವಾದ ಆಡಳಿತ ಕ್ರಮ ಅಸಹನೀಯದ್ದಾದಾಗ, ದೇವೇಂದ್ರನು ದೇವತೆಗಳೊಂದಿಗೆ ಬ್ರಹ್ಮನನ್ನು ಕುರಿತು ತಮ್ಮನ್ನು ರಕ್ಷಿಸುವಂತೆ ಬೇಡಿಕೊಂಡನು. ಬ್ರಹ್ಮನೂ ವಿಷ್ಣು ಮತ್ತು ಶಿವ ಇಬ್ಬರ ಬಳಿಯೂ ಹೋಗಿ ವಿಷಯ ತಿಳಿಸಿದನು. ತ್ರಿಮೂರ್ತಿಗಳು ಒಂದಾದರು. ಆಗ ದತ್ತನ ಶಕ್ತಿಯು, ಅವರಿಂದ ಆಚೆಗೆ ಬಂದು,



ಒಂದು ಎಮ್ಮೆಯ ಆಕಾರ ತಳೆಯಿತು. ಅದನ್ನು ಅವರೆಲ್ಲರೂ 'ಸುಂದರ ಮಹಿಷ' ಎಂದು ಕರೆದರು. ಈ ರೀತಿಯಾಗಿ ದತ್ತನ ಮೇಲೆ ಲೀಲಳ ಶಾಪ, ಪ್ರಭಾವ ಬೀರಿತು. ಪರಮಾತ್ಮ ವಿಷ್ಣು, ಸುಂದರವಾಗಿದ್ದ ಎಮ್ಮೆಯನ್ನು ಆಶೀರ್ವದಿಸಿ, "ದೇವೇಂದ್ರನನ್ನು ತಳ್ಳಿಹಾಕಿ, ರಾಜ್ಯಭಾರ ಮಾಡುತ್ತಿರುವ ಮಹಿಷಿಯ ಬಳಿಗೆ ಹೋಗು. ಅವಳನ್ನು ಭೂಮಿಗೆ ಕರೆದುಕೊಂಡು ಹೋಗು" ಎಂದನು.

ಆಸೆ ನಿಜವಾಗಿಯೂ ಎಂಥಾ ಮೋಸದ್ದು ಮತ್ತು ಕುರುಡಾದದ್ದು! ತನ್ನ ತಪಸ್ಸಿಗೇ ಜೀವನವನ್ನು ಮುಡುಪಾಗಿಟ್ಟಿದ್ದ ಮಹಿಷಿ, ತನ್ನ ಸಹೋದರನ ಸಾವಿಗಾಗಿ ಎಷ್ಟು ಕುರುಡಾಗಿದ್ದಳು ಎಂದರೆ, ಅವಳು ತನ್ನ ಸೇಡಿನ ಬಗ್ಗೆ ಪೂರ್ತಿ ಮರೆತೇ ಬಿಟ್ಟಿದ್ದಳು, ಲೌಕಿಕಕ್ಕಿಳಿದಿದ್ದಳು. ಆಸೆ ನಮ್ಮಲ್ಲಿನ ಉತ್ತಮವಾದದ್ದನ್ನು ಪಡೆಯದಿರಲಿ. ಇಲ್ಲದಿದ್ದರೆ ನಾವು ನಮ್ಮ ಜೀವನಗಳ ಆಶಯವನ್ನೇ ಮರೆಯುತ್ತೇವೆ. ಮಹಿಷಿ ತನ್ನ ಸೇಡನ್ನು ಮರೆತಳು. ತನ್ನ ಆತ್ಮತ್ಯಾಗದಿಂದಲೇ ಅವಳು ಅದನ್ನು ಗೆಲ್ಲಲಾಗುತ್ತಿದ್ದದ್ದು. ದೇವೇಂದ್ರ ಈ ವಿಧವಾಗಿ ಮಹಿಷಿಯಿಂದ ತಾತ್ಕಾಲಿಕವಾಗಿ ದೂರವಾಗಿ, ತನ್ನ ರಾಜ್ಯಕ್ಕೆ ಹಿಂದಿರುಗಿದನು. ಆದರೂ ಅವಳು ಪೂರ್ತಿ ನಾಶವಾಗುವವರೆಗೂ ಅವನಿಗೆ ಕ್ಷೇಮದ ಭಾವನೆ ಬರುವುದು ಸಾಧ್ಯವಿರಲಿಲ್ಲ. ಅವಳು ಯಾವಾಗ ಬೇಕಾದರೂ ವಾಪಸ್ಸು ಬಂದು, ತನ್ನ ಕೀಳು ಚಟುವಟಿಕೆಯನ್ನು ಆರಂಭಿಸಬಹುದಾಗಿತ್ತು.

ಅವಳನ್ನು ಹೇಗೆ ಸಾಯಿಸುವುದು? ಹರಿಹರರಿಗೆ ಹುಟ್ಟಿದವನಿಂದ ಮಾತ್ರ ಎಂದರೆ ಇಬ್ಬರೂ ಭಾವಾತ್ಮಕದವರಿಗೆ ಹುಟ್ಟಿದವನಾಗಿರಬೇಕು. ಆಗ ಮತ್ತೆ ದೇವತೆಗಳು ಶಿವಪರಮಾತ್ಮನ ಬಳಿಗೆ ಹೋಗಿ, ಅವನನ್ನು ಸ್ತುತಿಸಿ, ಮಹಿಷಿಯ ಅತ್ಯಾಚಾರಗಳಿಂದ ಮುಕ್ತಿ ನೀಡಬೇಕೆಂದು, ಬೇಡುತ್ತಾ, ಅವನ ಪಾದಗಳಿಗೆ ನಮಸ್ಕರಿಸಿದರು. ಮಹಿಷಿಯ ಗುರಿ ಕೇವಲ ದೈಹಿಕ ಅಮರತ್ವ ಪಡೆಯುವುದಾಗಿದ್ದು, ದೇವತೆಗಳಿಗೆ ಎಡೆಬಿಡದ ಭಯ ಉತ್ಪಾದಿಸುವುದು ಮಾತ್ರ ಆಗಿತ್ತು. ಆದರೂ ಅವಳನ್ನು ವರ ಬೇಡಿಕೊಳ್ಳಲು ಹೇಳಿದಾಗ, ಅವಳು ದೈಹಿಕ ಅಮರತ್ವದ ಬಗ್ಗೆ ಬೇಕೆಂದೇ ಸೇರಿಸಲಿಲ್ಲ. ಅವಳು, ಅತ್ಯಂತ ಬುದ್ಧಿವಂತಿಕೆಯಿಂದ, ಇಬ್ಬರು ಗಂಡಸರಿಗೆ ಹುಟ್ಟಿದ ಮಗುವಿನಿಂದ ಮಾತ್ರ ತನ್ನ ಸಾವು ಖಚಿತವೆಂದು ಹೇಳಿದಳು. ಅದರಿಂದ ಬ್ರಹ್ಮನು ಹೇಳಿದ ಮಿತಿಯನ್ನು ಬುದ್ಧಿವಂತಿಕೆಯಿಂದಲೇ ಸೋಲಿಸುವುದೆಂದು ಯೋಚಿಸಿದರು. ಏಕೆಂದರೆ, ಮಾನವ ಸ್ತರದಲ್ಲಿ, ಅವಳಿದ್ದದ್ದರಿಂದ, ಅಂಥ ಹುಟ್ಟು ಅಸಾಧ್ಯದ್ದೇ ಆಗಿತ್ತು.

ನಮ್ಮ ಪುರಾಣಗಳು ತೊಂದರೆಗಳಿಂದ ತಪ್ಪಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ನೀಡುತ್ತವೆಯಾದರೂ, ವಿಷ್ಣು, ಮೋಹಿನಿ ಎಂಬ ಸ್ತ್ರೀ ಆಗಿ, ಅಮೃತ ಮಂಥನದ ಸಮಯದಲ್ಲಿ, ಅಸುರರ ಕೈಗಳಿಂದ ಅಮೃತದ ಮಡಕೆಯನ್ನು ಕಿತ್ತುಕೊಳ್ಳಲಿಲ್ಲವೇ? ಭೂತನಾಥದೇವ ಎಂಬ ದೇವ, ಎರಡು ಸಕಾರಾತ್ಮಕಗಳ

ಸಂಗಮದಿಂದ ಹೊರಗೆ ಬಂದಿರದಿದ್ದರೆ, ಪರಿಸ್ಥಿತಿ ಮನುಷ್ಯರ ಅರಿವನ್ನೇ ಮೀರಿರುತ್ತಿತ್ತು.

ಭಗವಂತ ಶಿವ, ಭಗವಾನ್ ವಿಷ್ಣುವಿನ ಬಳಿಗೆ ಹೋಗಿ, ತಾನು ಅಸುರನನ್ನು ಮೋಸಗೊಳಿಸಲು ತಳೆದ ಮೋಹಿನಿಯ ಅವತಾರವನ್ನು ನೋಡಲು ಹೇಳಿದನು. ಇಬ್ಬರಿಗೂ ಈ ಬೇಡಿಕೆಯ ಉದ್ದೇಶದ ಅರಿವಿತ್ತು. ಶಿವನನ್ನು ಪ್ರಚೋದಿಸಿದ್ದು, ವಿಷಯ ಲೋಲುಪತೆಯ ಆಸೆಯಾಗಿರದೆ, ದಿವ್ಯ ಉದ್ದೇಶದ ಪೂರ್ಣಗೊಳಿಸುವಿಕೆಯಾಗಿತ್ತು. ಎಂದರೆ ಅವರಿಬ್ಬರ ಸಂಗಮದಿಂದ ಶಕ್ತಿಯೊಂದು ಅವತರಿಸಿ, ಮಹಿಷಿಯನ್ನು ಕೊಲ್ಲಬೇಕಾಗಿತ್ತು. ಭಗವಂತ ವಿಷ್ಣು ತಾನೇ ಮೋಹಿನಿಯಾಗಿ ಬದಲಾದನು. ಅವರು ಒಂದಾದರು. ಆಗ 'ತಾರಕಬ್ರಹ್ಮ' ಎಂದರೆ ಪರಮಾತ್ಮ ಭೂತನಾಥ, ಅವರ ಸಂಗಮದಿಂದ ಹೊರಕ್ಕೆ ಬಂದನು.

ಈ ರೀತಿಯಲ್ಲಿ ನಾವು ಇಬ್ಬರು ಗಂಡಸರ ಒಂದಾಗುವಿಕೆಯಿಂದ ಹುಟ್ಟುವ ಸಾಧ್ಯತೆ ಇಲ್ಲದ ವಿಷಯವನ್ನು ಮೀರಿಬಂದಿದ್ದೇವೆ. ಅದಕ್ಕೆ ಮಾರ್ಗನಿರ್ದೇಶಿಸಿದ್ದು ಮೋಹಿನಿ. ಅಷ್ಟೇ ಅಲ್ಲ. ನಾವು ಮತ್ತೊಂದು ತೊಂದರೆಯನ್ನು ಎದುರಿಸಿರುವುದು. ಭಗವಂತ ಭೂತನಾಥನನ್ನು 'ಅಯೋನಿಜಾತಃ' ಎಂದು ಹೇಳಿಯೇ, ಹೌದು. ಸಕಾರಾತ್ಮಕ ಹಾಗೂ ನಕಾರಾತ್ಮಕದ ಐಕ್ಯತೆಯಿಂದ (ಗಂಡು ಮತ್ತು ಹೆಣ್ಣು) ಹುಟ್ಟಿದ್ದರೂ ನಾವು ಮತ್ತೊಂದು ಅದ್ಭುತ ವಿಷಯವನ್ನು ಗಮನಿಸುತ್ತಿದ್ದೇವೆ. ಅವನು ದೈಹಿಕ ಐಕ್ಯತೆಯಿಂದ ಅಥವಾ ದೈಹಿಕ ಅಂಗದಿಂದ ಹುಟ್ಟಲಿಲ್ಲ" ಎಂಬುದೇ ಅದು.

ನಾವಿಲ್ಲಿ ಒಂದು ಕ್ಷಣ ನಿಲ್ಲಬೇಕು ಮತ್ತು ಮಹಿಷಿಗೆ ನೀಡಲ್ಪಟ್ಟ ವರದತ್ತ ಗಮನ ನೀಡಬೇಕು. ಮಾನವರ ಮಾತುಗಳಿಂದ, ಪರಿಸ್ಥಿತಿಯನ್ನು ವಿಶ್ಲೇಷಿಸಿ, ಎರಡೂ ಸಕಾರಾತ್ಮಕ ಶಕ್ತಿಗಳಾದ ಹರಿಹರರ ಸಮಾಗಮದಿಂದ ಮಗು ಹುಟ್ಟುವುದು ಅಸಾಧ್ಯ ಎಂಬ ವಿಷಯ ಬ್ರಹ್ಮನಿಗೆ ತಿಳಿದಿರಲಿಲ್ಲವೇ? ಹಾಗೆ ತಿಳಿದಿದ್ದರೆ, ಅವನು ಮಹಿಷಿ ಆಗ್ರಹಿಸಿ ಕೇಳಿದ ಮನುಷ್ಯತ್ವದ ಯೋಗ್ಯತೆಯನ್ನು ಹೇಗೆ ಒಪ್ಪಿಕೊಂಡ? ಅದು ಖಚಿತವಾಗಿಯೂ ಅಸಾಧ್ಯವೆಂದು ಅವನಿಗೆ ತಿಳಿದಿತ್ತಲ್ಲವೇ? ಹಾಗೆ ವರ ನೀಡಿದಾಗ ಮಹಿಷಿಯ ಆಯ್ಕೆಯು ನಿಜವಾಗಿ ಮೃತ್ಯುವಿಗೆ ವಿರುದ್ಧವಾಗಿದ್ದ ರಕ್ಷಣೆಯಾಗಿರಲಿಲ್ಲ ಎಂಬುದನ್ನು ಅರಿಯಬಹುದು. ಜೊತೆಗೆ ಹರಿ ಮತ್ತು ಹರ ಇಬ್ಬರ ಸಂಗಮದಿಂದಲೂ, ಮಗನನ್ನು ಪಡೆಯುವುದು ಸಾಧ್ಯ ಎಂಬುದೂ ಸಿದ್ಧವಾಗಿತ್ತು. ಸ್ವಾಮಿ ಭೂತನಾಥ ಇಬ್ಬರು ದೇವರುಗಳ ದೈಹಿಕ ಸಂಗಮದ ಫಲವಾಗಿ ಹುಟ್ಟಿದನು ಎಂಬುದನ್ನು ಊಹಿಸಿಕೊಳ್ಳುವುದು ತಪ್ಪುಗ್ರಹಿಕೆಯಾಗುತ್ತದೆ. ಅವನು ಎರಡು ದಿವ್ಯಶಕ್ತಿಗಳಿಂದ ಶಿವ ಮತ್ತು ವಿಷ್ಣು ಎಂಬ ಎರಡು ದಿವ್ಯ ಶಕ್ತಿಗಳ ಮಿಲನದ ಒಂದು ಶಕ್ತಿಯಾಗಿದ್ದು, ತಾವಾಗಿ ಅದನ್ನು ಯೋಜಿಸಿದ್ದರು. ಈ



ಪ್ರಾದುರ್ಭಾವವನ್ನು ಮಾನವರ ಭಾಷೆಯಲ್ಲಿ ಅರಿಯುವಂತೆ ಮಾಡಲು, ಮೋಹಿನಿಯ ಭಾವನೆಯನ್ನು ಮಧ್ಯೆ ತರಲಾಯಿತು. ಆದ್ದರಿಂದ ನಾವು ದೈಹಿಕ ಸಂಬಂಧದಿಂದ ಹುಟ್ಟಿದನೆಂಬ ಭಾವನೆ ಇಟ್ಟುಕೊಂಡು ತಪ್ಪುದಾರಿ ಹಿಡಿಯುವುದು ಬೇಡ. ನಾವು ಈ ಮುನ್ನಂದಾಜಿನ ಬಗ್ಗೆ ದೈವೇಚ್ಛೆಯಿಂದ ಇನ್ನೂ ಹೆಚ್ಚಿನ ಅರಿವಿನ ದೃಷ್ಟಿಯನ್ನಿಟ್ಟುಕೊಳ್ಳೋಣ.

ನಮ್ಮ ಪುರಾಣಗಳೂ ಸಹ ನಮ್ಮ ಇಷ್ಟ ಬಂದಂತೆ ನಮ್ಮನ್ನು ಮುನ್ನಡೆಯಿಂದ ಬೆಳಗಿಸಲು ಹಿಂದೆಗೆಯುವುದಿಲ್ಲ. ಇದಕ್ಕೆ ಉದಾಹರಣೆಯಾಗಿರುವ ಸ್ಕಂದನ ಹುಟ್ಟಿನ ಕಥೆಯತ್ತ ನಾವು ಗಮನ ಕೊಡಬೇಕು. ಅವನು ಶಿವ ಪರಮಾತ್ಮ ಮತ್ತು ಅವನ ಪತ್ನಿಯ ಪುತ್ರನೆನ್ನಲಾಗಿದೆ. ಶಿವ ತನ್ನಿಚ್ಛೆಯಂತೆ ಶರವಣ ಸರೋವರದಲ್ಲಿ ಆರು ಕಿಡಿಗಳನ್ನು ಹಾಯಿಸಿದ್ದು, ಅವನ್ನು ಅವನ ಹೆಂಡತಿಯಾದ ದೇವಿ ಪಾರ್ವತಿ ಶೇಖರಿಸಿಕೊಂಡಳು ಎನ್ನಲಾಗಿದೆ. ಆದ್ದರಿಂದ ಆ ಹುಡುಗನಿಗೆ ಆರು ಮುಖಗಳು.

ಸ್ವಾಮಿ ಭೂತನಾಥನು ಶಿವನೊಂದಿಗೆ ಕೈಲಾಸಕ್ಕೆ ಹೋಗಿ, ಅಲ್ಲೇ ಅವನ ಮಾರ್ಗದರ್ಶನದಲ್ಲಿ ಬೆಳೆದನು. ಸ್ವಲ್ಪ ಸಮಯದ ನಂತರ ಭಗವಂತ ಶಿವನೇ ಅವನನ್ನು ಕರೆದು, "ಮಗೂ, ನಿನಗೆ ನಿನ್ನ ಅವತಾರದ ಉದ್ದೇಶ ತಿಳಿದಿದೆ. ದೇವೇಂದ್ರನನ್ನು ಸಿಂಹಾಸನದಿಂದ ಉರುಳಿಸಿ, ದೇವತೆಗಳ ಮೇಲೆ ಅನ್ಯಾಯ ವನ್ನೆಸಗುತ್ತಿರುವ ಮತ್ತು ದೇವಲೋಕವನ್ನು ಆಳುತ್ತಿರುವ ಮಹಿಷಿಯನ್ನು ಕೊಲ್ಲುವುದೇ ನಿನ್ನ ಕೆಲಸ. ಅವಳು ಬ್ರಹ್ಮದೇವನಿಂದ ಒಂದು ವರ ಪಡೆದಿದ್ದಾಳೆ.

ಅವಳನ್ನು ಕೊಲ್ಲುವುದಕ್ಕೆ ಮುಂಚೆ, ನೀನು ಯಾರಾದರೂ ಮನುಷ್ಯನ ಸೇವೆಯನ್ನು ಹನ್ನೆರಡು ವರ್ಷಗಳು ಮಾಡಬೇಕು, ಈ ಪ್ರಪಂಚದಲ್ಲಿ. ಅದ್ದರಿಂದ ನೀನು ಒಂದು ಚಿಕ್ಕ ಮಗುವಿನ ಆಕಾರ ತಳೆದು, ಪಂಪಾ ನದಿಯ ತೀರದಲ್ಲಿ ಮಲಗಿರು. ಪಂತಾಳಮ್‌ನ ರಾಜ ರಾಜಶೇಖರನಿಗೆ ಮಕ್ಕಳಿಲ್ಲ. ಅವನು ಆ ಸ್ಥಳಕ್ಕೆ ಬೇಟೆಗಾಗಿ ಹೋಗುತ್ತಿರುತ್ತಾನೆ. ನೀನು ಅವನ ಗಮನ ಸೆಳೆಯುವೆ. ಆಗ ಅವನು ನಿನ್ನನ್ನು ಅವನ ಅರಮನೆಗೆ ಕರೆದುಕೊಂಡು ಹೋಗುತ್ತಾನೆ. ನಂತರ ನೀನು ಅವನ ಪುತ್ರನಾಗಿ ಮತ್ತು ಸೇವಾಕರ್ತನಾಗಿ ಹನ್ನೆರಡು ವರ್ಷಗಳಿರುತ್ತೀ. ಆಗ ನಿನಗೆ ಆ ಮಹಿಷಿಯನ್ನು ಕೊಲ್ಲಲು ಶಕ್ತಿ ಬರುತ್ತದೆ. ನಿನ್ನ ಕುತ್ತಿಗೆಗೆ ನೀನೊಂದು ಚಿನ್ನದ ಗಂಟೆ ಕಟ್ಟಿಕೊಂಡಿರುತ್ತೀ. ಅದರಿಂದಲೇ ನಿನಗೆ ಮಣಿಕಂಠ ಎಂಬ ಹೆಸರು ಬರುತ್ತದೆ" ಎಂದರು.

ಪರಮಾತ್ಮ ಶಿವನ ಆಜ್ಞಾಧಾರಿಯಾಗಿ ದೇವ ಧರ್ಮಶಾಸ್ತ್ರ ಪುಟ್ಟ ಮಗುವಿನ ರೂಪ ತಾಳಿದನು. ಅವನ ಕುತ್ತಿಗೆಯಲ್ಲಿ ಚಿನ್ನದ ಗಂಟೆ ಇತ್ತು. ಆ ಮಗು ಪಂಪಾ ನದಿ ದಡದಲ್ಲಿ ಮಲಗಿತ್ತು. ನಂತರ ನಡೆದ ವಿಷಯಗಳನ್ನು ನಾವು ಈಗಾಗಲೇ ಹೇಳಿದ್ದೇವೆ.

ಸುಂದರ ಮಹಿಷನಿಂದ ಸೋಲಿಸಲ್ಪಟ್ಟಿದ್ದ ಮಹಿಷಿ ತನ್ನ ಆಸೆಗೇ ಗುಲಾಮಳಾಗಿದ್ದು, ಅವನು ಹೋದಲ್ಲೆಲ್ಲಾ ಅವನನ್ನು ಹಿಂಬಾಲಿಸಿ, ತನ್ನನ್ನು ತಾನೇ ಮರೆತಳು. ತನ್ನ ಸಹೋದರನ ಸಾವಿನ ಸೇಡನ್ನು ತೀರಿಸಿಕೊಳ್ಳಲು, ಅವಳು ಮಾಡಿದ್ದ ತ್ಯಾಗವನ್ನೂ ಮರೆತಳು. ಆಸೆ ಕುರುಡು, ಕೊನೆಯಿಲ್ಲದ್ದು ಮತ್ತು ಇಂಗಿಸಲಾಗದ್ದು. ಅವಳು ಸುಂದರ ಮಹಿಷನ ಹಿಂದೆ ಗುಲಾಮಳಂತೆ ಸುತ್ತುತ್ತಿದ್ದಾಗ, ಅಸುರರು ಬಂದು, ಅವಳನ್ನು ದೇವಲೋಕಕ್ಕೆ ಹಿಂದಿರುಗುವಂತೆ ಹೇಳಿದರು. ಆಗ ಅವಳಿಗೆ ಎಲ್ಲಾ ನೆನಪಾಯಿತು. ತನ್ನ ಗಂಡನನ್ನು ಬಿಟ್ಟು, ಅವಳು ಮತ್ತೆ ವಾಪಸ್ಸು ಬಂದು, ತನ್ನ ಕ್ರೂರ ಅತ್ಯಾಚಾರಗಳನ್ನು ಇನ್ನೂ ಹೆಚ್ಚಿನ ಸೇಡಿನೊಂದಿಗೆ, ತೀರಿಸಿಕೊಳ್ಳಲಾರಂಭಿಸಿದಳು.

ಸುಂದರ ಮಹಿಷನ ಗುರಿ ಮುಗಿದಿತ್ತು. ಅವನು ಪ್ರಪಂಚ ಬಿಟ್ಟು, ಮತ್ತೆ ತ್ರಿಮೂರ್ತಿಯಲ್ಲಿ ಐಕ್ಯನಾದನು.

ಮಹಿಷಿ ಮತ್ತೆ ದೇವತೆಗಳ ಮೇಲೆ ಹೊಸದಾಗಿ ಯುದ್ಧಕ್ಕೆ ಬಂದಾಗ, ಭಗವಂತ ಭೂತನಾಥನ ಕಮಲ ಚರಣಗಳಿಗೆ ಬಿದ್ದು ದೇವತೆಗಳು, ಮಹಿಷಿಯನ್ನು ಕೊಲ್ಲುವಂತೆ ಬೇಡಿಕೊಂಡರು. ಭಗವಂತ ಅವರಿಗೆಲ್ಲರಿಗೂ ಆಶೀರ್ವದಿಸಿ, ತಕ್ಷಣವೇ ದೇವಲೋಕಕ್ಕೆ ಹೊರಟನು.

ಸ್ವಾಮಿ ಭೂತನಾಥ ಧನುರ್ಮಾಸದ ಕಡೆಯ ದಿನದಂದು (೧೪ನೇ ಜನವರಿ) ದಿವ್ಯಲೋಕವನ್ನು ಪ್ರವೇಶಿಸಿದನು. ಅಂದು ಉತ್ತರಾ ನಕ್ಷತ್ರ ಉದಯಿಸುತ್ತಿತ್ತು. ಮತ್ತು ಶನಿವಾರವಾಗಿತ್ತು. ತಮ್ಮ ಉದ್ಧಾರಸನ ಜನನದ ಬಗ್ಗೆ ತಿಳಿದ ದೇವತೆಗಳು ಆನಂದಪಟ್ಟರು ಮತ್ತು ತ್ರಿಮೂರ್ತಿಗಳನ್ನೂ ಮತ್ತು ಪರಮೇಶ್ವರನನ್ನೂ ಹೊಗಳಿ ಕೊಂಡಾಡಿದರು. ಭಗವಂತ, ಮಾನವ ಕುಲವನ್ನೇ ಉದ್ಧಾರ ಮಾಡಲು ಬಂದಿದ್ದವನು. ಅವನ ಬೋಧನೆಗಳು, ಪ್ರಾಪಂಚಿಕ ಆಸೆ–ಆಕಾಂಕ್ಷೆಗಳ ಶಕ್ತಿಯುಕ್ತ ಪ್ರವಾಹಗಳಿಂದ ತುಂಬಿ ಹರಿಯುತ್ತಿದ್ದ ಭಯಂಕರವಾದ ಜೀವನ ಸಾಗರವನ್ನು ದಾಟಲು ಬೇಕಾಗಿದ್ದ ಒಂದು ಸುರಕ್ಷಿತ ದೋಣಿಯಾಗಿ ನಿಂತಿದ್ದವು. ಮಹಿಷಿಯ ಎದುರಿಗೆ ನಿಂತು, ಅವನು ಅದರ ಕೊಂಬುಗಳನ್ನು ಹಿಡಿದು ಬಲವಾಗಿ ಎಳೆದನು. ನಂತರ ಅದನ್ನು ಭೂಮಿಗೆ ಎಸೆದನು. ಅದು ಅಲಸ ಎಂಬ ನದಿಯ ದಡಕ್ಕೆ ಬಿತ್ತು. ಅದು ಬಿದ್ದ ತಕ್ಷಣ, ಅದರ ಹಿಂದೆಯೇ ಕೆಳಗೆ ಬಂದಿದ್ದ ಶಿವ ಅವಳ ದೇಹದ ಮೇಲೆ ನರ್ತಿಸಿದನು. ಅವನು ಬಂದಿದ್ದದ್ದು ಕೆಟ್ಟ ಶಕ್ತಿಯನ್ನು ನಾಶ ಮಾಡಲೆಂದೇ ಅಲ್ಲವೇ! ಮಹಿಷಿ ಹೆಣವಾಗಿ ಬಿದ್ದಾಗ ದೇವತೆಗಳು ಪರಮೇಶ್ವರನನ್ನು ಹೊಗಳಿ ಕೊಂಡಾಡಿದರು.

ಮಹಿಷಿಯ ದೇಹದ ಮೇಲೆ ಶಿವನ ನರ್ತನವಾಗುತ್ತಿದ್ದಾಗಲೇ, ಲೀಲ ತನ್ನ ಶಾಪದಿಂದ ಮುಕ್ತಳಾಗಿ, ಎದ್ದು ನಿಂತಳು. ಭಗವಂತ ಭೂತನಾಥರಿಗೆ ನಮಸ್ಕರಿಸಿ



ಅವನನ್ನು ಸ್ತುತಿಸುತ್ತಾ ಅವಳು, ತನ್ನನ್ನು ಅವನು ಪತ್ನಿಯಾಗಿ ಸ್ವೀಕರಿಸಬೇಕೆಂದು ಬೇಡಿಕೊಂಡಳು. ಉತ್ತರ ನೀಡುತ್ತಾ ಪರಮಾತ್ಮ, "ಈ ಅವತಾರದಲ್ಲಿ ನಾನೊಬ್ಬ ಬ್ರಹ್ಮಚಾರಿ. ಆದ್ದರಿಂದ ನಿನ್ನನ್ನು ಮದುವೆ ಆಗಲಾರೆ. ಆದರೂ ನನ್ನ ಎಡಭಾಗದಲ್ಲಿ ನನ್ನ ಶಕ್ತಿಯ ರೂಪದಲ್ಲಿ ನಿನಗೆ ಸ್ಥಾನವನ್ನು ನೀಡುತ್ತೇನೆ" ಎಂದನು.

ಮಹಿಷಿಯ ದೇಹವನ್ನು ಹುಗಿದ ಸ್ಥಳಕ್ಕೆ 'ಕಲ್ಲಿಡುಂಕುನ್ನು' ಎಂದು ಹೆಸರಿದೆ. ಶಿವ ನಾಶವನ್ನು ನೋಡಲು ಬಂದಾಗ ತನ್ನ ಗೂಳಿಯನ್ನು ಎಲ್ಲಿ ಕಟ್ಟಿದ್ದನೋ, ಆ ಸ್ಥಳಕ್ಕೆ ಕಲಕೆಟ್ಟಿ ಆಶ್ರಮ ಎಂದು ಹೆಸರಿದೆ.

* * * *

## ೫. ಚಿರತೆಗಳು!

ಸ್ವಾಮಿ ಭೂತನಾಥನನ್ನು ಅಪ್ಪಿಕೊಂಡು, ಭಗವಂತ ಶಿವ, "ನೀನೀಗ ಮಹಿಷಿಯನ್ನು ಕೊಂದಿರುವುದರಿಂದ, ಇನ್ನೂ ಎಷ್ಟೋ ಕೆಲಸಗಳನ್ನು ಮಾಡಬೇಕಾಗಿದೆ. ನೀನು ರಾಜಶೇಖರನ ಬಳಿಗೆ ಹಿಂದಿರುಗಿ ಹೋಗು. ಅವನು ನೀನಿಲ್ಲದ್ದರಿಂದ, ಅತ್ಯಂತ ದುಃಖದಿಂದ ತನ್ನ ದಿನಗಳನ್ನು ಕಳೆಯುತ್ತಿದ್ದಾನೆ. ಅವನು ಅಪಾರ ಭಗವದ್ಭಕ್ತ. ಅವನಿಗೆ ಅಮರತ್ವ ನೀಡಿ ಆಶೀರ್ವದಿಸು. ನೀನು ರಾಮನಾಗಿ ಅವತಾರ ತಳೆದಿದ್ದಾಗ, ತಪಸ್ವಿನಿ ಶಬರಿ ನಿನ್ನನ್ನು ಸಗುಣದ ಕ್ರಮದಲ್ಲಿ ನಿನ್ನನ್ನು ಪೂಜಿಸಿದ್ದಳು. ಆದ್ದರಿಂದ ಅವಳಿಗೆ ಅಮರತ್ವ ಉಂಟಾಗಲಿಲ್ಲ. ಅವಳು ಈಗ ಮತ್ತೆ ಪ್ರಪಂಚದಲ್ಲಿ ಅದೇ ಹೆಸರಿನಲ್ಲಿದ್ದು, ನಿನ್ನನ್ನು ನಿರ್ಗುಣ ರೂಪದಿಂದ ಹುಡುಕುತ್ತಿದ್ದಾಳೆ. ಅವಳನ್ನೂ ಕೂಡ, ಅಮರತ್ವ ನೀಡಿ, ಆಶೀರ್ವದಿಸು. ರಾಜಶೇಖರ ನಿನಗಾಗಿ ಶಬರಿ ಆಶ್ರಮದ ಬಳಿ ಒಂದು ದೇವಸ್ಥಾನ ಕಟ್ಟಿಸುತ್ತಾನೆ. ಅದು ಶಬರಿ ಬೆಟ್ಟ ಎಂದು ಅಪಾರ ಖ್ಯಾತಿ ಪಡೆಯುತ್ತದೆ. ನೀನು ನಿನ್ನ ಭಕ್ತರ ಹೃದಯಗಳಲ್ಲಿ ಮತ್ತು ಪೊನ್ನಂಪಲದಲ್ಲಿ ನೆಲೆಸುತ್ತೀಯೆ. ಈಗ ರಾಜಶೇಖರನ ಬಳಿಗೆ ಹೋಗು. ದೇವತೆಗಳು ನಿನ್ನನ್ನು ಕರಡಿಗಳಂತೆ ಹಿಂಬಾಲಿಸುತ್ತಾರೆ. ದೇವೇಂದ್ರ ಸ್ವತಃ ರಾಜರ ಹುಲಿಯಾಗಿ ಬರುತ್ತಾನೆ. ಅವನ ಬೆನ್ನಿನ ಮೇಲೆ ಕುಳಿತು, ನೀನು ಪಂತಾಳಂವರೆಗೂ ಸವಾರಿ ಹೋಗುತ್ತೀ" ಎಂದನು.

ಈ ಸೂಚನೆಗಳನ್ನು ಪಡೆದ ನಂತರ, ಭಗವಂತ ಭೂತನಾಥ, ಮೊದಲು ಅಲ್ಲಿ ನೆರೆದಿದ್ದ ಋಷಿಗಳನ್ನು ಆಶೀರ್ವದಿಸಿದನು. ನಂತರ ಒಂದು ಹುಲಿಯ ಮೇಲೆ ಕುಳಿತು ಪಂಕಲಂಗೆ ಹಿಂದಿರುಗಿದನು. ಅವನ ಹಿಂದೆ ಸಾವಿರಾರು ಚಿರತೆಗಳೂ ಬಂದವು.

ಪಾಂತಾಳಂನ ಹೊರ ಪ್ರದೇಶವನ್ನು ಪರಮಾತ್ಮ ಭೂತನಾಥ ತಲುಪಿದಾಗ ಅವನು ಹಿಂದಿರುಗಿದ ಸುದ್ದಿ, ರಾಜನಿಗೆ ಮತ್ತು ಅವನ ಪ್ರಜೆಗಳಿಗೆ ತಿಳಿಯಿತು. ಆ ದೃಶ್ಯ ಕಂಡು, ಜನರು ಹೆದರಿ ಚೆಲ್ಲಾಪಿಲ್ಲಿಗೊಂಡು ಓಡಲಾರಂಭಿಸಿದರು. ತಮ್ಮ ಸುರಕ್ಷತೆಗಾಗಿ, ಈ ಚಿಲ್ಲಾಟಗಳನ್ನು ಕೂಗಾಟಗಳನ್ನು ಕೇಳಿಸಿಕೊಂಡ ದೊರೆ ತನ್ನ ಅರಮನೆಯ ಅಂಗಳಕ್ಕೆ ಬಂದನು. ಅವನು ದಿಗ್ಭ್ರಾಂತನಾಗಿ ನೋಡಿದಾಗ, ಮಣಿಕಂಠ ಹುಲಿಯ ಸವಾರಿ ಮಾಡುತ್ತಿದ್ದದ್ದು ಮತ್ತು ಅವನ ಹಿಂದೆ ಚಿರತೆಗಳ ಗುಂಪೇ



ಇದ್ದದ್ದು ಕಂಡು ಬಂತು. ಹುಲಿಯಿಂದ ಕೆಳಗಿಳಿದು, ಗೌರವದಿಂದ ರಾಜನ ಬಳಿ ನಿಂತ ಮಣಿಕಂಠ, ರಾಜನನ್ನು ಕುರಿತು, "ರಾಣಿಯ ತಲೆನೋವಿನ ನಿವಾರಣೆಗೆ ಎಷ್ಟು ಬೇಕೋ ಅಷ್ಟು ಚಿರತೆಯ ಹಾಲನ್ನು ಕರೆದುಕೊಳ್ಳಿ" ಎಂದನು. ಆ ಚಿರತೆಗಳ ಗುಂಪಿನ ದೃಶ್ಯ ಮತ್ತು ಮಣಿಕಂಠನ ಸೌಮ್ಯವಾದ ಮುಗುಳ್ನಗೆಯ ಮುಖ ಎರಡೂ, ರಾಜನಲ್ಲಿ ಅನುಮಾನವೇ ಇಲ್ಲದ ರೀತಿಯಲ್ಲಿ, "ಅವನು ಭಗವಂತನೇ ಹೌದು" ಎಂಬ ಭಾವನೆಯನ್ನು ಮೂಡಿಸಿದವು. ರಾಜ ಆಗ ಪರಮಾತ್ಮ ಮಣಿಕಂಠನನ್ನು ಪ್ರಾರ್ಥಿಸುತ್ತಾ, "ಭಗವಂತ, ನಮ್ಮ ಮೇಲೆ ದಯೆ ಇಡು, ಇವುಗಳನ್ನು ಹೇಗೆ ಕರೆದು ತಂದೆಯೋ ಹಾಗೆ ವಾಪಸ್ಸು ಕಳುಹಿಸಿಬಿಡು. ನೀನು ಕಾಡಿಗೆ ಹೊರಟ ದಿನವೇ ರಾಣಿಯ ತಲೆನೋವು ಎಷ್ಟೋ ಕಡಿಮೆ ಆಯಿತು" ಎಂದು ಹೇಳಿ, ಮತ್ತೆ ಮಣಿಕಂಠನನ್ನು ಸಾಮಾನ್ಯ ಮನುಷ್ಯ ಮತ್ತು ದಾಸ್ಯಮನೋಭಾವದವನೆಂದು ತಿಳಿದು, ಅವನ ದಿವ್ಯತೆಯ ಬಗ್ಗೆ ಅರಿಯದೇ ಹೋದುದಕ್ಕಾಗಿ ಮತ್ತೊಮ್ಮೆ ಕ್ಷಮೆ ಬೇಡಿದನು.

ಸ್ವಾಮಿ ಭೂತನಾಥ ಅರಮನೆಯ ಸಿಂಹಾಸನದಲ್ಲಿ ಕುಳಿತಿದ್ದನು. ಎಲ್ಲರೂ ಅವನಿಗೆ ನಮಿಸಿ ಆಶೀರ್ವಾದ ಬೇಡುತ್ತಿದ್ದರು. ಆಗ ಮಹರ್ಷಿ ಅಗಸ್ತ್ಯರು ಅರಮನೆಗೆ ಬಂದು, ಧರ್ಮಶಾಸ್ತ್ರದ ಕಥೆಯನ್ನು ವಿವರವಾಗಿ ತಿಳಿಸಿ, ಹೊರಟುಹೋದರು. ದೊರೆಗೋ, ತನ್ನ ಮಗನಾಗಿ ಹುಟ್ಟಿ ಹನ್ನೆರಡು ವರ್ಷಗಳು ತನ್ನ ಅರಮನೆಯಲ್ಲೇ ತನ್ನೆದುರೇ ಬೆಳೆದುಬಂದ ದಿವ್ಯಾತ್ಮನ ಕಥೆ ಕೇಳಿ, ಅಪಾರ ಆನಂದವಾಯಿತು. ಅವನೂ ಭೂತನಾಥನನ್ನು ಅತ್ಯಂತ ಭಕ್ತಿಯಿಂದ ಪೂಜಿಸಿದನು. ಮತ್ತು ತನ್ನಿಂದ ತಿಳಿದೋ ತಿಳಿಯದೆಯೋ ಆಗಿರಬಹುದಾದ ಎಲ್ಲಾ ಅಪರಾಧಗಳನ್ನು ಕ್ಷಮಿಸಬೇಕೆಂದೂ ಪ್ರಾರ್ಥಿಸಿದನು. ನಂತರ ದಿವ್ಯಾತ್ಮನ ಆಶೀರ್ವಾದವನ್ನೂ ಬೇಡಿದನು. ನಂತರ ದಿವಾನ ಹಾಗೂ ತನ್ನ ರಾಣಿ ಇಬ್ಬರೂ ಸೇರಿ ನಡೆಸಿದ ಹೀನ ಪಿತೂರಿಗಾಗಿ, ಅವರನ್ನು ಶಿಕ್ಷಿಸಲೂ ಬೇಡಿಕೊಂಡನು.

ಆಗ ಮುಗುಳ್ನಗುತ್ತಾ, ಎಲ್ಲರನ್ನೂ ಆಶೀರ್ವದಿಸಿದ ಸ್ವಾಮಿ ಭೂತನಾಥ ಆ ಕ್ಷಣವೇ ಚಿರತೆಗಳನ್ನು ಮಾಯವಾಗಿಸಿದನು. ನಂತರ ತಂದೆಯನ್ನು ಆಲಂಗಿಸಿ, "ನಾನು ನಿಮ್ಮ ಮನೆಯಲ್ಲಿ ಒಂದು ದಿವ್ಯವಾದ ಉದ್ದೇಶ ಹೊತ್ತೇ ಹನ್ನೆರಡು ವರ್ಷಗಳನ್ನು ಕಳೆದೆ. ಆ ಉದ್ದೇಶ ಈಗ ಪೂರ್ತಿಯಾಗಿದೆ. ಆ ಉದ್ದೇಶಕ್ಕೆ ದಿವಾನರ ಮತ್ತು ರಾಣಿಯ ನಾಟಕ ಬೇಕಾಗಿತ್ತು. ಆದ್ದರಿಂದ ಅವರನ್ನು ಶಿಕ್ಷೆಗೆ ಒಳಪಡಿಸಬೇಕಾಗಿಲ್ಲ. ನೀವು ದುಃಖಿಸಬೇಡಿ. ನೀವೆಲ್ಲರೂ ಅದೃಷ್ಟವಂತರು. ನಿಮ್ಮ ಭಕ್ತಿಗೆ ನಾನು ಮೆಚ್ಚಿದ್ದೇನೆ. ನಿಮಗೇನು ವರ ಬೇಕೋ ಅದನ್ನು ಕೇಳಿಕೊಳ್ಳಿ" ಎಂದನು.

ಭಗವಂತನ ಹಸ್ತಗಳಿಂದಲೇ ಪಡೆದ ಆಶೀರ್ವಾದದಿಂದ ಅತ್ಯಂತ ಉಲ್ಲಸಿತನಾದ ರಾಜನು, ಅಮರತ್ವಕ್ಕಾಗಿ ಬೇಡಿದನು. ಆಗ ಸ್ವಾಮಿಯು, "ಹುಟ್ಟು ಸಾವುಗಳ ಚಕ್ರ ತಿರುಗುತ್ತಲೇ ಇರುತ್ತದೆ. ಕರ್ಮನಾಶವಾಗದ ಹೊರತು, ಆ ಚಕ್ರದ ತಿರುಗಾಟ ನಿಲ್ಲದು. ಆದ್ದರಿಂದ ಕರ್ಮನಾಶದ ಹಾದಿಯನ್ನೇ ಅನುಸರಿಸಬೇಕು" ಎಂದನು. ನೆರೆದಿದ್ದ ಗುಂಪು ಸ್ವಲ್ಪ ಹೊತ್ತಿನವರೆಗೆ ಚದುರಿದ್ದು, ಮತ್ತೆ ಒಟ್ಟಿಗೆ ಸೇರಿತು. ಭೂತನಾಥ ಸಿಂಹಾಸನದ ಮೇಲೆ ಕುಳಿತಿದ್ದನು, ಸೂಕ್ತ ಮರ್ಯಾದೆಯೊಂದಿಗೆ ಆಗ ರಾಣಿ ಮತ್ತು ದಿವಾನ ಇಬ್ಬರೂ ಬಂದು, ದಯೆ ತೋರಿಸೆಂದು ಪ್ರಾರ್ಥಿಸಿ ಕ್ಷಮೆ ಬೇಡಿದರು. ಉತ್ತರ ನೀಡುತ್ತಾ ಪರಮಾತ್ಮನು 'ದುಃಖಿಸಬೇಡಿ. ಪ್ರತಿಯೊಂದು ಕೆಲಸಕ್ಕೂ ಒಂದೊಂದು ಪ್ರತಿಕ್ರಿಯೆ ಇರುತ್ತದೆ. ಪ್ರತಿಯೊಬ್ಬರೂ ತಮ್ಮ ಕರ್ಮಫಲಗಳನ್ನು ಅನುಭವಿಸಲೇ ಬೇಕು. ದಿವ್ಯ ಕಾರ್ಯಕ್ಕೆ ಕೆಲಸಗಳನ್ನು ಹೇಗೆ ಮಾಡುತ್ತಿರಬೇಕೋ ಅದನ್ನು ನೀನು ಮಾಡಿದೆ, ಅಮ್ಮಾ. ನಿನ್ನಿಂದ ತಪ್ಪು ಏನೂ ಆಗಿಲ್ಲ. ಅದರೊಂದಿಗೆ ನಿನ್ನಿಂದ ಯಾವ ಚಟುವಟಿಕೆಗಳೂ ನಾಶ ಮಾಡುವಂಥದ್ದಾಗಿಲ್ಲ. ಮೂರು ನಿಜವಾದ ಪಾಪಗಳು ಎಂದರೆ ಸ್ನೇಹದ ದುರ್ಬಳಕೆ, ನಂಬಿಕೆ ದ್ರೋಹ ಮತ್ತು ದಯಾಭಾವದ ಅನ್ಯೋನ್ಯತೆ ಇಲ್ಲದಿರುವುದು. ಈ ಪಾಪಗಳಿಂದ ಶೀಘ್ರದ ಮುಕ್ತಿ ಅಸಾಧ್ಯದ್ದು. ಆದ್ದರಿಂದ ಅವುಗಳಿಂದ ದೂರವಿರಿ" ಎಂದನು.

ಪರಮಾತ್ಮ ಭೂತನಾಥರು ಕರ್ಮಯೋಗದ ಪಥವನ್ನು ವಿಶ್ವ ಮತ್ತು ಅದರ ಉತ್ಪತ್ತಿ ಜ್ಞಾನಯೋಗ ಮತ್ತು ತ್ರಿಮೂರ್ತಿಗಳ ಬಗ್ಗೆ ಮತ್ತೂ ವಿಶದೀಕರಿಸಿ ಹೇಳಿದರು. ಅದನ್ನು ಮುಂದುವರಿಸುತ್ತಾ ಅವರು, "ನಾನೇ ಈ ವಿಶ್ವದ ಸರ್ವಸ್ವ. ಆದ್ದರಿಂದ ಎಲ್ಲಾ ಧರ್ಮಗಳನ್ನೂ ತ್ಯಜಿಸಿ, ನನ್ನಲ್ಲಿ ಶರಣಾಗಿ. ನಾನು ನಿಮಗೆ ಮುಕ್ತಿ ಹಾಗೂ ನಿರ್ವಾಣ ಸ್ಥಿತಿಯನ್ನೂ ನೀಡಿ ಆಶೀರ್ವದಿಸುತ್ತೇನೆ. ವೇದಗಳಲ್ಲಿನ, ಮಂತ್ರಗಳಲ್ಲಿನ ಪಾಂಡಿತ್ಯದ ಮೂಲಕ ನನ್ನನ್ನು ಪಡೆಯಬೇಕಾಗಿಲ್ಲ. ಅಥವಾ ಮಂತ್ರ ಪಠನದಿಂದಲೂ ಅಲ್ಲ. ಕೇವಲ ಪ್ರೇಮದಿಂದ ಮಾತ್ರ ನೀವು ನನ್ನನ್ನು ಪಡೆಯಬಹುದು" ಎಂದನು.

ಭಗವಂತನಿಂದ ಆಶೀರ್ವದಿಸಲ್ಪಟ್ಟ ರಾಜರು ಮತ್ತೆ "ನಿನಗೆ ಸಂತೋಷವಾಗುವಂತಿದ್ದರೆ, ಪರಮಾತ್ಮಾ, ನೀನು ನಿನ್ನ ನಿವಾಸವನ್ನು ನನ್ನ ರಾಜ್ಯದಲ್ಲಿಯೇ ಮಾಡಿಕೊಳ್ಳುತ್ತೀಯೆಂದು ನನಗೆ ವರ ನೀಡು, ಸ್ವಾಮಿ. ನೀನು ಅಪ್ಪಣೆ ಕೊಟ್ಟರೆ, ನೀನು ನನ್ನ ರಾಜ್ಯದಲ್ಲಿ ಆಯ್ಕೆ ಮಾಡಿಕೊಂಡ ಸ್ಥಳದಲ್ಲಿಯೇ, ನಿನಗಾಗಿ ದೇವಸ್ಥಾನವೊಂದನ್ನು ನಿರ್ಮಿಸುತ್ತೇನೆ" ಎಂದರು.



ಭಗವಂತನು ಅನುಗ್ರಹ ತೋರಿಸಿ, ಆ ಮನವಿಗೆ ಒಪ್ಪಿದನು. ನಂತರ ಮಾತನಾಡುತ್ತಾ, "ಹಾಗಿದ್ದರೆ, ನಿನ್ನ ಆಸೆ ಪೂರೈಸುತ್ತದೆ. ನೀಲಿ ಬೆಟ್ಟಗಳ ಮೇಲೆ, ಪಂಪಾನದಿಯ ಈಶಾನ್ಯ ದಿಕ್ಕಿನಲ್ಲಿ ನನಗಾಗಿ ದೇವಸ್ಥಾನ ಕಟ್ಟಿಸಿ, ಅಲ್ಲಿ ಹಿರಿಯ ತಪಸ್ವಿನಿ ಶಬರಿ, ನನ್ನಿಂದ ಅಮರತ್ವ ಪಡೆಯಲು ಕಾಯುತ್ತಿದ್ದಾಳೆ. ಅಲ್ಲೇ ನೀವು ದೇವಸ್ಥಾನ ಕಟ್ಟಿಸಿ, ನಿಮಗೆ ಸರಿಯಾದ ಸ್ಥಳವನ್ನು ತೋರಿಸಲು, ನಾನು ಒಂದು ಬಾಣ ಹಾರಿಸುತ್ತೇನೆ. ಅದೆಲ್ಲಿ ಬೀಳುತ್ತದೆಯೋ ಅಲ್ಲಿ ನೀವು ದೇವಸ್ಥಾನ ಕಟ್ಟಿಸಿ. ನಾನು ನಿಮಗೆ ಒಂದು ದಿವ್ಯದೃಷ್ಟಿ ನೀಡುತ್ತೇನೆ. ಅದರ ಮೂಲಕ ನೀವು ಆ ಬಾಣವನ್ನು ಹಿಂಬಾಲಿಸಬಹುದು" ಎಂದನು. ಹಾಗೆ ಹೇಳಿ ಭಗವಂತನು ಬಾಣ ಬಿಟ್ಟನು. ರಾಜ ತನ್ನ ದಿವ್ಯದೃಷ್ಟಿಯಿಂದ ಅದನ್ನು ಹಿಂಬಾಲಿಸಿದನು. ಆಗ ಭಗವಂತ ಮತ್ತೆ "ದೇವಸ್ಥಾನದ ಪ್ರಾಕಾರದ ಪ್ರಕಾರ, ಪೂರ್ವಕ್ಕೆ ಮುಖವಾಗಿ ಇರುವಂತೆ ಹದಿನೆಂಟು ಮೆಟ್ಟಿಲುಗಳನ್ನು ಕಟ್ಟಿಸಬೇಕು. ಅವು ಐದು ಇಂದ್ರಿಯಗಳು, ಎಂಟು ರಾಗಗಳು, ಮೂರು ಗುಣಗಳು, ವಿದ್ಯೆ ಮತ್ತು ಅವಿದ್ಯೆಯನ್ನು ಪ್ರತಿನಿಧಿಸುತ್ತವೆ. ಎಡಭಾಗದಲ್ಲಿ ಸ್ವಲ್ಪ ದೂರದಲ್ಲಿ ನನ್ನ ಶಕ್ತಿ ಮುಂಜಾಂಬಿಕೆಗೆ ಒಂದು ಅರಮನೆ ಕಟ್ಟಿಸಬೇಕು, ಮತ್ತೊಂದನ್ನು ನನ್ನ ಸೇನಾಪತಿ ಕಟುವರನಿಗೆ ಕಟ್ಟಬೇಕು. ನನ್ನ ಇತರ ಸೇನಾಪತಿಗಳನ್ನೂ ಗೌರವದಿಂದ ಪ್ರತಿಷ್ಠಾಪಿಸಬೇಕು. ಪಂಪಾನದಿ ಪಾವಿತ್ರ್ಯತೆಯಲ್ಲಿ ಗಂಗಾನದಿಗೆ ಸಮಾನವಾಗಿರುತ್ತದೆ ಮತ್ತು ಶಬರಿ ಬೆಟ್ಟ, ಕಾಶಿಗೆ ಸಮನಾಗಿರುತ್ತದೆ" ಎಂದನು.

ಸ್ವಾಮಿ ಭೂತನಾಥ ನಂತರ, ಯಾತ್ರೆಗಿಂತ ಮುಂಚೆ ಅಭ್ಯಾಸ ಮಾಡಿಕೊಳ್ಳಬೇಕಾಗಿದ್ದ ಕಟ್ಟುನಿಟ್ಟುಗಳ ಬಗ್ಗೆಯೂ ಸೂಚನೆ ನೀಡಿದನು. ಜೊತೆಗೆ ಯಾತ್ರಿಕರು ಕ್ರಮಿಸಬೇಕಾದ ಮಾರ್ಗದ ರೀತಿ ಮತ್ತು ನಿಯಮಾನುಷ್ಠಾನಗಳ ಬಗ್ಗೆ ವಿವರಿಸುತ್ತಾ ಭಗವಂತ ಭೂತನಾಥ "ನನ್ನನ್ನು ನೋಡಲು ಬರುವವರು ಸರಿಯಾಗಿ ನಿಯಮಾನುಷ್ಠಾನಗಳನ್ನು ನಡೆಸದಿದ್ದರೆ, ಅವರಿಗೆ ಈ ಯಾತ್ರೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಸೂಕ್ತ ಅನುಷ್ಠಾನಗಳಿಲ್ಲದ ಯಾತ್ರೆ, ಹಣವಿಲ್ಲದೆ ಅಂಗಡಿ ಬೀದಿಯಲ್ಲಿ ಸುತ್ತಾಡಿ ಬರುವಂತೆ ಆಗುತ್ತದೆ. ನನ್ನನ್ನು ನೋಡಲು ಸೂಕ್ತವಾದ ದಿನವೆಂದರೆ, ಮಕರ ಸಂಕ್ರಾಂತಿಯ ದಿನ. ನಾನು ಕೇರಳದ ಹದಿನೆಂಟು ದೇವಸ್ಥಾನಗಳಲ್ಲಿಯೂ ನೆಲೆಸಿರುತ್ತೇನೆ. ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಎಂದರೆ, ಶಬರಿಮಲೈ, ಬೆಟ್ಟ, ಹೇ ರಾಜನೇ! ಹೃದಯವೇ ನನ್ನ ದೇವಸ್ಥಾನ. ಆತ್ಮವೇ ನಾನು. ಹದಿನೆಂಟು ತತ್ವಗಳನ್ನು ಮೀರಿದವರೇ ನನ್ನನ್ನು ತಲುಪಬಲ್ಲರು. ನನ್ನನ್ನು ಪೂಜಿಸುವ ವಿಧಾನದ ಬಗ್ಗೆ, ಅಗಸ್ತ್ಯ ಮಹರ್ಷಿಗಳು, ಚೆನ್ನಾಗಿ ಮಾರ್ಗದರ್ಶನ ಮಾಡುತ್ತಾರೆ. ಜೊತೆಗೆ, ದೇವಸ್ಥನದ ನಿರ್ಮಾಣದ ಬಗ್ಗೆ ಮತ್ತು

ಮೂರ್ತಿ ಸ್ಥಾಪನೆಯ ವಿಧಾನವನ್ನೂ ತಿಳಿಸುತ್ತಾರೆ. ನಾವು ದೂರವಾಗುತ್ತಿದ್ದೇವೆಂದು ಶೋಕಿಸಬೇಡ. ನಾನು ಸದಾ ನಿಮ್ಮ ಹೃದಯದಲ್ಲಿರುತ್ತೇನೆ. ನಿಮ್ಮ ಅರಮನೆಯಲ್ಲಿ ಇರುತ್ತೇನೆ. ಅಲ್ಲ, ಇಡೀ ವಿಶ್ವದಲ್ಲಿ ಇರುತ್ತೇನೆ" ಎಂದರು.

ಅಷ್ಟು ಹೇಳಿ, ಸ್ವಾಮಿ ಭೂತನಾಥನು ಅಲ್ಲಿದ್ದವರನ್ನೆಲ್ಲಾ ಆಶೀರ್ವದಿಸಿ, ಅದರಲ್ಲಿಯೂ ರಾಜನನ್ನು ಚೆನ್ನಾಗಿ ಆಶೀರ್ವದಿಸಿ, ಮಾಯವಾದರು.

* * * *



# ೬. ಶಬರಿಮಲೈ ಮೇಲೆ ದೇವಸ್ಥಾನ

ಭಗವಂತ ಹೊರಟನಂತರ, ರಾಜ ರಾಜಶೇಖರ ಮತ್ತೆ ತನ್ನ ಚಿಂತೆಯಲ್ಲಿ ಮುಳುಗಿ, ಚಂಚಲಗೊಂಡನು. ಅವನು, ಸ್ವಾಮಿ ಭೂತನಾಥನು ಜೀವನಕಾಲವನ್ನು ತನ್ನೊಂದಿಗೆ ಕಳೆದ ದಿನಗಳನ್ನು ನೆನಪಿಸಿಕೊಂಡು ದುಃಖಪಡುತ್ತಿದ್ದನು ಮತ್ತು ಉದ್ರೇಕಗೊಳ್ಳುತ್ತಲೂ ಇದ್ದನು. ಕಡೆಗೆ ಅವನು ತನ್ನ ದೇಶವನ್ನು ಆಳುವುದೇ ಮೊದಲಾಗಿ ಸಕಲ ಕರ್ತವ್ಯಗಳನ್ನು ಗಮನಿಸದೆ ಕುಳಿತಿರುತ್ತಿದ್ದನು.

ಆಗ ಅಗಸ್ತ್ಯ ಮಹರ್ಷಿಗಳು, ಅವನ ಯಾತನೆಯನ್ನು ನಿವಾರಿಸಲು ಬಂದರು. ಅವರನ್ನು ಸಾಕಷ್ಟು ಭಕ್ತಿಯಿಂದ ಸ್ವಾಗತಿಸಿದ ರಾಜ, ಮಣಿಕಂಠನು ಹೊರಟು ಹೋದದ್ದನ್ನು ನೆನಪು ಮಾಡಿಕೊಂಡು, "ಪೂಜ್ಯರೇ, ಮಣಿಕಂಠ ಈಗ ಎಲ್ಲಿದ್ದಾನೆ ಎಂಬುದನ್ನು ನೀವಾದರೂ ನನಗೆ ತಿಳಿಸಬಾರದೇ? ಅವನೊಂದಿಗೆ ನಾನು ಅರಮನೆಯಲ್ಲಿ ಕಳೆದ ದಿನಗಳನ್ನು ಮರೆಯಲಾರದವನಾಗಿದ್ದೇನೆ. ಅವನು ನನ್ನ ಮಗನಾಗಿ ಬೆಳೆದದ್ದು, ಸೇವೆ ಮಾಡಿದ್ದು ಮತ್ತು ರಾಜ್ಯಭಾರದಲ್ಲಿಯೂ ಸಹಾಯ ಮಾಡಿದ್ದು, ಎಲ್ಲವೂ ನನ್ನೆದುರಿಗೇ ಬಂದು ನಿಲ್ಲುತ್ತಿವೆ. ಅವೆಲ್ಲವೂ ಈಗಲೂ ಹಾಗೆ ನಡೆಯುತ್ತಿವೆಯೋ ಎಂಬಂತೆ ಕಂಡುಬರುತ್ತಿವೆ. ತಾವಾದರೂ ಈ ದಗ್ಧ ಹೃದಯಕ್ಕೆ ಶಾಂತಿಯನ್ನು ನೀಡಬಲ್ಲಿರಾ?" ಎಂದು ಬೇಡಿಕೊಂಡನು. ಮಹರ್ಷಿಗಳು "ನಾನಿಲ್ಲಿಗೆ ಬಂದಿರುವುದು ಮಣಿಕಂಠನ ಆಜ್ಞೆಯಿಂದಲೇ. ಅವನು ನಿಮಗೆ ನೀಡಿದ್ದ ಬುದ್ಧಿವಾದವನ್ನು ನೀವು ಮರೆತಿರುವಿರೇನು? ಇವೆಲ್ಲವೂ ಮಾನವನ ಅರಿವಿಗೆ ಮೀರಿದಂಥ ಮಾಯೆಯ ಆಟ. ಮಣಿಕಂಠ ಕಾಲಾತೀತ ವಾಗತೀತ ತಾರಕಬ್ರಹ್ಮ. ನಿನ್ನ ಹಿಂದಿನ ಕರ್ಮಗಳ ಕಾರಣದಿಂದ, ನಿನಗೆ ಅವನನ್ನು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದ ಕರ್ಮಗಳ ಪ್ರಭಾವದಿಂದ ಮುಕ್ತನಾಗಲು, ನೀನು ನಿನ್ನ ಹೃದಯವನ್ನು ತಾರಕಬ್ರಹ್ಮನಲ್ಲಿ ನೆಲೆಯಾಗಿಸು. ಆಗ ನಿನ್ನ ಕರ್ಮಪ್ರಭಾವಗಳಿಂದ ಮುಕ್ತನಾಗುವೆ.

ಹಿಂದಿನ ಕರ್ಮಗಳಿಂದ ಗಳಿಸಿದ್ದೆಲ್ಲವನ್ನೂ ಅನುಭವಿಸಲೇಬೇಕು. ಅದರಿಂದ ಮುಕ್ತಿ ಇಲ್ಲವೇ ಇಲ್ಲ. ನಿನ್ನನ್ನು ಕರ್ಮಗಳಿಂದ ಮುಕ್ತನಾಗಿಸಿಕೊಳ್ಳಲು ಆಶಾಹೀನನಾಗಿ ಭಗವಂತನಿಗೆ ಸೇವೆ ಸಲ್ಲಿಸು, ಮತ್ತು ತಾರಕ ಬ್ರಹ್ಮನನ್ನು ಧ್ಯಾನಿಸು. ನಾನೀಗ

ಸ್ವಾಮಿ ಭೂತನಾಥನ ದೇವಸ್ಥಾನದ ನಿರ್ಮಾಣದ ಬಗ್ಗೆ ತಿಳಿಸಲು ಬಂದಿದ್ದೇನೆ. ಆ ಕೆಲಸವನ್ನು ಪ್ರಾರಂಭಿಸಲು ತಡ ಮಾಡಬೇಡ" ಎಂದರು.

ಆಗ ಮಹರ್ಷಿಗಳು, ರಾಮಾಯಣದ ಕಾಲದಿಂದಲೂ ಇದ್ದ ಕುಂಭಗಳ ತೀರ್ಥ ಮತ್ತು ಪಂಪಾ ತೀರ್ಥಗಳ ಪ್ರಾಮುಖ್ಯತೆ ಮತ್ತು ಪವಿತ್ರತೆಯ ಬಗ್ಗೆ ವಿವರಿಸಿದರು. ಆಗ ಕುಂಭದಳ ತೀರ್ಥವೆಲ್ಲಿದೆ ಮತ್ತು ಅದೇಕೆ ಅಷ್ಟು ಮುಖ್ಯವಾದದ್ದು ಎಂಬುದನ್ನು ಕುರಿತು ಪ್ರಶ್ನಿಸಿದನು. ಆಗ ಮಹರ್ಷಿಗಲೂ, "ಕುಂಭದಳ ತೀರ್ಥಕ್ಕೆ ಪೊನ್ನಂಪಲಂನಲ್ಲಿ ಸ್ವಾಮಿ ಭೂತನಾಥನಿಗೆ ದೇವತೆಗಳು ಅಭಿಷೇಕ ಮಾಡಿದ ನೀರೆಲ್ಲಾ ಸೇರಿಕೊಂಡು ಧರೆಗೆ ಇಳಿದುಬಂದು ಸೇರಿತು" ಎಂದರು.

ಮತ್ತೆ, "ಒಂದು ಕಾಲದಲ್ಲಿ, ಪಾಂಡ್ಯ ದೇಶದಲ್ಲಿ ವಿಜಯ ಎಂಬ ಬ್ರಾಹ್ಮಣನೊಬ್ಬನಿದ್ದನು. ಅವನು ಧನಿಕನಾಗಿದ್ದ, ಆದರೆ ಸಂತಾನಹೀನನಾಗಿದ್ದ. ಅವನು ತನ್ನ ಸಮಯ ಮತ್ತು ಧನವನ್ನು ಧಾರ್ಮಿಕ ಹಾಗೂ ಸೇವಾ ಕಾರ್ಯಗಳಿಗೆ ಮೀಸಲಾಗಿಡುತ್ತಿದ್ದನಾದರೂ, ಮಕ್ಕಳಿರಲಿಲ್ಲವೆಂದು ಚಿಂತಿಸುತ್ತಿದ್ದನು. ಸಾಧು ಒಬ್ಬರು ಒಂದು ದಿನ ಬಂದಾಗ, ಆ ಬ್ರಾಹ್ಮಣ ತನ್ನ ನಿಯಮಾನುಸಾರ ಅವರಿಗೆ ಮರ್ಯಾದೆಯನ್ನು ನೀಡಿ ಸ್ವಾಗತಿಸಿದನು. ಆ ಸಾಧು ಸಂತುಷ್ಟರಾಗಿ, "ನಿನ್ನ ದುಃಖಕ್ಕೆ ಕಾರಣ ನನಗೆ ಗೊತ್ತು. ನಿನಗೆ, ಸಂತಾನಪ್ರಾಪ್ತಿಯ ಆಸೆ ಪೂರೈಸಿಲ್ಲ. ಸಂತೋಷವಾಗಿರು. ನಾನು ಹೇಳಿದಂತೆ ಕೇಳಿದರೆ, ನಿನ್ನ ಆಸೆ ಪೂರ್ಣಗೊಳ್ಳುತ್ತದೆ" ಎಂದರು. ವಿಜಯ, ಸಂತಾನಪ್ರಾಪ್ತಿಗಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧನಾಗಿದ್ದನು. ಸಾಧು ತಮ್ಮ ಮಾತನ್ನು ಮುಂದುವರಿಸಿ "ತಾರಕಬ್ರಹ್ಮನನ್ನು ಪ್ರಾರ್ಥಿಸಿದರೆ, ನಿನ್ನ ಆಸೆ ಕೈಗೂಡುತ್ತದೆ. ಈ ಸ್ಥಳದ ಉತ್ತರ ದಿಕ್ಕಿನಲ್ಲಿ, ಪಂಪಾನದಿ ಹರಿಯುತ್ತಿದೆ. ಅದರ ಪೂರ್ವದಿಕ್ಕಿನಲ್ಲಿ, ಪರ್ವತದಲ್ಲಿ ಮೇಲೆ ಹಿರಿಯ ತಪಸ್ವಿನಿ ಶಬರಿ ಇದ್ದಾಳೆ. ಅವಳ ಬಳಿಗೆ ಹೋಗಿ, ಅವಳ ಆಶೀರ್ವಾದ ಬೇಡಿಕೋ. ನೀನು ಮುಂದೆ ಏನು ಮಾಡಬೇಕೆಂಬುದನ್ನು ಅವಳೇ ಹೇಳುತ್ತಾಳೆ" ಎಂದರು.

ವಿಜಯ ಅದರಂತೆಯೇ ನಡೆದುಕೊಂಡನು. ಶಬರಿಯ ಆಶ್ರಮ ತಲುಪಿದನು. ಸಂನ್ಯಾಸಿಯ ಬೋಧನೆಯಂತೆ, ಅವಳಲ್ಲಿ ತನ್ನ ಕೋರಿಕೆಯನ್ನು ಪೂರೈಸಲು ಬೇಡಿಕೊಂಡನು. ವಿಜಯನ ಸಹಜ ಆಸೆ ಮತ್ತು ತೀವ್ರಾಸಕ್ತಿಗಳಿಂದ ಪೂಜ್ಯ ಶಬರಿಯ ಮನಸ್ಸು ಕರಗಿತು. ಅವಳು, "ನೀನು ಉತ್ತರದ ಕಡೆ ಹೋದರೆ, ಸ್ವಲ್ಪ ದೂರದಲ್ಲೇ, ನಿನಗೆ, ಒಂದು ಅತ್ಯಂತ ಎತ್ತರದ ಶಿಖರದಿಂದ ನೀರು ಸುರಿಯುತ್ತಿರುವುದು ಕಾಣಿಸುತ್ತದೆ. ಆ ನೀರು ನೆಲವನ್ನು ಮುಟ್ಟುವುದಕ್ಕೆ ಮೊದಲೇ, ನೀನೊಂದು ಸಲ ನಿನ್ನ ದೇಹವನ್ನು ಪೂರ್ತಿಯಾಗಿ ಆ ನೀರಿನಲ್ಲಿ ಮುಳುಗಿಸಿದರೆ, ನಿನ್ನ ಪಾಪಗಳು ನಾಶವಾಗುತ್ತವೆ. ನಿನ್ನ ಆಸೆ ಈಡೇರುತ್ತದೆ" ಎಂದಳು. ಮತ್ತೆ ಅವಳು "ಈ ನೀರು, ಸ್ವಾಮಿ ಭೂತನಾಥನಿಗೆ ದೇವತೆಗಳು ಅಭಿಷೇಕ ಮಾಡಿದ ನಂತರ, ಪೊನ್ನಂಪಲಂ



ನಿಂದ ಹರಿದು ಬರುತ್ತಿರುವ ನೀರು. ನಾನು ನಿನಗೊಂದು ಮಡಕೆ ಕೊಡುತ್ತೇನೆ. ನೀನು ಆ ನೀರನ್ನು ಮಡಕೆಯಲ್ಲಿ ತುಂಬಿಟ್ಟುಕೋ" ಎಂದಳು.

ಮಡಕೆಯನ್ನು ಕೈಯಲ್ಲಿ ಹಿಡಿದು, ವಿಜಯ ಉತ್ತರದ ಕಡೆ ಪ್ರಯಾಣಿಸಿ, ಆ ಸ್ಥಳವನ್ನು ತಲುಪಿದನು. ಆ ಮಡಕೆಯಲ್ಲಿ ನೀರನ್ನು ಹಿಡಿದುಕೊಳ್ಳಲು, ನೀರಿನ ಕೆಳಗೆ ಮಡಕೆ ಇಟ್ಟಾಗ, ಮಡಕೆ ಒಡೆದು ಚೂರಾಯಿತು. ಆ ಮಡಕೆ ಚೂರುಗಳು ಬಿದ್ದ ಸ್ಥಳದಲ್ಲಿ ಚಿಕ್ಕದೊಂದು ಹಳ್ಳವಾಗಿ, ನೀರು ಅದರಲ್ಲಿ ತುಂಬಿಕೊಂಡಿತು. ವಿಜಯ ಆ ನೀರಿನಲ್ಲಿ ಮುಳುಗೆದ್ದನು. ಅವನು ಹಾಗೆ ಮಾಡುತ್ತಿದ್ದಾಗಲೇ, ಅವನ ಪಾಪಗಳೆಲ್ಲವೂ ತೊಳೆದುಹೋದವು. ಆದರೆ ಹೇಗೆ? ಕಪ್ಪು ಹಕ್ಕಿಗಳಾಗಿ ಹಾರಿ ಹೋಗಿ, ಸ್ವಲ್ಪ ದೂರದಲ್ಲಿ ಎಲ್ಲವೂ ಬಿದ್ದು ಸತ್ತವು. ದೇವತೆಗಳು ಅವನನ್ನು ಹೊಗಳಿದರು. ವಿಜಯನಿಗೆ ಏನೂ ಅರ್ಥವಾಗಲಿಲ್ಲ. ಅವನು ಸುಮ್ಮನೆ ಕಣ್ಣುಗಳನ್ನು ಮುಚ್ಚಿ ನಿಂತನು. ಸ್ವಲ್ಪ ಹೊತ್ತಿನ ನಂತರ ಅವನು ಕಣ್ಣುಗಳನ್ನು ತೆರೆದಾಗ, ಅವನೆದುರಿಗೆ ಸುಂದರ ಹುಡುಗನೊಬ್ಬ ನಗುತ್ತಾ ನಿಂತಿದ್ದನು. ವಿಜಯ ಆಶ್ಚರ್ಯಪಟ್ಟನು. ಅವನೇ ಸ್ವಾಮಿ ಭೂತನಾಥ ಇರಬೇಕೆಂದು ಭಾವಿಸಿ, ವಿಜಯ ಸ್ತುತಿಸಿದನು. ಆಗ ಸ್ವಾಮಿ, "ನಿನಗೇನು ವರ ಬೇಕೋ ಕೇಳಿಕೋ" ಎಂದನು. ವಿಜಯ ತನಗೆ ಸಂತಾನ ಪ್ರಾಪ್ತಿ ಆಗಬೇಕು ಎಂದು ಬೇಡಿದನು. ಅಷ್ಟೇ ಅಲ್ಲದೆ, ವಿಜಯ, ಪರಮಾತ್ಮನೇ ತನ್ನ ಮಗನಾಗಿ ಹುಟ್ಟಿಬರಬೇಕೆಂದು ಪ್ರಾರ್ಥಿಸಿದನು. ಭಗವಂತ ನಗುತ್ತಾ ಅವನನ್ನು ಆಶೀರ್ವದಿಸುತ್ತಾ, "ನಿನ್ನ ಮುಂದಿನ ಜನ್ಮದಲ್ಲಿ ನಾನೇ ನಿನ್ನ ಮಗನಾಗುತ್ತೇನೆ. ಈ ಜನ್ಮದಲ್ಲಿ ನಿನಗೆ ಸಂತಾನ ಪ್ರಾಪ್ತಿ ಇದೆ. ನೀನು ಸುಖವಾಗಿ ಇರುತ್ತೀ ನಿನ್ನ ಪಾಪಗಳೆಲ್ಲಾ ಮಾಯವಾಗಿ ಸತ್ತಿವೆ" ಎಂದನು.

ವಿಜಯ, ಅದೇ ಸಂದರ್ಭವನ್ನು ಬಳಸಿಕೊಂಡು, ಪರಮಾತ್ಮನನ್ನು ಕುರಿತು, ಹಿಂದಿನ ಜನ್ಮ ತನ್ನ ಪಾಪಕರ್ಮಗಳೇನಿದ್ದವೆಂದು ಕೇಳಿದನು. ಭಗವಂತ, "ನೀನು ಹಿಂದೆ ನಂಬಿಕೆ ದ್ರೋಹ ಮಾಡಿದ್ದೆ. ಅದು ಅತ್ಯಂತ ದೊಡ್ಡ ಪಾಪ. ಅದರಿಂದ ಮುಕ್ತಿ ದೊರಕುವುದೇನೂ ಸುಲಭದ್ದಲ್ಲ. ಆದರೆ ನೀನು ಆ ಪಾಪನಾಶಕ ತೀರ್ಥದಲ್ಲಿ ಸ್ನಾನ ಮಾಡಿ ಬಂದಿರುವೆ. ಆ ಪಾಪನಾಶಕ ತೀರ್ಥ ಶಬರಿಯ ಪ್ರಾರ್ಥನೆಗಳಿಂದಲೇ ಇಲ್ಲಿ ಹರಿಯುತ್ತಿರುವುದು. ನೀನು ನ್ಯೂನತೆಯನ್ನು ಹೋಗಲಾಡಿಸಿಕೊಂಡಿದ್ದರೂ, ನಿನ್ನ ಆಸೆ ಇನ್ನೂ ಇದ್ದೇ ಇದೆ. ಆದ್ದರಿಂದ ನೀನು ಮತ್ತೊಂದು ಜನ್ಮ ಪಡೆಯುತ್ತೀ. ಆ ಜನ್ಮದಲ್ಲಿ, ನಿನಗೆ ಮಗನಾಗಿ ನಾನಿರುತ್ತೇನೆ, ನಿನ್ನೊಂದಿಗೆ ಎಂದನು.

ನಂತರ ಪರಮಾತ್ಮನು, ವಿಜಯನಿಗೆ ಮುಂಬರುವ ಯುಗಗಳು, ಆ ವಿವಿಧ ಯುಗಗಳಲ್ಲಿನ ಜನರ ಪ್ರಕೃತಿಗಳು, ಮಾನವನ ಕುಸಿತ ಮತ್ತು ಪಾಪಕಾರ್ಯಗಳು, ಮತ್ತು ಮುಕ್ತಿಮಾರ್ಗದ ಬಗ್ಗೆ ತಿಳಿಸಿದನು.

ವಿಜಯ, ಭಕ್ತಿಯಿಂದ ಪರಮಾತ್ಮನ ಬೋಧೆಗಳನ್ನು ಕೇಳಿದನು ಮತ್ತು ಭಾವೈಕ್ಯನಾದನು. ತನ್ನ ಕಣ್ಣುಗಳಲ್ಲಿ ಹನಿಗಳಿದ್ದರೂ, ವಿಜಯ, ಭಗವಂತನನ್ನು ತನ್ನ ನಿಜಸ್ವರೂಪ ತೋರಿಸಲು ಪ್ರಾರ್ಥಿಸಿದನು. ಅವನ ಭಕ್ತಿಗೆ ಮೆಚ್ಚಿ ಸ್ವಾಮಿ ಭೂತನಾಥ, ಹಾಗೇ ಮಾಡಿದನು. ಆಗ ವಿಜಯ, ಇಡೀ ವಿಶ್ವ, ಒಳ್ಳೆಯದು, ಕೆಟ್ಟದ್ದು, ಹಿಂದಿನದು ಹಾಗೂ ಮುಂದಿನದು, ಎಲ್ಲಾ ದೇವತೆಗಳು, ದೇವರುಗಳು ಮತ್ತು ಹೆಣ್ಣುದೇವರುಗಳು, ವೇದಗಳು, ಇತಿಹಾಸಗಳು, ಪುರಾಣಗಳು, ಹಿರಿಯ ಋಷಿಗಳು ಮತ್ತು ಕಾಲಾತೀತ ಹಾಗೂ ವ್ಯೋಮಾತೀತ ಇರವಿನ ಎಲ್ಲಾ ವಿವಿಧ ಪ್ರಪಂಚಗಳನ್ನೂ ನೋಡಿ ಹೆದರಿ, ಆ ದೃಶ್ಯವನ್ನು ಹೆಚ್ಚು ಹೊತ್ತು ನೋಡಲಾಗದೆ, ಕೈಗಳನ್ನೆತ್ತಿ ಸ್ವಾಮಿ ಭೂತನಾಥನನ್ನು ಕೃಪೆ ತೋರೆಂದು ಬೇಡಿದನು. ಆಗ ಸ್ವಾಮಿ, ಬಾಲಕನ ರೂಪವನ್ನೇ ಮತ್ತೆ ಪಡೆದು, ವಿಜಯನನ್ನು ತಬ್ಬಿ, ಮುಂದಿನ ಜನ್ಮದಲ್ಲಿ ಅವನ ಅವತಾರದ ಭರವಸೆ ನೀಡಿದನು.

ಆ ರಾಜಶೇಖರನೇ, ಬ್ರಾಹ್ಮಣ ವಿಜಯನಾಗಿದ್ದನು. ಆದರ್ಶ ಪಾಂಡ್ಯ ಬ್ರಾಹ್ಮಣ ವಿಜಯನಿಗೆ ನಾವು ನಮ್ಮ ಗೌರವವನ್ನು ಸಲ್ಲಿಸಬೇಕು. ಅವನಿಲ್ಲದಿದ್ದರೆ, ನಾವು ಭಗವಂತನ ಪುರಾಣಗಳನ್ನು ಬರೆಯುವ ಅವಕಾಶವನ್ನೇ ಹೊಂದಿರುತ್ತಿರಲಿಲ್ಲ. ಕಡೆಗೆ ವರ್ಷಕ್ಕೊಮ್ಮೆ ಯಾತ್ರೆಗಾಗಿ ಪವಿತ್ರ ಶಬರಿಮಲೈಗೆ ನಾವು ಹೋಗುತ್ತಿರಲಿಲ್ಲವೋ ಏನೋ, ಅದಿರಲಿ. ನಾವು ಯಾತ್ರೆಗಾಗಿ ಹೋಗುವ ಆ ದೇವಸ್ಥಾನ, ಅಥವಾ ಆ ಪವಿತ್ರ ಪಂಪಾನದಿ ದಡದಲ್ಲಿ ನಮ್ಮ ಕಣ್ಣುಗಳನ್ನು ಕೋರೈಸುವಂಥ ಆ ಭಗವದ್ಭಕ್ತರ ಸಹೋದರ ಭಾವವೂ ಇರುತ್ತಲೇ ಇಲ್ಲ.

ವಿಜಯ ಇಲ್ಲದೇ ಇದ್ದಿದ್ದರೆ, ಪ್ರಾಯಶಃ, ಬೇರೆ ಹೆಸರಿನ ವ್ಯಕ್ತಿಯೊಬ್ಬ ಈ ಪೂರ್ವನಿಶ್ಚಿತ ಅವತಾರ ಕಾರ್ಯಕ್ಕಾಗಿ ಜನ್ಮ ತಾಳುತ್ತಿದ್ದನೋ ಏನೋ.

ವಿಜಯನ ಏಕೈಕ ಆಸೆ, ಹುಚ್ಚು ಆಸೆಯಾಗಿ ತಿರುಗಿ, ಮಗುವನ್ನು ಹೊಂದುವುದಷ್ಟೇ ಆಗಿತ್ತು. ಆದ್ದರಿಂದಲೇ ಅವನು ಆ ಕೆಲಸವನ್ನು ಮಾಡಲು ನಿರ್ಧರಿಸಿದ್ದನು. ಅವನು ಪರಮಾತ್ಮ ತನ್ನೆದುರಿನಲ್ಲಿ ನಿಂತಿದ್ದದ್ದನ್ನು ನೋಡಿದಾಗ, ಅದೂ ಸುಂದರವಾದ ಬಾಲಕನಂತೆ ನಿಂತಿದ್ದಾಗ, ಅವನಿಗೆ ಆ ಪರಮಾತ್ಮನನ್ನು ಆ ಆಕಾರದಲ್ಲೇ ಉಳಿಸಿಕೊಳ್ಳುವ ಆಸೆ ಅತಿಯಾಗಿ, ತನ್ನನ್ನೇ ಹಿಡಿತದಲ್ಲಿ ಇಟ್ಟುಕೊಳ್ಳಲಾಗಲಿಲ್ಲ. ಕೃತ್ರಿಮವನ್ನೇ ಅರಿಯದ ವಿಜಯನಿಗೆ ತನ್ನ ಪ್ರಾರ್ಥನೆ ಹಿಂದಿದ್ದ ಗುಟ್ಟಿನ ಅರಿವೂ ಇರಲಿಲ್ಲ. ಎಂದರೆ, ಭಗವಂತನೇ ತನ್ನ ಉದ್ದೇಶವನ್ನು ಪೂರೈಸಿಕೊಳ್ಳಲು ಕೆಲಸ ಮಾಡುತ್ತಿದ್ದಾನೆ ಎಂದು ತಿಳಿದಿರಲಿಲ್ಲ. ಅವನಿಗೆ ತನ್ನ ಪ್ರಾರ್ಥನೆಯ ಮೂಲಕ, ತಾನು ಸಲ್ಲಿಸಲಿದ್ದ ಅಮೂಲ್ಯವಾದ ಹಾಗೂ ಪವಿತ್ರವಾದ ಸೇವೆಯ ಅರಿವಿರಲಿಲ್ಲ.



ಮನುಷ್ಯ ತನ್ನ ಸಾಂಸಾರಿಕ ಆಸೆಗಳನ್ನು ಹುಡುಕಿಕೊಂಡು ಹೋಗುವಾಗ, ಒಂದು ಜಾತಿ, ಮತ, ರಾಷ್ಟ್ರ ಅಥವಾ ಒಂದು ರಾಜ್ಯವನ್ನೇ ನಾಶ ಮಾಡುತ್ತಾನೆ. ರಾವಣನಂತೆ, ನಾವೆಲ್ಲ ಭಗವಂತನ ದಯೆಗಾಗಿ ಆಸೆಪಡುತ್ತಿರುವ ವ್ಯಕ್ತಿಯ ಒಂದು ಮುಗ್ಧ ಆಸೆಯ, ಅರಿವುಂಟುಮಾಡುವ ಒಂದು ಉದಾಹರಣೆ ಇಟ್ಟುಕೊಂಡಿದ್ದೇವೆ.

ಅವನ ಅನ್ವೇಷಣೆಯಿಂದ, ಅವನು ತನ್ನ ಸ್ವಂತ ಆಸೆಯನ್ನೂ ಸಾಧಿಸಿ ಕೊಂಡದ್ದಲ್ಲದೆ, ಮಾನವ ಜಾತಿಗೆ, ತನ್ನ ಅಳೆಯಲಾಗದ ಗುಣಮಟ್ಟದ ಬೋಧನೆಗಳನ್ನು ದಯಪಾಲಿಸಿದನು. ಅದಕ್ಕಿಂತಲೂ ಹೆಚ್ಚಿನದು ಎಂದರೆ, ಭೂಮಿಯ ಮೇಲೆ ಭಗವಂತ ಅವತರಿಸಿ ಮಾನವ ಆಕಾರದಲ್ಲಿ ಓಡಾಡುವಂತೆಯೂ ಮಾಡಿದ್ದನು.

ಸಾಧ್ವಿ ಶಬರಿಗೆ ನಾವು ನೀಡಬೇಕಾದ ಋಣವೂ ಅಲ್ಪದ್ದೇನಲ್ಲ. ಪ್ರಾಯಶಃ ಅದು ಇನ್ನೂ ದೊಡ್ಡದು. ತನ್ನ ತಪಸ್ಸು ಮತ್ತು ಸಮರ್ಪಣೆಯ ಮೂಲಕ ವಿಜಯನನ್ನು ಅವನ ಪಾಪಗಳಿಂದ ಮುಕ್ತಗೊಳಿಸಿದ ಶಬರಿ, ಭಗವತ್ಕೃಪೆಯನ್ನೇ ಧರೆಗಿಳಿಸಿದ, ಹಿರಿಯ ವ್ಯಕ್ತಿ!

ಮಹರ್ಷಿಗಳು, ವಿಜಯನೆಂಬ ಬ್ರಾಹ್ಮಣನ ಕಥೆಯನ್ನು ಮುಗಿಸಿದ ನಂತರ, ಅವರು ಪಂಪಾ ತೀರ್ಥದ ಪಾವಿತ್ರ್ಯತೆಯ ಬಗ್ಗೆ ರಾಜನಿಗೆ ತಿಳಿಸಿದರು. ಮತ್ತೆ "ಈ ಪವಿತ್ರ ಪಂಪ, ಭಾರತ ವರ್ಷದ ಎಲ್ಲಾ ಶ್ರೇಷ್ಠವಾದ ಪವಿತ್ರವಾದ ಜಲಗಳ ಸಂಗಮ. ಅದನ್ನು ಪರಶುರಾಮ, ಕೇರಳಕ್ಕೆ ತಮ್ಮ ಸಮರ್ಪಣಾಭಾವದ ತಪಸ್ಸಿನ ಮೂಲಕ, ತಂದರು. ಪಂಪಾ ತೀರ್ಥದಲ್ಲಿ ಮುಳುಗುಹಾಕಿದವರೆಲ್ಲರೂ ತಮ್ಮ ಪಾಪಗಳಿಂದ ಮುಕ್ತರಾಗುತ್ತಾರೆ" ಎಂತಲೂ ಹೇಳಿದರು. ಅವನ ಕಥೆಯನ್ನು ಹೇಳಿದ ನಂತರ ಮಹರ್ಷಿಗಳು, ರಾಜನನ್ನು ಕುರಿತು, ಅವನು ಸಮಯವನ್ನು ವ್ಯರ್ಥ ಮಾಡದೆ ದೇವಸ್ಥಾನದ ನಿರ್ಮಾಣ ಪ್ರಾರಂಭಿಸಬೇಕೆಂದು ತಿಳಿಸಿ, ಹೊರಟರು.

ಒಳ್ಳೆಯ ದಿನವನ್ನು ಹುಡುಕಿಕೊಂಡು, ರಾಜನು, ತನ್ನ ದಿವಾನ, ಬ್ರಾಹ್ಮಣರು ಮತ್ತು ವಾಸ್ತುಶಿಲ್ಪಿಗಳನ್ನು ಕರೆದುಕೊಂಡು, ದೇವಸ್ಥಾನದ ನಿರ್ಮಾಣವೆಂಬ ಭವ್ಯ ಉದ್ದೇಶವನ್ನಿಟ್ಟುಕೊಂಡು ಹೊರಟನು. ಎರುಮೇಲಿ ಭಗವಂತ ಧರ್ಮಶಾಸ್ತನು ತಿಳಿದಿದ್ದಂತೆ, ರಾಜನು 'ವಾಪರ'ನಿಗಾಗಿ ಒಂದು ದೇವಸ್ಥಾನ ಕಟ್ಟಿಸಿ, ಅದರಲ್ಲಿ ವಾಪರನನ್ನು ಸ್ಥಾಪಿಸಿದನು. ಪೂಜೆಗಳು ಮುಗಿದ ನಂತರ, ದೊರೆ ಮತ್ತು ಅವನ ಹಿಂಬಾಲಕರು ಅಲಸ ನದಿಯನ್ನು ದಾಟಿ, ಪಂಪಾದಡವನ್ನು ಸೇರಿದರು. ಅಲ್ಲಿ ದೊರೆ ತನ್ನ ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ, ನಂತರ ಪ್ರಯಾಣ ಮುಂದುವರಿಸಿದನು. ಸಂಜೆಯ ಹೊತ್ತಿಗೆ ಆ ಗುಂಪು ಶಬರಿ ಆಶ್ರಮ ತಲುಪಿತು.

ರಾತ್ರಿ ಆಗುತ್ತಿತ್ತು. ಹಾಗಾಗಿ ರಾಜ ಅಲ್ಲೇ ತಂಗಲು ನಿರ್ಧರಿಸಿದನು. ತಮ್ಮ ಹಸಿವುಗಳನ್ನು ತೀರಿಸಿಕೊಂಡ ನಂತರ ರಾಜನ ಹಿಂಬಾಲಕರು ಮಲಗಿದರು. ಸುಸ್ತಾಗಿದ್ದುದರಿಂದ ಅವರೆಲ್ಲರೂ ನಿದ್ರಿಸಿದರು. ಆದರೆ ರಾಜನಿಗೆ ಸುಸ್ತಾಗಿದ್ದರೂ, ಅವನಿಗೆ ನಿದ್ರೆ ಬರಲಿಲ್ಲ.

ಅವನು ಹಾಗೇ ಮಲಗಿದ್ದಾಗ, ಭಗವಂತನ ಸೇವಕ ವಾಪರ, ರಾಜನ ಬಳಿಗೆ ಬಂದು, "ನಾನು ವಾಪರ. ಧರ್ಮಶಾಸ್ತ್ರ ಭಗವಾನರ ಆಜ್ಞೆಯ ಮೇಲೆ ಇಲ್ಲಿಗೆ ಬಂದಿದ್ದೇನೆ. ಭಗವಾನರು ನಿನ್ನನ್ನು ಕರೆತರಲು ಹೇಳಿದ್ದಾರೆ. ನಿನ್ನ ಗುಂಪಿನವರೆಲ್ಲರೂ ಎಚ್ಚೆತ್ತುಕೊಳ್ಳುವ ಹೊತ್ತಿಗೆ ನೀನು ಹಿಂದಿರುಗಬಹುದು. ಭಗವಂತ ಅವರೆಲ್ಲರನ್ನೂ ರಕ್ಷಿಸುತ್ತಾನೆ" ಎಂದನು.

ದೊರೆ ವಾಪರನನ್ನು ಹಿಂಬಾಲಿಸಿ, ಪೊನ್ನಪಲಂ ತಲುಪಿದಾಗ, ಅಲ್ಲಿನ ದೇವಸ್ಥಾನ, ಅತ್ಯಂತ ಬೆಲೆ ಬಾಳುವ ಕಟ್ಟಡವಾಗಿದ್ದದ್ದು ಮತ್ತು ಸಾವಿರ ಸೂರ್ಯರ ಪ್ರಕಾಶದಿಂದ ಶೋಭಿಸುತ್ತಿದ್ದುದ್ದು ಕಂಡು ಬಂತು. ಸತ್ಯವೇ ಮನುಷ್ಯ ರೂಪ ತಳೆದು, ಅಲ್ಲಿ ದ್ವಾರಪಾಲಕನಾಗಿತ್ತು. ಪಾವಿತ್ರ್ಯತೆ, ಶ್ರದ್ಧೆ, ನಮ್ರತೆ, ದಯೆ, ದೃಢನಿಷ್ಠೆ, ಪ್ರೇಮ ಮತ್ತು ಮಹದಾನಂದಗಳು, ಮೆಟ್ಟಲುಗಳ ಮೇಲೆ ವ್ಯೂಹವನ್ನು ನಿರ್ಮಿಸಿದ್ದವು. ವಪರ ರಾಜನನ್ನು ಭಗವಂತನ ಬಳಿಗೆ ಕರೆದೊಯ್ದನು. ದೊರೆ, ಆ ಹದಿನೆಂಟು ಮೆಟ್ಟಿಲುಗಳೂ ಅನರ್ಘ್ಯ ಶಿಲೆಗಳಿಂದ ಕೆತ್ತಲ್ಪಟ್ಟಿದ್ದುದನ್ನು ಗಮನಿಸಿದನು. ದೊರೆಗಳ ದೊರೆಯಾಗಿದ್ದ ಸ್ವಾಮಿ ಭೂತನಾಥ ಒಂದು ಚಿನ್ನದ ಸಿಂಹಾಸನವನ್ನು ಅಲಂಕರಿಸಿದ್ದನು. ಪಕ್ಕದಲ್ಲಿ ನಿಂತಿದ್ದ ಹಿರಿಯ ಋಷಿಗಳು ವೇದಗಳನ್ನು, ಶಾಸ್ತ್ರಗಳನ್ನು ಹೇಳಿ, ಅವನನ್ನು ಶ್ಲಾಘಿಸುತ್ತಿದ್ದರು.

ದೊರೆ ಸ್ವಾಮಿಗೆ ನಮಸ್ಕರಿಸಿ, ಸುಂದರ ಪದಗಳಿಂದ ಶ್ಲಾಘಿಸಿದನು. ಆಗ ಸ್ವಾಮಿ ದೊರೆಯನ್ನು ಅಪ್ಪಿ, "ನೀನು ಕೀರ್ತಿವಂತನಾಗಿ ಬಾಳು. ನಿನ್ನ ಭಕ್ತಿಗೆ ನಾನು ಮೆಚ್ಚಿದ್ದೇನೆ. ನಾನು ನಿನ್ನ ಅರಮನೆಯಲ್ಲಿದ್ದಾಗ, ನನ್ನ ಗುರುಗಳು, ನಾನು ರಾಜರ ರಾಜನಾಗಬೇಕೆಂದು ಆಶೀರ್ವದಿಸಿದ್ದರು. ಈಗ ನಾನು, ಅವರ ಆಶೀರ್ವಾದದಿಂದ ಆ ಸ್ಥಾನವನ್ನು ಪಡೆದಿದ್ದೇನೆ" ಎಂದನು.

ಇಲ್ಲಿ ಭಗವಂತ ಮತ್ತು ಅವನ ಭಕ್ತರ ಬಂಧನವನ್ನು ನಾವು ನೋಡುತ್ತಿದ್ದೇವೆ. ಅದರೊಂದಿಗೇ ಭಗವಂತ, ತನ್ನ ಭಕ್ತರ ಆಸೆಗಳನ್ನು 'ನಾತಿ ನೂತಿ ಪರಾದಶಂ' ಎಂಬುದಕ್ಕೆ ಅನುಗುಣವಾಗಿ, ಹೇಗೆ ಪೂರೈಸುತ್ತಾನೆ ಎಂಬುದನ್ನೂ ನೋಡುತ್ತಿದ್ದೇವೆ. ಪರಮಾತ್ಮನೇ ತನ್ನ ಭಕ್ತರ ಶ್ರದ್ಧೆಯನ್ನು ಕಾಪಾಡುವವನಾದ್ದರಿಂದ, ಈ ಒಂದು ಪ್ರಕರಣಕ್ಕಿಂತ ಹೆಚ್ಚಿನ ಸಾಕ್ಷ್ಯವೇನೂ ಬೇಕಾಗಿಲ್ಲ. ಇದರಿಂದ ನಾವು, ಭಕ್ತನನ್ನು ಪರಮಾತ್ಮ ಎಷ್ಟರಮಟ್ಟಿಗೆ ಕಾಪಾಡುತ್ತಾನೆ ಎಂಬುದನ್ನು ಕಲಿಯುತ್ತೇವೆ.



ನಂತರ ಭಗವಂತನು "ನನ್ನ ಮೂರ್ತಿಗೆ ಪಟ್ಟಬಂಧ ತೊಡಿಸಿ, ಚಿನ್ಮುದ್ರೆ ಹಾಕಿ ಪೂಜಿಸಿದರೆ ನನಗೆ ಅತ್ಯಂತ ಸಂತೋಷವಾಗುತ್ತದೆ. ನನ್ನ ಮೂರ್ತಿ ಕೆತ್ತಲು, ನಾನು ನಿಮಗೆ ಸೂಕ್ತ ಸಮಯದಲ್ಲಿ ಮಾರ್ಗದರ್ಶನ ನೀಡುತ್ತೇನೆ. ಹೇ ಮಹಾರಾಜಾ! ಈ ದೇಹವೇ ಪ್ರಪಂಚ, ಹೃದಯವೇ ದೇವಸ್ಥಾನ, ಅದರೊಳಗಿನ ಜೀವವೇ ನಾನು" ಎಂದು ಹೇಳಿ, ನಂತರ ರಾಜನಿಗೆ ಅವನು ಒಂದು ಖಡ್ಗವನ್ನು ನೀಡಿ "ವಾಪರನೇ ನಾನೆಂದು ತಿಳಿ, ಮಂಜಾಂಬಿಕೆ ನನ್ನ ಶಕ್ತಿಯೆಂದು ತಿಳಿ" ಎಂದನು.

ತಕ್ಷಣವೇ ವಾಪರ ರಾಜನನ್ನು ಅವನು ಮಲಗಿದ್ದ ಸ್ಥಳಕ್ಕೆ ಕರೆತಂದು ಬಿಟ್ಟನು. ಅವನ ಸಂಗಡಿಗರೆಲ್ಲರೂ ನಿದ್ರಿಸುತ್ತಿದ್ದುದರಿಂದ, ಈ ಪ್ರಸಂಗ ಯಾರ ಅರಿವಿಗೂ ಬರಲೇ ಇಲ್ಲ.

ಮಾರನೆಯದಿನ ಬೆಳಗ್ಗೆ, ರಾಜ ದೇವಸ್ಥಾನದ ಕಟ್ಟಡಕ್ಕೆ ಬೇಕಾಗಿದ್ದ ಸಾಮಾನುಗಳನ್ನು ಒಟ್ಟುಗೂಡಿಸಲು ಹೊರಟನು. ಆಗ ಇಂದ್ರ ಅತ್ಯಂತ ಉತ್ಸಾಹಿಕನಾಗಿದ್ದನು. ಜೊತೆಗೆ ರಾಜನು ಭಗವಂತನಿಂದ ಪಡೆದ ಅನುಗ್ರಹದ ಬಗ್ಗೆ ಅತ್ಯಂತ ಅಸೂಯೆ ಪಟ್ಟನು. ಅವನಿಗೆ ತನ್ನ ಸ್ಥಳವನ್ನೇ ಭಗವಂತ ಅವನಿಗೆ ಕೊಟ್ಟುಬಿಟ್ಟರೆ ಎಂದೂ ಭಯವಾಯಿತು. ಆಗ ಅವನು, ತನ್ನ ರಾಜ್ಯವನ್ನು ಉಳಿಸಿಕೊಳ್ಳಲು ರಾಜನನ್ನು ಕೊಲ್ಲಬೇಕು ಎನ್ನಿಸಿತು.

ಅದೇ ದಿನ ರಾತ್ರಿ ಇಂದ್ರನು ಒಬ್ಬ ಬೇಟೆಗಾರನಂತೆ ವೇಷ ಧರಿಸಿ, ರಾಜನ ಬಳಿಗೆ ಬಂದು, ತನ್ನ ಸ್ಥಳಕ್ಕೆ ಅವನು ಬಂದು, ಅನುಮತಿಯನ್ನೇ ಪಡೆಯದೆ ಅವನ ಮರಗಳನ್ನು ಹೇಗೆ ಕಡಿದನೆಂದೂ ಕೇಳಿದನು. ಆಗ ಜಗಳ ಜೋರಾಗಿ ರಾಜ ಮತ್ತು ಬೇಟೆಗಾರನ ನಡುವೆ ಹೊಡೆದಾಟ ಆರಂಭವಾಯಿತು. ಇಂದ್ರ (ಬೇಟೆಗಾರ) ತನ್ನ ವಜ್ರವನ್ನು ರಾಜನ ಮೇಲೆ ಪ್ರಯೋಗಿಸಿದನು. ಬೇರೆ ವಿಧಿಯೇ ಇಲ್ಲವೆಂದು ರಾಜನು ತನಗೆ ಭಗವಂತನು ನೀಡಿದ ಖಡ್ಗದಿಂದಲೇ ಪ್ರಹಾರ ಮಾಡಿದನು. ಆಗ ಇಂದ್ರನಿಗೆ ಸೋಲು ಖಚಿತವೆನ್ನುವ ಸ್ಥಿತಿ ಬಂತು, ಮತ್ತು ಸಾವೂ ಹತ್ತಿರ ಬಂದಿದೆ ಎನ್ನಿಸಿತು. ಆಗ ಅವನು ತಕ್ಷಣವೇ ಧರ್ಮಶಾಸ್ತ್ರರ ಕಾಲಿಗೆ ಬಿದ್ದು, ಕ್ಷಮೆ ಬೇಡಿದನು. ಆಗ ಭಗವಂತ, "ನಾನು ರಾಜ ರಾಜಶೇಖರನಿಗೆ ಕತ್ತಿ ಕೊಟ್ಟಿದ್ದೇವೆ. ಅದು ಅವನದು. ಅವನೇ ಅದನ್ನು ನಿನ್ನಿಂದ ಎಳೆದುಕೊಳ್ಳಬೇಕು. ನಾನಂತೂ ನಿಸ್ಸಹಾಯಕ" ಎಂದನು. ಹಾಗೆ ಹೇಳಿ ಭಗವಂತ, ಇಂದ್ರನನ್ನು ರಾಜನತ್ತ ಕಳುಹಿಸಿದನು. ಇಂದ್ರ ಅವನ ಕಾಲಿಗೆ ಬಿದ್ದು ಕ್ಷಮೆ ಬೇಡುತ್ತಾ, ತನಗೆ ಜೀವದಾನ ಮಾಡಬೇಕೆಂದು ಹೇಳಿ, ತಾನು ಇಂದ್ರನೆಂದೂ ಹೇಳಿಕೊಂಡನು. ಮುಗ್ಧರಾಜ, ತಕ್ಷಣ ಒಪ್ಪಿ ಅದನ್ನು ಹಿಂದಕ್ಕೆಳೆದುಕೊಂಡನು ಮತ್ತು ಇಂದ್ರನನ್ನು

ಕುರಿತು, "ನನ್ನ ಹೃದಯ ಭಗವಂತ ಧರ್ಮಶಾಸ್ತನಲ್ಲಿ ನೆಲೆಸಿದೆ. ನನಗೆ ನಿನ್ನ ಪದವಿಯ ಆಸೆ ಖಂಡಿತ ಇಲ್ಲ" ಎಂದನು.

ಯಾರ ಹೃದಯ ಭಗವಂತನಲ್ಲಿ ಲೀನವಾಗಿರುತ್ತದೆಯೋ ಮತ್ತು ಅವನ ದಿವ್ಯ ವಚನಗಳನ್ನೇ ನೆನೆಸುತ್ತಿರುತ್ತದೆಯೋ, ಅವರಿಗೆ ಪರಮಾತ್ಮನ ಶಾಶ್ವತ ಪರಮಾನಂದದ ವಿನಾಃ ಬೇರೆ ಯಾವ ತೃಪ್ತಿ ಆನಂದಗಳೂ ಬೇಕಾಗುವುದೇ ಇಲ್ಲ. ಶಾಶ್ವತ ಪರಮಾನಂದ ಎಂದರೆ ಪರಮೋಚ್ಚನ ಅರಿವಷ್ಟೆ.

ಆಗ ಇಂದ್ರನು, ರಾಜನಿಗೆ ದೇವಸ್ಥಾನ ಕಟ್ಟಿಸಲು ನೆರವಾಗಲು ವಿಶ್ವಕರ್ಮನನ್ನು ಕಳುಹಿಸಲೊಪ್ಪಿದನು.

ಮರುದಿನ ಬೆಳಿಗ್ಗೆ ವೃಶ್ಚಿಕದ ಮೊದಲನೆ ದಿನ, ವಿಶ್ವಕರ್ಮನು ಇಂದ್ರನ ಅಪ್ಪಣೆ ಪಡೆದು ಬಂದನು. ಅವನು ರಾಜನಿಗೆ ದೇವಸ್ಥಾನವನ್ನು ಎಲ್ಲಿ ನಿರ್ಮಿಸಬೇಕೆಂದು, ಸ್ಥಳ ತೋರಿಸಿದನು. ಅದರಂತೆ ರಾಜ ಅಲ್ಲಿ ದೇವಸ್ಥಾನಕ್ಕೆ ಪಾಯ ಹಾಕಿದನು.

ದೇವಸ್ಥಾನದ ನಿರ್ಮಾಣ ಮುಗಿದ ನಂತರ, ಭಗವಂತನ ಮೂರ್ತಿಯನ್ನು ಕೆತ್ತಿ, ಪ್ರತಿಷ್ಠಾಪಿಸುವ ಕೆಲಸವಿನ್ನೂ ಉಳಿದಿತ್ತು. ರಾಜನಿಗೆ ಅದು ಯಾವ ಆಕಾರ ತಳೆಯಬೇಕೆಂಬುದರ ಅರಿವಿರಲಿಲ್ಲ. ಅದರ ಬಗ್ಗೆ ಚಿಂತಿತನಾಗಿದ್ದಾಗ, ಪರಶುರಾಮನೇ ಕಲ್ಲುಕುಟಿಕನ ವೇಷದಲ್ಲಿ ಬಂದು, ಪಟ್ಟ ಬಂಧ ಮತ್ತು ಚಿನ್ಮುದ್ರೆಗಳನ್ನೊಳಗೊಂಡಿದ್ದ ಎಷ್ಟೋ ಧರ್ಮಶಾಸ್ತನ ವಿಗ್ರಹಗಳನ್ನು ತೋರಿಸಿದನು. ಅವುಗಳನ್ನು ನೋಡಿದ ದೊರೆ ಆಶ್ಚರ್ಯಗೊಂಡನು. "ಇಷ್ಟೊಂದು ವಿಗ್ರಹಗಳು ಇಲ್ಲಿ ಹೇಗೆ ಬಂದವು?" ಎಂದು ಪ್ರಶ್ನಿಸಿದನು. ಆಗ ಪರಶುರಾಮ, "ನೀನೊಬ್ಬನೇ ಪಂತಾಳಂನ ರಾಜನಾಗಿದ್ದು ಧರ್ಮಶಾಸ್ತದ ವಿಗ್ರಹಗಳನ್ನು ಸ್ಥಾಪಿಸಬೇಕಾಗಿದೆ ಎಂದು ತಿಳಿಯಬೇಡ. ಇದೇ ಕೆಲಸವನ್ನು ಇನ್ನೂ ಎಷ್ಟೋ ಮಂದಿ ಮಾಡಿದ್ದಾರೆ" ಎಂದನು. ತಕ್ಷಣವೇ ಪರಶುರಾಮ ತನ್ನ ಗುರುತನ್ನು ವ್ಯಕ್ತಪಡಿಸುತ್ತಾ, "ಕೇರಳದಲ್ಲಿ ಬೇಕಾದಷ್ಟು ದೇವಸ್ಥಾನಗಳಿವೆ. ಆದರೆ ಭಗವಂತ ಧರ್ಮಶಾಸ್ತನ ಮುಖ್ಯವಾದ ದೇವಸ್ಥಾನ ಇದೇ. ಇದರಲ್ಲಿನ ಮೂರ್ತಿಯು ಪಟ್ಟಬಂಧ ಮತ್ತು ಚಿನ್ಮುದ್ರೆ ಹೊಂದಿರಬೇಕು" ಎಂದು ಹೇಳುತ್ತಾ ರಾಜನಿಗೆ ಮೂರ್ತಿಯ ನಿಜವಾದ ಆಕಾರದ ಬಗ್ಗೆ ತಿಳಿಸಿದನು.

ವಿಗ್ರಹವನ್ನು ಸೂಚನೆಗನುಗುಣವಾಗಿಯೇ ಕೆತ್ತಲಾಯಿತು. ಅದನ್ನು ಪರಶುರಾಮನೇ ಮಕರ ಸಂಕ್ರಾಂತಿಯ ದಿನದಂದು ಸೂಕ್ತ ಗಳಿಗೆಯಲ್ಲಿ ಪ್ರತಿಷ್ಠಾಪಿಸಿದನು. ಪರಶುರಾಮನೇ ದೊರೆಗೆ ಪೂಜೆಗಳನ್ನು ನಡೆಸಬೇಕಾದ ವಿಧಾನಗಳ ಬಗ್ಗೆ ಮತ್ತು ಉತ್ಸವಗಳನ್ನು ನಡೆಸುವ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡಿದನು. ರಾಜನು ತಕ್ಷಣವೇ ಅವುಗಳಿಗೆಲ್ಲಾ ಒಪ್ಪಿ, ತನ್ನ ದಿವಾನನಿಗೆ ಸೂಕ್ತ ಸೂಚನೆಗಳನ್ನು ನೀಡಿದನು.



ಇತರ ಎಲ್ಲಾ ಪ್ರತಿಷ್ಠಾಪನೆಗಳೂ ನಡೆದವು. ದೊರೆ ತನ್ನ ಕರ್ತವ್ಯ ಮಾಡಿ ಮುಗಿಸಿದಾಗ, ಸ್ವರ್ಗದಿಂದ, "ಹೇ ರಾಜ, ನೀನು ಅಮರತ್ವ ಪಡೆದಿರುವೆ" ಎಂಬ ನುಡಿಗಳು ಕೇಳಿ ಬಂದವು.

ರಾಜನೂ, ಅವನ ಸಹಚರರ ಗುಂಪಿನವರೂ ಸಮಪ್ರದೇಶಕ್ಕೆ ಹಿಂದಿರುಗಿದರು. ಕೆಲವು ದಿನಗಳವರೆಗೆ ರಾಜ್ಯಭಾರ ಮಾಡಿದ ರಾಜ, ತನ್ನ ಮಗನನ್ನು ಉತ್ತರಾಧಿಕಾರಿಯಾಗಿ ನೇಮಿಸಿ, ತಾನು ಪಂಪಾನದಿ ತೀರಕ್ಕೆ ಬಂದು ತನ್ನ ಉಳಿದಿದ್ದ ಆಯಸ್ಸನ್ನು, ಸಂನ್ಯಾಸಿಯಾಗಿ ತಪಸ್ಸು ಮಾಡಿಕೊಂಡೇ ಕಳೆದನು.

* * * *

# ಪರಿಶಿಷ್ಟ

## ಅ. ಯಾತ್ರಿಕರಿಗೆ ಮಾರ್ಗದರ್ಶನ:

ನಾವು ಶಬರಿ ಬೆಟ್ಟದ ಯಾತ್ರೆಯ ಮಹತ್ವವನ್ನು, ಗಮನಿಸಬೇಕಾದ ಕಟ್ಟುನಿಟ್ಟುಗಳೊಂದಿಗೆ ಜೊತೆಗೂಡಿಸಿ, ವಿಶ್ಲೇಷಿಸಿದಾಗ, ಅದೊಂದು ಅಮರತ್ವವನ್ನು ಪಡೆದು, ಪರಮಾತ್ಮನೊಂದಿಗೆ ಐಕ್ಯವಾಗಲು ಹೊರಟಿರುವ ಆತ್ಮದ ಪ್ರಯಾಣ ಎಂಬ ಭಾವನೆ ಹುಟ್ಟುತ್ತದೆ. ಅದು ಕೇವಲ ಚಿಹ್ನೆಯೇ ಆಗಿದ್ದರೂ, ಯಾತ್ರೆಯ ಮೌಲ್ಯದ ಬಗ್ಗೆಯ ಸಿರಿಗಳಿಕೆಯ ಬಗ್ಗೆ ಹೇಳಲಾಗುವುದಿಲ್ಲ. ಏಕೆಂದರೆ ಈ ಲಾಂಛನ ಪೂರ್ವಕ ಯಾತ್ರೆಯ ನಿರಂತರ ಪುನರಾವರ್ತನೆಯಿಂದ ಮಾತ್ರ, ನಿಜವಾದ ಯಾತ್ರೆಯ ಸತ್ಯ, ನಮ್ಮಲ್ಲಿ ಹುಟ್ಟುತ್ತದೆ. ಆ ಕಟ್ಟುನಿಟ್ಟುಗಳು ಸ್ಪಷ್ಟವಾಗಿ, "ಸರ್ವಧರ್ಮಾನ್ ಪರಿತ್ಯಜ್ಯ" ಎಂಬುದನ್ನು ಸೂಚಿಸುತ್ತವೆ.

ಈ ಮಾಯಾ ಪ್ರಪಂಚದ ಪ್ರಭಾವದಿಂದ ಆತ್ಮ ಬಿಡುಗಡೆ ಹೊಂದಿರುವುದರಿಂದ, ಪ್ರಪಂಚದ ಯಾವ ಧರ್ಮಗಳನ್ನೂ ಅದರೊಂದಿಗೆ ಸೇರಿಸಲಾಗುವುದಿಲ್ಲ. ಯಾರು ಅವನಲ್ಲಿಗೆ ಹೋಗುತ್ತಾರೆಯೋ, ಅವರನ್ನೆಲ್ಲಾ ಸ್ವಾಗತಿಸುತ್ತಾನೆ. ಅಲ್ಲಿಗೆ ಹೋಗುವ ಹಿಂದೂಗಳಲ್ಲದವರ ಸಂಖ್ಯೆಯೂ ವರ್ಷವರ್ಷಕ್ಕೂ ಹೆಚ್ಚುತ್ತಿರುವುದೂ ಹೆಚ್ಚುತ್ತಿದೆ. ಜೊತೆಗೆ ಮೂಲ ದೇವಸ್ಥಾನದ ಎದುರಿಗೇ ವವರ ಎಂಬ ಮುಸಲ್ಮಾನನ ಗುಡಿ ಇದೆ. ಅವನದು ಮೊದಲನೆಯ ವಿಗ್ರಹವಾಗಿದ್ದು, ಅದು ಭಗವಂತನ ಮಾನವಜಾತಿಯ ಸರಿಸಮಾನತೆಯ ಘೋಷಣೆಯನ್ನು ಸಾರುವಂತಿದೆ. ಆದರೆ ಬಾಹ್ಯದ ಸಂಕೇತಾತ್ಮಕ ಕ್ರಿಯೆಗಳಲ್ಲದೆ, ಕೇವಲ ಮಾನವ ದೇಹದೊಳಗಿನ ಸಂಕೇತಾತ್ಮಕ ಕ್ರಿಯೆಯನ್ನು ಮಾತ್ರ ಆಶಿಸುತ್ತವೆ.

ಆ ಯಾತ್ರೆಯನ್ನು ಕೈಗೊಂಡಾಗ, ಕಟ್ಟುನಿಟ್ಟುಗಳು ಬಹಳ ಮುಖ್ಯ. ಏಕೆಂದರೆ ಅದು ತಳಪಾಯುವಾಗಿರುತ್ತದೆ. ಅವರ ಆಚರಣೆಯ ತೀವ್ರತೆಯಿಂದ, ಉಂಟಾಗಿಸಿಕೊಳ್ಳುವ ಪರಿವರ್ತನೆಯಿಂದಲೇ, ಅವರ ಯಾತ್ರೆಯ ಸಾಫಲ್ಯತೆಯ ಪರಿಣಾಮ ತೂಗಾಡುವುದು. ನಾವು ಆ ಯಾತ್ರೆಯನ್ನು ಕೈಗೊಳ್ಳುವುದು, ಜ್ಞಾನಕ್ಕಾಗಿ, ಅನುಭವಜನ್ಯ ಜ್ಞಾನಕ್ಕಾಗಿ ಮಾತ್ರ. ನಾವು ಭಗವಂತನಿಗೆ ಮತ್ತು ಅವನ ಆಸೆಗೆ ಅಡಿಯಾಳಾಗದಿದ್ದರೆ, ಮತ್ತು ನಮ್ಮ ಅಸ್ಮಿತೆಯಿಂದ ಹುಟ್ಟಿದ ವೈಯಕ್ತಿಕ ಯಾವ ಮೀಸಲಾತಿಯೂ ಇಲ್ಲದಂತೆ ಗುಣಗಳನ್ನು ಕಡೆಗಾಣಿಸದಿದ್ದರೆ, ಇದು



ಕೇವಲ ಬೂಟಾಟಿಕೆಯ ವಿನಾಃ ಬೇರೆ ಏನೂ ಆಗುವುದಿಲ್ಲ. ನಾವು ಪರಮಾತ್ಮನ ಸನ್ನಿಧಿಯಲ್ಲಿ, ನಮ್ಮ ಮಾನಸಿಕ ಹಿಡಿತಗಳನ್ನಿಟ್ಟುಕೊಂಡು ನಿಂತರೆ ಏನು ತಾನೇ ಸಾಧಿಸಿದಂತಾಗುತ್ತದೆ?

ಜನರು ನನ್ನೆದುರಿನಲ್ಲಿ ಕೇವಲ ಪದಗಳನ್ನು ಉಚ್ಚರಿಸುತ್ತಾ ನಮಸ್ಕರಿಸಿದಂತೆ ಬಿದ್ದರೆ, ಮತ್ತು ಅವರ ಹೃದಯ ಎಲ್ಲೋ ದೂರದಲ್ಲಿದ್ದು ಅವರು ತಮ್ಮ ನಾಲಿಗೆಯಿಂದ ಮಾತ್ರ ನನ್ನನ್ನು ಗೌರವಿಸಿದರೆ, ಮತ್ತು ಅವರಿಗೆ ನನ್ನ ಬಗ್ಗೆಯ ಭಯ ಕೇವಲ ಮಾನವ ಸಾಂಪ್ರದಾಯಿಕ ರೂಢಿಯಾಗಿದ್ದರೆ, ಆಗ ಅವರ ನಿಜವಾದ ಬುದ್ಧಿವಂತಿಕೆಯೇ ಇಂಗಿಹೋಗುತ್ತದೆ ಮತ್ತು ಅವರ ಚಿಂತನಕಾರರ ಬಗ್ಗೆಯ ಅರಿವೂ ಮಂದವಾಗುತ್ತದೆ."

ಯಾತ್ರೆಯಿಂದ ಸುಖವಾಗಿ ಬರುವುದೊಂದೇ, ಯಾತ್ರೆಯ ಸಾಫಲ್ಯತೆ ಎಂದುಕೊಂಡರೆ ಅದು ನಿರ್ಣಾಯಕ ಅಂಶವಲ್ಲ. ಅದನ್ನು ನಾವು ನಮ್ಮ ಅನುಭವದಿಂದ ಗಳಿಸಿಕೊಂಡ ಅನುಭವ ಜನ್ಯ ಜ್ಞಾನದ ನಿಧಿಯಿಂದ ಅಳೆಯಬೇಕು. ಅದು ನಾವು ಯಾತ್ರೆ ಕೈಗೊಳ್ಳುವಾಗ ಹೊಂದಿರುವ ಭಗವದ್ಭಕ್ತಿ ಮತ್ತು ಆತ್ಮಾರ್ಪಣೆಯ ಪ್ರಕೃತಿಯನ್ನು ಅವಲಂಬಿಸಿರುತ್ತದೆ. ಹಾಗೆ ನಾವು ಗೆಲ್ಲಬೇಕಾದರೆ, ನಾವು ನಮ್ಮ ಇರವನ್ನು, ಶ್ರದ್ಧಾಪೂರ್ವಕವಾಗಿ ಶಾಸ್ತ್ರಗಳನ್ನೆಲ್ಲಾ ಮಾಡಿಕೊಂಡು, ನಮ್ಮ ಸರ್ವಸ್ವವನ್ನೂ ಭಗವಂತನ ಚರಣಾರವಿಂದಗಳಲ್ಲಿ ಅರ್ಪಿಸಬೇಕು. "ನೀವು ನೆಟ್ಟಂತೆ, ಫಲ ಪಡೆಯುವಿರಿ." ಎಲ್ಲಾ ಉಗ್ರಸಂಯಮಗಳನ್ನೂ ಪಾಲಿಸಿಕೊಂಡು, ನಾವು ನಮ್ಮ ಮನಃಸ್ಥಿತಿಯಲ್ಲಿ ಯಾವ ಪ್ರಮಾಣದಲ್ಲಿ ಪರಿವರ್ತನೆಗಳನ್ನು ಉಂಟುಮಾಡಿ ಕೊಂಡಿರುತ್ತೇವೆಯೋ ಅದೇ ಪ್ರಮಾಣದಲ್ಲಿ ನಮಗೆ ಫಲ ದೊರಕುತ್ತದೆ.

### ೧. ಬ್ರಹ್ಮಚರ್ಯೆ (ಇಂದ್ರಿಯ ನಿಗ್ರಹ):

ಅತ್ಯಂತ ಕಷ್ಟದ ಸಾಧನೆ, ಆದರೆ ಅತ್ಯಂತ ಮಹತ್ವದ ಸಾಧನೆಯೆಂದರೆ, ಕಾಮಕ್ರೀಡೆ ವರ್ಜಿಸುವುದು. ಕೇವಲ ಕಾರ್ಯದ ಮೂಲಕವಲ್ಲದೆ, ವಚನ ಮತ್ತು ಭಾವನೆಯಲ್ಲಿಯೂ ವರ್ಜಿಸಬೇಕು. ಹೆಣ್ಣಿನ ಸೌಂದರ್ಯದತ್ತ ವ್ಯಕ್ತಿಯು ದುರಾಸೆಯಿಂದ ನೋಡಿದರೂ, ಅದು ವ್ಯಭಿಚಾರ ನಡೆಸಿದಂತೆಯೇ ಆಗುತ್ತದೆ. ಕಾಮಾಸಕ್ತಿಯು ಆತ್ಮವನ್ನು ನಾಶಮಾಡುತ್ತದೆ. ಆದ್ದರಿಂದ, ಕಾಮಾಸಕ್ತಿಯನ್ನು ತ್ಯಜಿಸಿ, ಆತ್ಮವನ್ನು ಹಾಳಾಗದೆ ಇರುವಂತೆ ನೋಡಿಕೊಳ್ಳುವುದೇ ಒಳ್ಳೆಯದು.

ಭಗವಂತ ಮನುಷ್ಯನನ್ನು ಧರೆಗೆ ಕಳುಹಿಸಿದಾಗ, ಅವನು "ಫಲದಾಯಕ ನಾಗಿರು, ಭೂಮಿಯನ್ನು ಅನೇಕತ್ವದ್ದಾಗಿ ಮತ್ತು ಬದಲಿ ಅಲಂಕರಣಗಳಿಂದ ಕೂಡಿರುವಂತೆ ಮಾಡು, ಶಾಂತಪ್ರಭಾವದ್ದನ್ನಾಗಿ ಮಾಡು. ತೋಟದ ಮರಗಳಲ್ಲಿನ ಹಣ್ಣುಗಳನ್ನು ಧಾರಾಳವಾಗಿ ತಿನ್ನು. ಆದರೆ ತೋಟದ ಮಧ್ಯದಲ್ಲಿನ ಮರದ

ಹಣ್ಣನ್ನು ನೀನು ಮುಟ್ಟಲೂ ಬಾರದು, ತಿನ್ನಲೂಬಾರದು. ಹಾಗೆ ಮಾಡಿದರೆ ಆ ಮರ ಸತ್ತು ಹೋಗುತ್ತದೆ" ಎಂದನು. ಮನುಷ್ಯ ಅವನ ಮಾತನ್ನು ಕೇಳದೆ, ಮಧ್ಯದ ಮರದ ಹಣ್ಣುಗಳನ್ನೂ ತಿಂದು, ಮಾನವನಾದನು.

ಮುಖ್ಯವಾಗಿ ಹೇಳಬೇಕೆಂದರೆ, ಭಗವಂತ, "ಪ್ರಾಣಿಗಳ ದೈಹಿಕ ಮಿಲನದ ಪ್ರಸರಣದ ರೂಪದಲ್ಲಿ ಮನುಷ್ಯನ ತನ್ನ ಜನರನ್ನು ಹೆಚ್ಚಿಸಬಾರದು" ಎಂದು ಸಾರಿದ್ದನು.

'ಹಾಗಾದರೆ ನೀವು ಸಾಯುವಿರಿ' ಎಂದರೆ ದೈಹಿಕ ಸಾವೆಂದು ಅರ್ಥವಲ್ಲ. ದೈಹಿಕ ಹುಟ್ಟಿನ ನಂತರ ದೈಹಿಕ ಸಾವು ಬಂದೇ ಬರುತ್ತದೆ. ಸಾವು ಎಂದರೆ, ಇಲ್ಲಿ, ಮನುಷ್ಯನ ದಿವ್ಯಪ್ರಜ್ಞೆಯಲ್ಲಿ ಮತ್ತು ಅವನ ಅಮರಾತ್ಮಕ ಸಾವು ಅಥವಾ ಅಳಿಯುವಿಕೆ ಎಂದರ್ಥ ಬರುತ್ತದೆ.

ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ಇಂದ್ರಿಯ ನಿಗ್ರಹದ ಪ್ರಾಮುಖ್ಯತೆಯಷ್ಟೇ ಅಲ್ಲದೆ, ಸಾಮಾನ್ಯವಾದ ದೈನಂದಿನ ಜೀವನದಲ್ಲಿಯೂ ಅದಕ್ಕೆ ವಿಶಿಷ್ಟವಾದ ಪ್ರಾಮುಖ್ಯತೆ ಇದೆ. ಅದು ನಮ್ಮನ್ನು ಒಳ್ಳೆಯ ಆರೋಗ್ಯ, ದೈಹಿಕ ಹಾಗೂ ಮಾನಸಿಕ ಶಕ್ತಿಗಳನ್ನು ಇಟ್ಟುಕೊಳ್ಳುವಂತೆ ಮಾಡಿ. ಎಷ್ಟೇ ದೈಹಿಕ ತೊಂದರೆಗಳನ್ನಾದರೂ ಮತ್ತು ಹವಾಮಾನದ ತೊಂದರೆಗಳನ್ನಾದರೂ ಸಹಿಸಿಕೊಳ್ಳುವಂತೆ ಮಾಡುತ್ತದೆ.

**೨. ಆಹಾರ:–**

ಇಂದ್ರಿಯ ನಿಗ್ರಹದಲ್ಲಿ ಆಹಾರದ ಪಾತ್ರ ಅತ್ಯಂತ ಮುಖ್ಯವಾದದ್ದು. ಸಾತ್ವಿಕ ಪ್ರಕೃತಿಯ ಆಹಾರ, ಕಾಮಕ್ರೀಡೆಯ ಆಸೆಯನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ. ಜೊತೆಗೆ ರಜೋಗುಣ, ತಮೋಗುಣಗಳೆಂಬ ಎರಡು ಗುಣಗಳನ್ನು ಕ್ಷೀಣಿಸಿಸಿ, ಮನುಷ್ಯನಲ್ಲಿನ ಸಾತ್ವಿಕ ಗುಣಗಳನ್ನು ಬಲಗೊಳಿಸುತ್ತದೆ. ತಂಗಳು ಆಹಾರವೂ ಸಹ, ಆಧ್ಯಾತ್ಮಿಕ ಪ್ರಗತಿಗೆ ದೊಡ್ಡ ಅಡಚಣೆ. ಆಹಾರ ಕಟ್ಟುನಿಟ್ಟಿನ ಜೀವನವನ್ನು ನಡೆಸಲು ಸಹಾಯ ಮಾಡುತ್ತದೆ. ಮತ್ತು ನಾವು ನಿಷೇಧಗಳನ್ನು ಗಮನಿಸಿದರೆ, ಅವುಗಳ ಪ್ರಾಮುಖ್ಯತೆಯನ್ನು ಬಗ್ಗೆ ಏನೂ ಅರಿವಿಲ್ಲದಂತೆ ಪ್ರಶ್ನಿಸುವುದಕ್ಕಿಂತ, ಎಷ್ಟೋ ಸಹಾಯಕವಾಗಿ ಚೆನ್ನಾಗಿರುತ್ತೇವೆ.

ಅಷ್ಟೇ ಪ್ರಾಮುಖ್ಯತೆ ನೀಡಬೇಕಾದದ್ದು, ನಾವು ತಿನ್ನುವ ಆಹಾರದ ಪ್ರಮಾಣಕ್ಕೂ ಆವಶ್ಯಕ. ನಮಗೆ ಆವಶ್ಯಕತೆ ಇರುವಷ್ಟು ಮಾತ್ರ ನಾವು ಹಿಡಿತವಿಟ್ಟು ತಿನ್ನಬೇಕು.

**೩. ಉಡುಪು:**

ಹಬ್ಬದ ದಿನಗಳಲ್ಲಿ ಮತ್ತು ಯಾತ್ರೆಯ ದಿನಗಳಲ್ಲಿ ಯಾತ್ರಿಕರು ಧರಿಸುವ ಬಟ್ಟೆಗಳ ಬಣ್ಣಕ್ಕೂ ಏನಾದರೂ ಪ್ರಾಮುಖ್ಯತೆ ಇದೆಯೇ ಎಂದು ನಾವು



ಆಶ್ಚರ್ಯಪಡಬಹುದು. ಅವರೆಲ್ಲರೂ, ನೀಲಿ, ಕಪ್ಪು ಮತ್ತು ಕಾವಿಬಣ್ಣಗಳ ಉಡುಪುಗಳನ್ನು ಧರಿಸಬೇಕು.

ನೀಲಿ ಬಣ್ಣ, ಎಲ್ಲವನ್ನೂ ಮುಚ್ಚುವಂಥ ಸ್ವರ್ಗದ ಬಣ್ಣ. ಭಗವಂಥ ನೀಲಿ ಬಣ್ಣದ ಉಡುಪನ್ನೇ ಧರಿಸುತ್ತಾನೆ ಎನ್ನಲಾಗಿದೆ. ಕಾವಿಯಂಥ ಸಂತರ ಬಣ್ಣ, ಆದರೆ ಕಪ್ಪು ಬಣ್ಣ ಸತ್ತ ಮನುಷ್ಯನ ಬಣ್ಣ. ಸತ್ತವನು ಎಂದರೆ ಪ್ರಪಂಚಕ್ಕೆ ಮಾತ್ರ ಸತ್ತವನು. ಈ ವರ್ಣಗಳ ಉಡುಪುಗಳನ್ನು ಅವುಗಳ ಪ್ರಾಮುಖ್ಯತೆಯ ಪೂರ್ಣ ಅರಿವಿನಿಂದ ಬಳಸಿದರೆ, ಅವು ಯಾತ್ರಿಕನ ಮನಸ್ಸನ್ನು ಸಂಯೋಜಿಸುವ ಗುಣವನ್ನು ಹೊಂದಿರುತ್ತವೆ. ಆಧುನಿಕ ವಿವರಣೆ ಏನೆಂದರೆ, ಈ ವರ್ಣಗಳು ಕಾಡುಪ್ರಾಣಿಗಳ ಗಮನವನ್ನು ಸೆಳೆಯುವುದಿಲ್ಲವೆಂದೇ ಹೌದು. ಅದು ನಿಜವಾಗಿದ್ದರೆ, ಜನರು ತಮ್ಮ ಯಾತ್ರೆಯನ್ನು ಆರಂಭಿಸುವಾಗಲೂ ಅದೇ ಬಣ್ಣಗಳನ್ನೇಕೆ ತೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಉತ್ತರವಿರುವುದಿಲ್ಲ.

**೪. ಪರಮಾತ್ಮನನ್ನು ಎಲ್ಲದರಲ್ಲಿಯೂ ನೋಡಿ– ವೈವಿಧ್ಯದಲ್ಲಿ ಏಕತೆ:**

ಈ ಪರಿಸ್ಥಿತಿಯಲ್ಲಿಯೇ ಮನುಷ್ಯನನ್ನು ತನ್ನ ಕೆಳಗಿನ ಪ್ರಜ್ಞೆಯಿಂದ ಮೇಲೇಳಲು ಕರೆಯುವುದು, ಎಂದರೆ ಪರಮಾತ್ಮನನ್ನು ಎಲ್ಲಾ ಸಾಮಾನುಗಳಲ್ಲಿಯೂ ಇರುವ ಸರ್ವಶಕ್ತ, ಸರ್ವವ್ಯಾಪಿ ಎಂದು ಭಾವಿಸುವುದು ಮತ್ತು ಪ್ರತಿಯೊಂದು ಚೈತನ್ಯಯುಕ್ತ ಹಾಗೂ ಅಚೇತನಗಳಲ್ಲಿ ಕೂಡ, ಭಗವಂತನನ್ನು ಗುರುತಿಸುವುದು. ನಾವು ನೊಡುವ ಪ್ರತಿಯೊಬ್ಬರನ್ನೂ ನಾವು 'ಭಗವಂತ' ಎಂದೇ ಭಾವಿಸಬೇಕು. "ಯಸ್ತು ಸರ್ವಾನಿ ಭೂತಾನಿ ಆತ್ಮನ್ಯೇವನುಪಶ್ಯತಿ"

"ಭಗವಂತ ಮನುಷ್ಯನನ್ನು ತನ್ನ ಸ್ವಂತ ರೂಪದಲ್ಲಿಯೇ ಸೃಷ್ಟಿಸಿದ್ದಾನೆ. ಭಗವಂತನ ರೂಪದಲ್ಲಿಯೇ ಭಗವಂತನು ಹೆಂಗಸು, ಗಂಡಸು ಎಲ್ಲರನ್ನೂ ಸೃಷ್ಟಿಸಿದನು."

"ನಾವು ಭಗವಂತನನ್ನು ಪೂಜಿಸುವ ದೇವಸ್ಥಾನವು ಮಾತ್ರ ಭಗವಂತನ ಮನೆಯಲ್ಲ. ಇಡೀ ವಿಶ್ವವೇ ಭಗವಂತನ ಸೃಷ್ಟಿ. ಭಗವಂತನ ರಾಜ್ಯ ಯಾವುದೋ ನಿಶ್ಚಿತ ಸ್ಥಳ ಅಥವಾ ಕಾಲದಲ್ಲಿಲ್ಲ. ಅದು ಮಿಂಚಿನಂತೆ. ಅದು ಇಲ್ಲಿ, ಅಲ್ಲಿ ಮತ್ತು ಎಲ್ಲೆಲ್ಲೂ ಇರುತ್ತದೆ. ಭಗವಂತನ ರಾಜ್ಯ ಮನುಷ್ಯನೊಳಗಿದೆ."

"ಭಗವಂತ" ಕೇವಲ ಮಾಂಸದಿಂದ ಮಾತ್ರ ಮನುಷ್ಯನನ್ನು ಹುಟ್ಟಿಸಿಲ್ಲ. ಚೈತನ್ಯದಿಂದಲೂ ಸೃಷ್ಟಿಸಿದ್ದಾನೆ. ಪ್ರತಿ ಮನುಷ್ಯನೂ ಮಾಂಸ ಮತ್ತು ಚೈತನ್ಯದಿಂದ ಹುಟ್ಟಿರುತ್ತಾನೆ. ಮಾಂಸದಲ್ಲಿನ ಅವನೂ ಮಾಂಸ. ಮಾಂಸದಿಂದ ಚೈತನ್ಯ ಹುಟ್ಟಲಾರದು. ಚೈತನ್ಯ ಚೈತನ್ಯದಿಂದಲೇ ಬರತಕ್ಕದ್ದು. ಚೈತನ್ಯವು ಮನುಷ್ಯನಲ್ಲಿನ ಜೀವಂತ ಸತ್ಯತೆ, ಅದು ಅರಿವು ಮತ್ತು ಸ್ವಾತಂತ್ರ್ಯವನ್ನು ತಿಳಿದಿರುತ್ತದೆ. ಅದು

ಬಂದಿರುವುದು, ಯಾವುದರ ಪ್ರಾರಂಭ ಅಥವಾ ಅಂತ್ಯಗಳಲ್ಲಿ ಯಾವುದನ್ನೂ ನಾವು ಅರಿತಿಲ್ಲವೋ, ಅಲ್ಲಿಂದಲೇ."

ವೇದಗಳು ಸಾರುತ್ತವೆ:

**ನಾರಾಯಣ ಪರೋಜ್ಯೋತಿಃ ಆತ್ಮಾನಾರಾಯಣಃ ಪರಃ।**
**ಯಶ್ಚ ಕಿಂಚಿತ್ ಜಗತ್ಸರ್ವಂ ದೃಶ್ಯತೇ ಶ್ರೂಯತೇಪಿ ವಾ॥**
**ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ॥**

"ಈ ಪ್ರಪಂಚದಲ್ಲಿ ಏನೇನಿವೆಯೋ, ನಾವು ಏನೇನನ್ನು ಕಾಣುತ್ತೇವೆಯೋ ಕೇಳುತ್ತೇವೆಯೋ, ಒಳಗೆ ಏನಿದೆಯೋ, ಅವೆಲ್ಲವುಗಳಲ್ಲಿಯೂ, ಸರ್ವಾಂತರ್ಯಾಮಿ ನಾರಾಯಣನಿದ್ದಾನೆ." ಈ ನಾರಾಯಣನೇ ಪರಮ ಪ್ರಧಾನ ಜ್ಯೋತಿ ಮತ್ತು ಮನುಷ್ಯನಲ್ಲಿರುವ ಚೇತನ.

ಈ ನಾರಾಯಣ, ಈ ಪರಮ ಪ್ರಧಾನ ಜ್ಯೋತಿ, ಬ್ರಹ್ಮನ್‌ನನ್ನೇ ನಾವೆಲ್ಲರೂ ಎಲ್ಲರಲ್ಲಿಯೂ ಕಾಣಬೇಕು. ಅವರು ಸಾಹುಕಾರರೋ ಬಡವರೋ, ಯುವಕರೋ ವೃದ್ಧರೋ, ಗಂಡಸರೋ ಹೆಂಗಸರೋ, ಯಾವ ಶ್ರದ್ಧೆಯವರಾಗಿದ್ದರೂ ಸರಿ, ಲವಲವಿಕೆಯವರೋ ಅಥವಾ ಉತ್ಸಾಹಶೂನ್ಯರೋ ಏನೇ ಆಗಿದ್ದರೂ ಎಲ್ಲರಲ್ಲಿಯೂ ಒಬ್ಬ(ಭಗವಂತ)ನನ್ನೇ ಕಾಣಬೇಕು ಮತ್ತು ಎಲ್ಲರನ್ನೂ ಒಬ್ಬನಲ್ಲಿಯೇ ಕಾಣಬೇಕು: ಅನುಬ್ರಹ್ಮ ಪರ್ಯಂತ ಜೀವೈಕ್ಯ ಬಿಂಬಮ್".

ಎಲ್ಲರಲ್ಲಿಯೂ ಇರುವ ಜೀವಾತ್ಮ, ಭಗವಂತನೇ ಸೃಷ್ಟಿಸಿರುವ ಬ್ರಹ್ಮ. ಅವನ ಚೈತನ್ಯಪೂರ್ಣ ಸೃಷ್ಟಿಗಳಲ್ಲಿ, ಎಂದರೆ ಪ್ರಪಂಚದ ಸೃಷ್ಟಿಯ ವಿಧಾನದಲ್ಲಿ, ಭಗವಂತನು ಕಲ್ಪಿಸಿಕೊಂಡದ್ದು ಕೊನೆಯಲ್ಲಿ ಮನುಷ್ಯನನ್ನೇ ಜೀವನದ ಸತ್ಯವನ್ನು ಅರಿತುಕೊಳ್ಳುವ ವಿಧಾನವನ್ನು ಹುಟ್ಟಿಹಾಕಲು, ಮನುಷ್ಯನೇ ನಿಜವಾಗಿಯೂ ಯೋಗ್ಯ ಜೀವಿ ಎಂದು ಕಂಡುಕೊಂಡನು. ಅವನು ಮನುಷ್ಯನಲ್ಲಿ ತಾನು ಭಗವಂತನ ಒಂದಂಶ ಎಂಬುದನ್ನು ಅರಿತುಕೊಳ್ಳುವುದೇ ಅವನ ಜೀವನದ ಉದ್ದೇಶ ಎಂಬುದನ್ನು ಅರಿತುಕೊಳ್ಳುವಂತೆ ಮಾಡಿದನು.

ನಾವು ದೇವಸ್ಥಾನಗಳಿಗೆಲ್ಲಾ ಹೋಗಿ, ಆ ಕಲ್ಲಿನ ವಿಗ್ರಹಗಳ ಮುಂದೆ ಮೌನವಾಗಿ ನಿಂತು ಪ್ರಾರ್ಥಿಸಿ ನಮಸ್ಕರಿಸುವುದೇ, ನಾವು ಆ ಕಲ್ಲಿನ ವಿಗ್ರಹವೇ ದೇವರು ಎಂಬುದನ್ನು ಮೌನವಾಗಿ ಬಹಿರಂಗಪಡಿಸುತ್ತಾ, ಒಪ್ಪಿಕೊಳ್ಳುವ ವಿಧಾನ.

ಭಗವಂತ, ಹಿರಣ್ಯಕಶಿಪು ತನ್ನ ಮಗ ಪ್ರಹ್ಲಾದನನ್ನು ಭಗವಂತನ ಸರ್ವವ್ಯಾಪಿತ್ವವನ್ನು ತೋರಿಸೆಂದು ಹಠ ಹಿಡಿದಾಗ, ಭಗವಂತ ಮರದ ಕಂಬದಿಂದ ಆಚೆಗೆ ಬರಲಿಲ್ಲವೇ?



ಮಾರ್ಕಂಡೇಯ ಶಿವಲಿಂಗವನ್ನಪ್ಪಿದಾಗ ಭಗವಂತ ಆ ಕಲ್ಲಿನಿಂದಲೇ ಆಚೆಗೆ ಬಂದನಲ್ಲವೇ?

ಭಗವಂತನ ಸರ್ವವ್ಯಾಪಿತನಕ್ಕೆ ನಮಗೆ ಬೇರೆ ಯಾವ ಸಾಕ್ಷಿಗಳು ಬೇಕು?

ನಾವು ಭಗವಂತನ ಕಾನೂನಾದ, ಮಾನವೀಯತೆ ಮತ್ತು ಪ್ರಯತ್ನಗಳ ಸಮತೆಯನ್ನು ಒಪ್ಪಿ, ಅವನನ್ನು ನಮ್ಮಲ್ಲಿ ಮತ್ತು ಇತರ ಎಲ್ಲರಲ್ಲಿಯೂ ಕಾಣಲು ಸಿದ್ಧರಾಗದಿದ್ದರೆ, ಎಂದರೆ ಮನುಷ್ಯನ ಅಸ್ಮಿತೆ, ಪಂಥಾಭಿಮಾನ ಮತ್ತು ವೈಯಕ್ತಿಕ ಗುರಿಗಳು ಹಾಗೂ ಲಾಭಗಳ ಹಿಂದೆ ಬೀಳುವುದು ಮುಂತಾದವುಗಳಿಗೆ ವಿರುದ್ಧವಾಗಿ ಹೋಗದಿದ್ದರೆ, ನಾವು ನಮ್ಮ ದೇಹ ಹಾಗೂ ಮನಸ್ಸಿನ ಕೀಳರಿಮೆಯ ಪ್ರಜ್ಞೆಯಿಂದ ಮೇಲೆ ಏಳಲಾರೆವು ಮತ್ತು ಶಾಶ್ವತಧರ್ಮವನ್ನು ಅರಿಯಲಾರೆವು. ಎಂದರೆ, ನಮ್ಮ ಮನಸ್ಸಿನ ಚಿಂತನೆಗಳಿಗೆ ಅನುಗುಣವಾಗಿ, ನಾವು ಕೇವಲ ಲೌಕಿಕ ಸುಖಗಳ ಹಿಂದೆಯೇ ಹೋಗುತ್ತಿದ್ದಾರೆ, ನಾವೆಂದೂ ಸತ್ಯದ ಅರಿವಿನತ್ತ ಮುನ್ನಡೆಯಲಾರೆವು.

"ಭಗವಂತಾ, ಭಗವಂತಾ" ಎಂದು ಕೂಗಿದವರೆಲ್ಲರೂ ಭಗವಂತನ ರಾಜ್ಯವನ್ನು ತಲುಪುವುದಿಲ್ಲ. ಬದಲಿಗೆ ಸ್ವರ್ಗಾಧಿಪ ಭಗವಂತನ ಇಚ್ಛೆಯನ್ನು ಯಾರು ಪೂರೈಸುತ್ತಾರೆಯೋ ಅವರೇ ಸ್ವರ್ಗವನ್ನು ತಲುಪುವರು.

**೫. ನಿಷ್ಕಾಮ ಕರ್ಮ:**

ಕೆಲಸದಲ್ಲಿಯೇ, ಮನುಷ್ಯನ ಮುಕ್ತಿ ಇರುವುದು. ನಿಷ್ಕಾಮ ಕರ್ಮವನ್ನು ನಿರ್ವಹಿಸಿ ಎಂದರೆ, ಕೆಲಸದ ಫಲವನ್ನು ಆಶಿಸದೆ, ಕೇವಲ ಕರ್ಮಕ್ಕಾಗಿ ಕರ್ಮ ಮಾಡಿ ಅಥವಾ 'ಕರ್ತವ್ಯಕರ್ಮ' ಎಂಬಂತೆ, ಕರ್ತವ್ಯವನ್ನು ನಿರ್ವಹಿಸಿ, ಫಲವನ್ನು ಭಗವಂತನಿಗೇ ಅರ್ಪಿಸಿ. ಆ ಫಲವನ್ನು ಭಗವಂತ ತನಗಿಷ್ಟಬಂದಂತೆ ಹಂಚಲಿ. ಕರ್ಮದ ಇನ್ನೂ ಹೆಚ್ಚಿನ ಸ್ಥಿತಿ ಎಂದರೆ, ಭಗವಂತನಲ್ಲೇ ಇದ್ದುಬಿಡುವ ಸ್ಥಿತಿ. ಆಗ ಕರ್ಮ ಮಾಡಿದರೆ, ಭಗವಂತ ಕೃಷ್ಣ ಅರ್ಜುನನನ್ನು ಎತ್ತಿದ ಸ್ಥಿತಿಯನ್ನು ತಲುಪಬಹುದು.

**೬. ಸೇವೆ:**

ಎಲ್ಲರಿಗೂ ವಿಶೇಷ ಮನ್ನಣೆ ಕೊಟ್ಟು ಗೌರವಿಸಿ, ಸೇವೆ ಮಾಡಿ. "ನಿಮ್ಮನ್ನು ನೀವೆಷ್ಟು ಆದರದಿಂದ ನೋಡಿಕೊಳ್ಳುವಿರೋ, ಅದೇರೀತಿ ಎಲ್ಲರಿಗೂ ಮಾಡಿ." ಇದರಿಂದ ನಾವೆಂಥ ಸೇವೆ ಮಾಡಬೇಕು ಎಂಬುದರ ಬಗ್ಗೆಯ ಅರಿವುಂಟಾಗುತ್ತದೆ.

ವಿಶ್ವದಾದ್ಯಂತ ಕೇಳಿ ಬರುವ ಮಾತು, "ಸತ್ಯವನ್ನೇ ಹೇಳಿ. ಏಕೆಂದರೆ ಸತ್ಯವೇ ದೇವರು" ಎಂದೇ ಆಗಿದೆ.

**೭. ಶರಣಾಗತಿ:–**

ನಿಮ್ಮದೆಲ್ಲವನ್ನೂ ಭಗವಂತನಿಗೆ ಅರ್ಪಿಸಿ, "ಸ್ವಾಮಿಯೇ ಶರಣಂ ಅಯ್ಯಪ್ಪ" ಎನ್ನಿ.

ಒಂದು ಸಾಫಲ್ಯದ ಯಾತ್ರೆ ಮಾಡಬೇಕಾದರೆ, ಮೇಲೆ ತಿಳಿಸಿದ ಕಟ್ಟುನಿಟ್ಟಾದ ಆಡಂಬರರಹಿತ ವಿಧಾನವನ್ನು ಅನುಸರಿಸಬೇಕು. ಅವು ಕಷ್ಟದವು. ಮಾನವರಿಂದ ನಾವು, ಅಸ್ಮಿತೆಯ ಗುಲಾಮರಾಗಿ, ದೈಹಿಕ ಸುಖಗಳೆಂಬ, ಎಂದೂ ಮುಗಿಯದ ಸುಖಗಳ ಹಿಂದೆ ಕೊನೆಯೇ ಇಲ್ಲದ ಹುಡುಕಾಟದಲ್ಲಿಯೇ ಮುಳುಗಿರುವವರು. ಆದ್ದರಿಂದ ನಾವು ಏನನ್ನು ಸಾಧಿಸಬೇಕೋ, ಅದು ಕಷ್ಟದ್ದು ಮಾತ್ರವಲ್ಲದೆ, ಅಸಾಧ್ಯದ್ದೂ ಆಗಿದೆ.

ಆದ ಮಾತ್ರಕ್ಕೆ ಅದು ಕಷ್ಟದ್ದು ಅಸಾಧ್ಯದ್ದು ಎನ್ನಿಸದೇ ಇರುವುದು. ನಾವು ಯಾತ್ರೆಯನ್ನು ನಾವಾಗಿ ಆಸೆಪಟ್ಟು ಕೈಗೊಂಡು, ಭಗವಂತನನ್ನು ಅರಿತಾಗಲೇ. "ಕಳ್ಳನಿಗೆ ಬೀಗದ ಕೈಕೊಡಿ. ಆಸ್ತಿ ಸುರಕ್ಷಿತವಾಗಿರುತ್ತದೆ." ಕಟ್ಟುನಿಟ್ಟಿನ ಕ್ರಮಗಳನ್ನು ನಿರ್ವಹಿಸಲು ಬೇಕಾದ ಮನಃಶಕ್ತಿ ಪಡೆಯಲು ನಾವು ಭಗವಂತನನ್ನೇ ಆಶ್ರಯಿಸಿ ಶರಣಾಗಬೇಕು. ಆಗ ಆ ಕೆಲಸ ಸುಲಭದ್ದಾಗುವುದು ಅವನ ಕೃಪೆಯಿಂದಲೇ. ಭಗವಂತ ಪ್ರೀತಿ ಮತ್ತು ದಯೆಯ ಮೂರ್ತರೂಪನೇ ಆಗಿರುವಾಗ, ಅವನು ತನ್ನ ಮಕ್ಕಳ ಕರೆಗೆ ಓಗೊಡುವುದಿಲ್ಲವೇ? ಹಾಗಿಲ್ಲದಿದ್ದರೆ ಯಾರಿಗೆ ಸ್ಪಂದಿಸುತ್ತಾನೆ? ಈ ಕಟ್ಟುನಿಟ್ಟಿನ ನಿಯಮಗಳು ಎಷ್ಟೇ ಹೊರೆ ಎನ್ನಿಸಿದರೂ ಮತ್ತು ಅಸಾಧ್ಯದ್ದೇ ಎನ್ನಿಸಿದರೂ, ಭಗವಂತ ಅವುಗಳನ್ನೆಲ್ಲಾ ಸುಲಭವೆನ್ನಿಸುವಂತೆ ಬದಲಾಯಿಸಿ, ನಿಲ್ಲಿಸುತ್ತಾನೆ. ಆಗ ನಾವು ನಮ್ಮ ಪ್ರೇಮವನ್ನು ಅವನಿಗೆ ತಕ್ಷಣವೇ ಯಾವ ರೀತಿಯಲ್ಲಿ ಅರ್ಪಿಸಿದರೂ, ಅವನ ಪ್ರೀತಿ ನಮ್ಮನ್ನು ಪ್ರಭಾವಿಸಿ, 'ಅಸಾಧ್ಯದ್ದು ತೊಂದರೆಯದು ಯಾವವೂ ಇಲ್ಲ' ಎನ್ನುವ ಭಾವನೆ ಉಂಟಾಗುತ್ತದೆ. ಆಗ ಎಲ್ಲವೂ ಸುಲಭದ್ದೇ!

"ಕೇಳಿ. ನಿಮಗೆ ಅದನ್ನು ನೀಡಲಾಗುತ್ತದೆ. ಬಾಗಿಲು ತಟ್ಟಿ. ಅದನ್ನು ತೆರೆಯಲಾಗುತ್ತದೆ" ಎಂಬ ಹೇಳಿಕೆ ಇದೆ.

ಆದ್ದರಿಂದ ಸೂಕ್ತವಾದ ರೀತಿಯಲ್ಲಿ, ಭಗವಂತನ ಆಶೀರ್ವಾದದ ಅರಮನೆಯ ಬಾಗಿಲು ತಟ್ಟಬೇಕು. ಪೂರ್ಣ ಶ್ರದ್ಧೆಯಿಂದ "ಭಗವಂತನ ಅಪಾರ ಕೃಪೆ ನಮ್ಮನ್ನು ಜಯದ ಕಡೆಗೇ ಕೊಂಡೊಯ್ಯುತ್ತದೆ" ಎಂದುಕೊಳ್ಳಬೇಕು.

**೮. ಪೂರ್ವಸಿದ್ಧತೆಗಳು:**

ಯಾತ್ರೆಗೆ ಬೇಕಾದ ಪೂರ್ವಸಿದ್ಧತೆಗಳು ಮತ್ತು ಯಾತ್ರೆಯೂ ಸಹ ಭಗವಂತನೊಂದಿಗೆ ಐಕ್ಯಗೊಳಿಸುವ ಆತ್ಮದ ಪ್ರಯಾಣವನ್ನು ಇನ್ನೂ ಚೆನ್ನಾಗಿ ನಿರೂಪಿಸುತ್ತವೆ.



ಸಿದ್ಧತೆಗಳಲ್ಲಿ ಅತ್ಯಂತ ಮುಖ್ಯವಾದದ್ದು ಎಂದರೆ, "ಇರುಮುಡಿ" ಎನ್ನುವ ಒಂದು ಸಿದ್ಧತೆ. ಒಂದು ಹತ್ತಿಯ ದಾರದ ಚೀಲದಲ್ಲಿ ಎರಡು ಭಾಗಗಳಿರುತ್ತವೆ. ಒಂದು ಮುಂದಿರುತ್ತದೆ, ಮತ್ತೊಂದು ಹಿಂದಿರುತ್ತದೆ. ಅದನ್ನು ಯಾತ್ರೆಯ ಪರ್ಯಂತ ತಲೆ ಮೇಲೆ ಹೊತ್ತು ನಡೆಯಬೇಕು, ಏಸುಕ್ರಿಸ್ತನು ತನ್ನ ಕ್ರಾಸನ್ನು, ತನ್ನ ಶಿಲುಬೆಗೇರುವಾಗ ಹೊತ್ತಿದ್ದಂತೆ. ಮುಂದಿನ ಭಾಗ ಖಾಲಿಯಾದಾಗಲೇ ಯಾತ್ರೆ ಮುಗಿಯುವುದು. ಶಿಲುಬೆಯ ಜಗಳದಲ್ಲಿ, ಆತ್ಮ ಜಯ ಗಳಿಸಿದಂತೆ, ಇರುಮುಡಿಯೂ, ಪ್ರಾಪಂಚಿಕತೆಯ ಮೇಲಿನ ಆತ್ಮದ ಗೆಲುವನ್ನು ಸಾಧಿಸಿ ತೋರಿಸುತ್ತದೆ.

ಇರುಮುಡಿಯ ಮುಂದಿನ ಭಾಗದಲ್ಲಿ, ತೆಂಗಿನಕಾಯಿ ಇದ್ದು, ಅದರಲ್ಲಿ ಶುದ್ಧವಾದ ಹಸುವಿನ ತುಪ್ಪವನ್ನು, ಕಾಯಿಯ ತಳದಲ್ಲಿನ ಮೂರನೆಯ ತೂತಿನ ಮೂಲಕ ತುಂಬಿಸಲಾಗುತ್ತದೆ ಮತ್ತು ಅಂಟಿಸಲಾಗುತ್ತದೆ. ಅದರಲ್ಲಿ ದೇವರಿಗೆ ಹಾಕಬೇಕಾದ ಕಾಣಿಕೆಯೂ ಇರುತ್ತದೆ. ಹಿಂದಿನ ಭಾಗದಲ್ಲಿನ ಇರುಮುಡಿಯಲ್ಲಿ ವೈಯಕ್ತಿಕವಾಗಿ ಬೇಕಾಗುವ ಬಟ್ಟೆ ಬರೆಗಳು, ತಿಂಡಿ, ಮತ್ತು ಇತರ ವಸ್ತುಗಳಿರುತ್ತವೆ. ಈ ಎರಡೂ ಭಾಗಗಳನ್ನು ಬೇರೆ ಬೇರೆ ಕಟ್ಟಿ, ನಂತರ ಒಂದೇ ಗಂಟಿನ ಕೆಳಗೆ ನೇತಾಡುವ ಎರಡು ಬೇರೆ ಬೇರೆ ಹೊರೆಗಳನ್ನಾಗಿ ಮಾಡಿಕೊಳ್ಳುತ್ತಾರೆ.

**೯. ತುಪ್ಪ ತುಂಬಿಸಿದ ತೆಂಗಿನಕಾಯಿ:**

ಪುರಾಣಗಳಲ್ಲಿ ಹೇಳಿರುವ ವಿಷಯವೊಂದರಲ್ಲಿ, ಭಗವಂತ ಕಾಡಿಗೆ ಕರಡಿಯ ಹಾಲನ್ನು ಹುಡುಕಿಕೊಂಡು ಹೊರಟಾಗ, ರಿಂಜ ಭಗವಂತನಿಗೆ ಒಂದು ತೆಂಗಿನಕಾಯಿಯನ್ನು ತೆಗೆದುಕೊಂಡು ಹೋಗಲು ಹೇಳಿ, "ತೆಂಗಿನಕಾಯಿ ಭಗವಂತ ಶಿವನಂತೆ ಮೂರು ಕಣ್ಣುಗಳನ್ನು ಹೊಂದಿದ್ದು, ರಸ್ತೆಯಲ್ಲಿ ಉಂಟಾಗಬಹುದಾದ ಅಪಾಯಗಳಿಂದ ರಕ್ಷಿಸುತ್ತದೆ" ಎಂದನಂತೆ. ಭಗವಂತ ಒಪ್ಪಿ ಹಾಗೇ ಮಾಡಿದನಂತೆ. ಈಗ ಯಾತ್ರಿಕರಲ್ಲಿ ಕೂಡ ಇದೊಂದು ರೂಢಿಯೇ ಆಗಿದೆ. ತುಪ್ಪ ತುಂಬಿದ ತೆಂಗಿನಕಾಯಿ ಈಶ್ವರನನ್ನೇ ಪ್ರತಿನಿಧಿಸುತ್ತದೆ ಎನ್ನಲಾಗಿದೆ.

ಈ ಎರಡೂ ಹೇಳಿಕೆಗಳನ್ನು ಗೌರವಿಸುತ್ತಾ ಮತ್ತು ಅದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲದಂತೆ ಅಥವಾ ಅದನ್ನು ನಂಬಿದವರ ಭಾವನೆಗಳನ್ನು ನೋಯಿಸದೆ, ಹೇಳಬೇಕೆಂದರೆ ಅದೇನು ನ್ಯಾಯವೆನಿಸುವುದಿಲ್ಲ. ಕಡೆಗೆ ಅದೂ, ಭಗವಂತನೊಂದಿಗೆ ಒಂದಾಗಲು ಹೊರಟಿರುವ ಆತ್ಮದ ಪ್ರಯಾಣದ ಭಾಷೆಯಲ್ಲಿ ಅಭ್ಯಾಸದ ಪ್ರಾಮುಖ್ಯತೆಯನ್ನೂ ತಿಳಿಸುವುದಿಲ್ಲ. ದೊರೆ, ಭಗವಂತನಿಗೆ ತೆಂಗಿನಕಾಯಿಯಲ್ಲಿ ತುಪ್ಪ ತುಂಬಿಸಿಕೊಳ್ಳಲು ಹೇಳಲಿಲ್ಲ. ಕಡೆಗೆ ಎರಡನೆಯ ಸೂಚನೆಯನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಏಕೆಂದರೆ ಪರಮಾತ್ಮನೇ ಆಗಿರುವ ತೆಂಗಿನಕಾಯನ್ನು ನಾವು ಒಡೆಯಬೇಕು ಎನ್ನುವುದೂ ನಮ್ಮ ಗ್ರಹಿಕೆಗೆ ಮೀರಿದ್ದು.

ಅದಕ್ಕೆ ಬದಲಾಗಿ ನಾವು ಅದನ್ನು ಗೌರವಿಸಬೇಕು, ಹಾಳು ಮಾಡಬಾರದು.

ಆತ್ಮದ ಪ್ರತೀಕದ ಪ್ರಯಾಣದಲ್ಲಿ, ತೆಂಗಿನಕಾಯಿಯ ಮೆದುವಾದ ಕಣ್ಣು, ಮನುಷ್ಯನ ಆಧ್ಯಾತ್ಮಿಕ ಕಣ್ಣನ್ನು ಪ್ರತಿನಿಧಿಸುತ್ತದೆ. ತುಪ್ಪ ಅವನ ಆತ್ಮವನ್ನು ಪ್ರತಿನಿಧಿಸಿದರೆ, ತೆಂಗಿನಕಾಯಿ ಅವನ ದೇಹವನ್ನು ಪ್ರತಿನಿಧಿಸುತ್ತದೆ.

ತುಪ್ಪ ತುಂಬಿದ ತೆಂಗಿನಕಾಯಿ, ಇತರ ಕೊಡುಗೆಗಳೊಂದಿಗೆ ಇರುವುದೇ ಮುಂದಿನ ಭಾಗದಲ್ಲಿರುವುದು. ತೆಂಗಿನಕಾಯಿಯನ್ನು ತುಂಬಿಸಿದಾಗ ಅದನ್ನು ಇತರ ಅರ್ಪಣೆಗಾಗಿರುವುದರೊಂದಿಗೆ ಮುಂದಿನ ಭಾಗದಲ್ಲೇ ಕಟ್ಟಿಡಲಾಗುತ್ತದೆ. ಹಿಂದಿನ ಭಾಗದಲ್ಲಿ ವೈಯಕ್ತಿಕ ವಸ್ತುಗಳಿರುತ್ತವೆ. ನಂತರ ಅದನ್ನು ಹೊರೆಯಾಗಿ ಕಟ್ಟುತ್ತಾರೆ. ಅದನ್ನು ನಾವು ಮೊದಲೇ ತಿಳಿಸಿದ್ದೇವೆ.

ಮುಂದೆ ಇರುವ ಭಾಗ ಮನುಷ್ಯನನ್ನು ಪ್ರತಿನಿಧಿಸಿದರೆ, ಹಿಂದಿನ ಭಾಗ ಏನಾಗಿರುತ್ತದೆ?

ಹಿಂದಿನ ಭಾಗದಲ್ಲಿ ಮನುಷ್ಯನ ಪ್ರಾರಬ್ಧ ಕರ್ಮ ಮತ್ತು ಅವನ ಆಸೆಗಳು ಇರುತ್ತವೆ. ಇವೆಲ್ಲವೂ, ಅವನು ತಾನಾಗಿ ತನ್ನ ಮೇಲೆ ತಂದುಕೊಂಡ ಜೋಡಣೆಗಳು. ಅವನು ಅವುಗಳು ನಾಶವಾಗುವವರೆಗೂ ಅವನ್ನು ತಾನಾಗಿ ಹೊರಲೇಬೇಕು. ಅದರ ವಿನಾಃ ಬೇರೆ ಮಾರ್ಗವೇ ಇಲ್ಲ.

ಐದು ಇಂದ್ರಿಯಗಳು, ಎಂಟು ರಾಗಗಳು, ಮೂರು ಗುಣಗಳು, ವಿದ್ಯೆ ಮತ್ತು ಅವಿದ್ಯೆ ಎಲ್ಲವೂ ಎಲ್ಲಾ ಗಂಡಸರಲ್ಲಿಯೂ ಇರುತ್ತವೆ. ಆದರೆ ಪ್ರಾರಬ್ಧ ಕರ್ಮದ ಪ್ರಕೃತಿ ಮತ್ತು ಆಸೆಗಳು ಪ್ರತಿಯೊಬ್ಬ ವ್ಯಕ್ತಿಯಿಂದ ವ್ಯಕ್ತಿಗೂ, ಅವರವರು ಜೀವಿಸಿದ ರೀತಿಗಳಂತೆ ವ್ಯತ್ಯಾಸವಾಗಿ ಇರುತ್ತವೆ. ಇದು ಇರುಮುಡಿಯಲ್ಲಿನ ವಸ್ತುಗಳ ಮೂಲಕ ಸ್ಪಷ್ಟವಾಗಿ ಅರಿವಾಗುತ್ತದೆ. ಮುಂದಿನ ಭಾಗ ಎಲ್ಲರಲ್ಲಿಯೂ ಒಂದೇ ಆಗಿದ್ದರೂ, ಯಾವ ವ್ಯತ್ಯಾಸವನ್ನೂ ಹೊಂದಿಲ್ಲದಿದ್ದರೂ, ಎಂದರೆ ತುಪ್ಪ ತುಂಬಿದ ತೆಂಗಿನಕಾಯಿ ಮತ್ತು ಕಾಣಿಕೆಗಳು ಒಂದೇ ಆಗಿದ್ದರೂ, ಹಿಂದಿನ ಭಾಗದ ಸಾಮಾನುಗಳು ಪ್ರತಿಯೊಬ್ಬರದೂ ಬೇರೆ ಬೇರೆ ಆಗಿರುತ್ತದೆ.

### ಆ. ಪವಿತ್ರವಾದ ಕಷ್ಟಕರ ಪ್ರಯಾಣ:

ನಾವೀಗ ಮನೆಯಿಂದ ಹೊರಟ ಯಾತ್ರಿಕನು, ಬೆಟ್ಟ ತಲುಪುವ ಘಟ್ಟಕ್ಕೆ ಬರುತ್ತಿದ್ದೇವೆ.

ಯಾತ್ರಿಕ, ಪರ್ವತಗಳು ಮತ್ತು ಕಾಡುಪ್ರಾಣಿಗಳಿಂದ ತುಂಬಿದ್ದ ಕಾಡನ್ನು ದಾಟಿ, ಮತ್ತೊಂದು ಕಷ್ಟದ ಸ್ಥಳಕ್ಕೆ ಬಂದು, ನಡಿಗೆಯ ಮೂಲಕ ಉಂಟಾದ ದೈಹಿಕ ಕಷ್ಟದಿಂದ ನರಳುತ್ತಾನೆ. ರಸ್ತೆಯಲ್ಲಿ ಅವನು ಇರುಮುಡಿಯ ಹಿಂದಿನ ಭಾಗದಲ್ಲಿ ಹೊತ್ತು ತಂದಿದ್ದವನ್ನೆಲ್ಲಾ ತಿಂದು ಮುಗಿಸುತ್ತಾನೆ. ಏಕೆಂದರೆ, ಅವನು



ದೇವಸ್ಥಾನ ತಲುಪುವ ವೇಳೆಗೆ, ಕೇವಲ ಮುಂದಿನ ಭಾಗದ ಸಾಮಾನುಗಳಷ್ಟೇ ಉಳಿದಿರಬೇಕು. ಸಾಂಕೇತಿಕವಾಗಿ, ಪ್ರಾರಬ್ಧ ಕರ್ಮ ಮತ್ತು ಆಸೆಗಳು ಅಳಿಸಿ ಹೋಗಿರುತ್ತವೆ ಅಥವಾ ರಸ್ತೆಯಲ್ಲೇ ಅರಗಿರುತ್ತವೆ. ಉಳಿದಿರುವುದು ಕೇವಲ ದೇಹ. ಎಂದರೆ ತೆಂಗಿನಕಾಯಿ; ತುಪ್ಪ ಎಂದರೆ ಆತ್ಮ. ಯಾತ್ರಿಕನು ಚಿನ್ನಾತ್ಮಕ ಹದಿನೆಂಟು ಮೆಟ್ಟಿಲುಗಳನ್ನು ಹತ್ತುತ್ತಾನೆ (ಎಂದರೆ, ತನ್ನಲ್ಲಿನ ಹದಿನೆಂಟು ಮೂಲವಸ್ತುಗಳನ್ನು ಮೀರಿರುತ್ತಾನೆ). ಭಗವಂತನ ಎದುರಿನಲ್ಲಿ ನಿಲ್ಲುತ್ತಾನೆ. ಆ ಪರಮಾತ್ಮನ ಅಂಗವೇ ಅವನೂ ಆಗಿರುವುದರಿಂದ ಅವನು ದೇಹವನ್ನು ತ್ಯಜಿಸುತ್ತಾನೆ (ತೆಂಗಿನಕಾಯಿಯನ್ನು ತೆರೆಯುತ್ತಾನೆ) ಮತ್ತು ಭಗವಂತನಲ್ಲಿ ಐಕ್ಯವಾಗುತ್ತಾನೆ (ತುಪ್ಪವನ್ನು ಭಗವಂತನ ವಿಗ್ರದ ಮೇಲೆ ಸುರಿಯುತ್ತಾನೆ). ದೇಹ ಸಾಯುತ್ತದೆ ಮತ್ತು ಸುಟ್ಟು ಹೋಗುತ್ತದೆ (ತೆಂಗಿನ ಕಾಯಿಯ ಎರಡು ಭಾಗಗಳನ್ನೂ ಬೆಂಕಿಗೆ ಎಸೆಯುತ್ತಾನೆ).

**ಕಾಡು ಮತ್ತು ಅದರ ಪ್ರಾಮುಖ್ಯ:**

ಪಶ್ಚಿಮ ಘಟ್ಟಗಳ ಉನ್ನತ ಶಿಖರ ಶ್ರೇಣಿಗಳೊಂದರಲ್ಲಿ ದೇವಸ್ಥಾನವಿದೆ. ನೀಲಗಿರಿ ಬೆಟ್ಟಗಳಲ್ಲಿನ ಶ್ರೇಣಿಯಲ್ಲಿರುವ ಈ ಬೆಟ್ಟಕ್ಕೆ ಶಬರಿಮಲೈ ಎಂದು ಹೆಸರಿದ್ದು, ಅದು ಅತ್ಯಂತ ಹೆಸರುವಾಸಿಯಾಗಿದೆ. ಅದರ ನಾಲ್ಕೂ ಕಡೆಗಳಲ್ಲಿ ಉತ್ತರ ಘಟ್ಟಗಳ ಮತ್ತು ದಟ್ಟವಾದ ಅರಣ್ಯಗಳಿವೆ. ಪರಮಾತ್ಮ, ಅಂಥ ಸ್ಥಳವನ್ನು ಏಕೆ ಆಯ್ಕೆ ಮಾಡಿಕೊಂಡ? ಅಲ್ಲಿಗೆ ತಲುಪುವುದೇ ಕಷ್ಟದ ಕೆಲಸ. ಜೊತೆಗೆ ಕಾಡು ಮೃಗಗಳಿಗೆ ಬಲಿಯಾಗುವ ಸಾಧ್ಯತೆಗಳೂ ಇವೆ. ಭಗವಂತ ಯಾವುದಾದರೂ ಸಮನಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಇದ್ದಿದ್ದರೆ, ಬೇಕೆಂದಾಗ ಎಲ್ಲರೂ ಸುಖವಾಗಿ ಹೋಗಿ ಬರಬಹುದಾಗಿತ್ತಲ್ಲವೇ? ವಿಶ್ವವೇ ಪರಮಾತ್ಮನದು. ಅವನು ಅದರಲ್ಲಿ ಯಾವ ಸ್ಥಳವನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದಾಗಿತ್ತು. ಆದರೆ ಅವನು ಘೋರ ಅರಣ್ಯವನ್ನು ಆಯ್ಕೆ ಮಾಡಿಕೊಂಡು ಅಲ್ಲಿಗೇ ತನ್ನ ಭಕ್ತರನ್ನು ಕರೆಸಿಕೊಳ್ಳುತ್ತಾನೆ. ತನ್ನ ಮಕ್ಕಳನ್ನು ಈ ರೀತಿ ಕಷ್ಟಗಳನ್ನು ಅನುಭವಿಸುವಂತೆ ಮಾಡಿ, ಅದರಲ್ಲಿಯೂ ಸಾವಿನ ಭಯವನ್ನು ಹುಟ್ಟಿಸಿ ಕರೆಸಿಕೊಳ್ಳುವುದರಿಂದ ಭಗವಂತನಿಗೇನು ಆನಂದ ದೊರಕುತ್ತದೆ?

ಭಗವಂತನಿಗೆ ತನ್ನ ಮಕ್ಕಳ ನರಳಿಕೆ ನೋಡುವುದು ಸಂತೋಷದ ವಿಷಯವೇನಲ್ಲ. ಎಲ್ಲರ ತಂದೆಯಾಗಿ, ಅವನು, ತನ್ನ ಮಕ್ಕಳಿಗೆ ಸದಾ ಸುಖವನ್ನೇ ನೀಡುತ್ತಾನೆ. ಮಾನವನ ದೇಹ ಯಾತ್ರೆಯಲ್ಲಿನ ತೊಂದರೆಗಳನ್ನು ಅನುಭವಿಸಿ, ಕಾಡುಮೃಗಗಳ ಮತ್ತು ಇತರ ತೊಂದರೆಗಳ ಕಷ್ಟಗಳನ್ನು ಭಗವಂತನ ಕೃಪೆಯಲ್ಲಿನ ನಂಬಿಕೆಯಿಂದಲೇ ಎದುರಿಸುವಂತೆ, ಆತ್ಮವೂ ತನ್ನ ಮೇಲಿನ ಪ್ರಯಾಣದಲ್ಲಿ ಒದಗಿ

ಬರುವ ತೊಂದರೆಗಳನ್ನೆಲ್ಲಾ ಭಗವತ್ಕೃಪೆಯಲ್ಲಿನ ಮೇಲಿನ ಶ್ರದ್ಧೆಯಿಂದ ಮತ್ತು ಅವನಿಗೆ ಪೂರ್ಣವಾಗಿ ಶರಣಾಗುವ ಮೂಲಕವೇ, ಪರಮಾತ್ಮನನ್ನು ಅರಿಯಲು ಸಾಧ್ಯ. ಮಾರ್ಗದಲ್ಲಿನ ಏರಿಳಿತಗಳು, ಆತ್ಮದ ಪ್ರಯಾಣದ ವಿಧಾನದ ಸಾಧನೆಗಳು ಮತ್ತು ಕೊರಗುಗಳ ಒಂದು ಸುಂದರವಾದ ನಿರೂಪಣೆ, ಅಥವಾ ಪ್ರಾತಿನಿಧ್ಯ. ನಡೆದುಬಂದ ಮಾರ್ಗವೂ ತನ್ನದೇ ಆದ ಪ್ರಾಮುಖ್ಯತೆ ಹೊಂದಿರುತ್ತದೆ. ಪಥಿಕನು ರಸ್ತೆ ತಪ್ಪಿದರೆ, ಪ್ರಪಾತಕ್ಕೆ ಬೀಳುತ್ತಾನೆ. ಎಂದಿಗೂ ಹಿಂದಿರುಗುವುದಿಲ್ಲ. ಅಥವಾ ಕಾಡು ಪ್ರಾಣಿಗಳಿಗೆ ವಶನಾಗಿ, ಅವುಗಳಿಂದ ದಮಿಸಲ್ಪಡುತ್ತಾನೆ. ಸರಿಯಾದ ಹಾದಿ ತಪ್ಪಿದವನು, ಆತ್ಮನಾಶಕ್ಕೆ ಒಳಗಾಗುವಂತೆ. ಏಕೆಂದರೆ ಅರಿವಿನ ಹಾದಿ, ಹರಿತವಾದ ಅಲಗಿನ ಕತ್ತಿಯಷ್ಟೇ, ಇಕ್ಕಟ್ಟಿನದು.

**ದೇವಸ್ಥಾನ ಮತ್ತು ಅದರ ಹದಿನೆಂಟು ಮೆಟ್ಟಿಲುಗಳು:**

ನಮ್ಮ ಅರಿವಿಗೆ ದೇವಸ್ಥಾನದ ಮೆಟ್ಟಿಲುಗಳಿಗೆ ಅಷ್ಟು ಪ್ರಾಮುಖ್ಯತೆ ಮತ್ತು ಪ್ರಭಾವವಿದೆ ಎಂಬುದು ಅಯ್ಯಪ್ಪ ಸ್ವಾಮಿಯ ದೇವಸ್ಥಾನದ ಮೆಟ್ಟಿಲುಗಳ ಅರಿವಾದ ನಂತರವೇ ತಿಳಿದದ್ದು. ಅಲ್ಲಿ ಹದಿನೆಂಟು ಮೆಟ್ಟಿಲುಗಳಿವೆ. ಅವು ಐದು ಇಂದ್ರಿಯಗಳು, ಎಂಟು ರಾಗಗಳು, ಮೂರು ಗುಣಗಳು, ವಿದ್ಯೆ ಮತ್ತು ಅವಿದ್ಯೆಯನ್ನು ಸೂಚಿಸುತ್ತದೆ. ನಾವು ಹದಿನೆಂಟು ಮೆಟ್ಟಿಲುಗಳನ್ನು ಹತ್ತಿದಾಗ, ಅವು ಹದಿನೆಂಟು ಧಾತುಗಳನ್ನು ಸೂಚಿಸುತ್ತವೆ. ಆತ್ಮವು ದೇಹದೊಳಗೇ ಇವನ್ನು ಅತಿಶಯಿಸಿರುತ್ತದೆ. ಇದುವರೆಗೂ ಮಾಯೆಯ ಪರದೆಗಳಿಂದ ಮುಚ್ಚಲ್ಪಟ್ಟಿದ್ದ ಅದರ ತೇಜಸ್ಸನ್ನು ತೋರಿಸಲೆಂದು ಹಾಗೆ ಮಾಡುತ್ತದೆ, ಆತ್ಮ. ಹಾಗೆ ಈ ಹದಿನೆಂಟು ಧಾತುಗಳನ್ನು ಮೀರಿದ ನಂತರ, ಅದು ತಾನಾಗಿ ಪ್ರಕಾಶಮಾನವಾಗಿ, ತನ್ನಲ್ಲಿಯೇ ಭಗವಂತನ ಶಾಶ್ವತ ಪರಮಾನಂದದ ಸ್ಥಿತಿ ಪಡೆಯುತ್ತದೆ, ಭಗವಂತನ ಇರವಿನ ಆನಂದವನ್ನು ತನ್ನೊಳಗೆ ಅನುಭವಿಸುತ್ತದೆ ಮತ್ತು ಪರಮಾತ್ಮನ ಸಾಂಗತ್ಯಕ್ಕೇ ಬಂದು, ಅವನಲ್ಲಿ ಐಕ್ಯವಾಗುತ್ತದೆ.

ಭಗವಂತ ತನ್ನ ಯೋಗಾಸನದಲ್ಲಿ ಕುಳಿತಿರುತ್ತಾನೆ, 'ನೀನೇ ಅದು' ಎಂಬ ಮುದ್ರೆಯನ್ನು ಸೂಚಿಸುತ್ತಾ. ಅವನು ಮೌನವಾಗಿಯೇ ಕುಳಿತಿದ್ದರೂ, ತನ್ನ ಭಕ್ತರೊಂದಿಗೆ ಮಾತನಾಡುತ್ತಿರುತ್ತಾನೆ– "ಗುರೋಽಸ್ತು ಮೌನಂ ವ್ಯಾಖ್ಯಾನಂ." ಮೌನದಲ್ಲಿಯೇ ಅವನು, ಭಕ್ತರೊಂದಿಗೆ ನಿರರ್ಗಳವಾಗಿ ಮಾತನಾಡುತ್ತಿರುತ್ತಾನೆ. ಅವನ ಬಳಿಗೆ ಹೋದವರನ್ನೆಲ್ಲಾ ಮೌನವಾಗಿಯೇ ಆಶೀರ್ವದಿಸುತ್ತಾನೆ.

ವಿಶ್ವಾತ್ಮನಾದ ಅವನು, ತನ್ನ ಭಕ್ತರಿಗೆ ಅವರವರ ಆಸೆಗಳಿಗೆ ಅನುಗುಣವಾಗಿ ವರಗಳನ್ನು ನೀಡಲು, ಕುಳಿತಿರುತ್ತಾನೆ. ಆದರೆ ಭಕ್ತರು, ತಾವು ಆಸೆ ಪಡುವುದಕ್ಕಿಂತ ಮುಂಚೆ, ಅವುಗಳಿಗೆ ತಕ್ಕವರಾಗಿರಬೇಕು. ತಕ್ಕವರಾಗಿರಲೂ ಸಹ ಅವರು ಕಷ್ಟ ಪಡಬೇಕು ಮತ್ತು ಭಗವಂತನ ಸೇವೆ ಮಾಡಬೇಕು. ಭಗವಂತನಿಗೆ ಸೇವೆ ಮಾಡುವುದೆಂದರೆ, ಅವನ ಇಚ್ಛೆಯಂತೆ ನಡೆದುಕೊಳ್ಳುವುದು. ಅವನು, ತನಗೆ ಶರಣಾದವರೆಲ್ಲರ ಚಿಂತಾಮಣಿ. ಅವನಲ್ಲಿ ಶರಣಾಗತಿ ಪಡೆಯುವವರೆಲ್ಲರ ಪಾಪಗಳನ್ನೂ ಅವನು ನಿವಾರಿಸುತ್ತಾನೆ. ಅವನೇ ಮನುಷ್ಯನೊಳಗಿನ ಪ್ರಖರವಾದ ಶಾಶ್ವತ ತೇಜಸ್ಸು. ಅವನು ಮನುಷ್ಯನ ನಿರಂತರ ಮಾರ್ಗದರ್ಶಕ ಮತ್ತು ಸ್ನೇಹಿತ.



ಶಬರಿಮಲೈ ಯಾತ್ರೆಯನ್ನು ಜನಪ್ರದವಾಗಿ ನಿಭಾಯಿಸುವವರು ಗಮನಿಸ ಬೇಕಾದ ಮುಖ್ಯ ಅಂಶಗಳನ್ನೆಲ್ಲಾ ನಾವು ಪಟ್ಟಿ ಮಾಡಿದ್ದೇವೆ. ಏನಾದರೂ, ಇನ್ನೂ ಹೆಚ್ಚು ಸಾಮಾಜಿಕ ಪ್ರಕೃತಿಯವರೂ ಇದ್ದಾರೆ. ಆ ಹದಿನೆಂಟು ಪವಿತ್ರವಾದ ಮೆಟ್ಟಿಲುಗಳನ್ನು ಹತ್ತಲು ಆಸೆ ಪಡುವವರು, ನಲವತ್ತೊಂದು ದಿನಗಳ ವ್ರತವನ್ನೂ ಮಾಡುತ್ತಾರೆ ಎನ್ನಲಾಗಿದೆ. ಸಾಧಾರಣವಾಗಿ ಈ ವ್ರತವನ್ನು ನವೆಂಬರ್ ಹದಿನಾರನೆಯ ತಾರೀಖು ಆರಂಭಿಸುತ್ತಾರೆ. ಅದರ ಅತಿಶಯತೆಯ ಬಗ್ಗೆ ಸರಿಯಾಗಿ ತಿಳಿದಿಲ್ಲ. ಆದರೆ ಆಶ್ಚರ್ಯವೋ ಎನ್ನುವಂತೆ, ಅದು ದೇವಸ್ಥಾನಕ್ಕೆ ಅಡಿಪಾಯ ಹಾಕಿದ ದಿನಕ್ಕೇ ಹೊಂದುತ್ತದೆ. ಕೇರಳದಲ್ಲಿ ಮಂಡಲ ಎಂಬುದು ನವೆಂಬರ್ ಹದಿನಾರನೆಯ ತಾರೀಖಿನಂದು ಪ್ರಾರಂಭವಾಗುತ್ತದೆ. ಅಂದಿನಿಂದ ಮಕರ ಸಂಕ್ರಾಂತಿಯ ದಿನದವರೆಗೆ ದಿನಗಳು ಪವಿತ್ರವಾದವು ಎಂದು ಭಾವಿಸಲಾಗಿದೆ. ಕೇರಳದಲ್ಲಿ ಈ ದಿನಗಳನ್ನು ತಪಸ್ಸಿನ ದಿನಗಳೆಂದು ಆಚರಿಸುತ್ತಾರೆ.

ಆ ಕಟ್ಟುನಿಟ್ಟಿನ ಆಚರಣೆಯನ್ನು ರುದ್ರಾಕ್ಷಿಹಾರ ಅಥವಾ ತುಳಸಿಮಾಲೆ ಹಾಕಿಕೊಂಡು ಪ್ರಾರಂಭಿಸುತ್ತಾರೆ. ಈ ಅಭ್ಯಾಸಕ್ಕೆ 'ಮಾಲಾಧಾರಣ' ಎನ್ನುತ್ತಾರೆ. ಅದು ಕಟ್ಟುನಿಟ್ಟಾಗಿ ಯಾತ್ರೆಯನ್ನು ನಿಭಾಯಿಸಲು ತೆಗೆದುಕೊಳ್ಳುವ ಪ್ರತಿಜ್ಞೆ.

**ಮಾಲೆ ಧರಿಸುವುದು:**

ಇದನ್ನು ಗುರು, ದೇವಸ್ಥಾನದ ಆವರಣದಲ್ಲಿ ಮಾಡುತ್ತಾರೆ. ದೇವಸ್ಥಾನದ ಸ್ಥಳ ದೊರೆಯದಿದ್ದಾಗ, ಮನೆಯಲ್ಲಿಯೇ ಯಾತ್ರಿಕರು ಮಾಡಿಕೊಳ್ಳುತ್ತಾರೆ. ಭಗವಂತನಿಗೆ ಪೂಜೆಗಳನ್ನು ಸಲ್ಲಿಸಿ, ಯಾತ್ರಿಕರು ಭಗವಂತನನ್ನೇ ನಂಬಿಕೊಂಡು, ತಮ್ಮ ಕುತ್ತಿಗೆಗಳಿಗೆ ತುಳಸಿಯ ಮಾಲೆ ಅಥವಾ ರುದ್ರಾಕ್ಷಿಯ ಮಾಲೆ ಹಾಕಿಕೊಳ್ಳುತ್ತಾರೆ. ಮಾಲಧಾರಣೆ ಆದನಂತರ, ಯಾತ್ರಿಕರು ತಮ್ಮ ಸಾಮಾಜಿಕ ಚಟುವಟಿಕೆಗಳನ್ನು ಬಿಟ್ಟುಬಿಡಬೇಕು. ನಂತರ ಅವರು ತಮ್ಮ ಕೈಂಕರ್ಯಗಳು ಮತ್ತು ಪ್ರಾರ್ಥನೆಗಳಲ್ಲಿ ಬೆಳಗ್ಗೆ ಮತ್ತು ಸಂಜೆ ಮಗ್ನರಾಗಿರಬೇಕು. ಅವರ ಊಟದ ಬಗೆಯೂ ಕಟ್ಟುಪಾಡುಗಳಿರುತ್ತವೆ. ಅವರು ಎಲ್ಲಾ ಧಾರ್ಮಿಕ ಸತ್ಸಂಗಗಳಲ್ಲಿ, ಭಜನೆಗಳಲ್ಲಿ ಮತ್ತು ಧಾರ್ಮಿಕ ಪ್ರಕೃತಿಯ ಎಲ್ಲಾ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿರಬೇಕು. ತಮ್ಮಿಂದಾಗುವಷ್ಟು ದೇವಸ್ಥಾನಗಳಿಗೆ ಹೋಗಿ ಭಗವಂತನ ದರ್ಶನ ಮಾಡಿ ಬರಬೇಕು. ಒಟ್ಟಿನಲ್ಲಿ ದಿವ್ಯತೆಯಲ್ಲಿಯೇ ಅವರು ತಮ್ಮ ಸಮಯ ಕಳೆಯಬೇಕು.

**ಯಾತ್ರೆಯ ಪ್ರಾರಂಭ:–**

ನಿಶ್ಚಿತ ದಿನದಂದು, ಪೂಜೆಗಳನ್ನೆಲ್ಲಾ ಮಾಡಿ ಮಾಡಿ, ಭಗವಂತನಿಗೆ ನಮಸ್ಕರಿಸಿ ಶರಣಾದ ನಂತರ, ಯಾತ್ರಿಕ ತೆಂಗಿನಕಾಯಿಯೊಳಗೆ ತುಪ್ಪವನ್ನು ತುಂಬುವುದಕ್ಕೆ ಮುಂಚೆ, ಮೆದುವಾದ ತೂತಿನಿಂದ, ಎಳನೀರನ್ನು ಚೆಲ್ಲಿ, ನಂತರ ತುಪ್ಪ ತುಂಬಿ, ಗಟ್ಟಿಯಾಗಿ ಆ ತೂತನ್ನು ಕಾರ್ಕಿನ ಮೂಲಕ ಮುಚ್ಚಿ ಅದನ್ನು ಅರಗು ಮುಂತಾದ್ದನ್ನು ಹಾಕಿ ಮೊಹರು ಹಾಕುತ್ತಾರೆ. ನಂತರ ತುಪ್ಪ ತುಂಬಿದ ಆ ತೆಂಗಿನ ಕಾಯನ್ನು ಒಂದು ಹತ್ತಿಯ ಚೀಲದಲ್ಲಿಟ್ಟು, ಭಗವಂತನ ಪೂಜೆಗೆ ಬೇಕಾದ ಇತರ ಸಾಮಾನುಗಳನ್ನೂ ಎಂದರೆ ಕರ್ಪೂರ, ಊದುಬತ್ತಿ ಇತ್ಯಾದಿಗಳನ್ನೂ ಅದರಲ್ಲಿಡುತ್ತಾರೆ. ನಂತರ ಅದನ್ನು ಮೇಲೆ ಕಟ್ಟಿ, ಇರುಮುಡಿಯ ಮುಂದಿನ ಭಾಗದಲ್ಲಿಡುತ್ತಾರೆ. ಹಿಂದಿನ ಭಾಗದಲ್ಲಿ ಯಾತ್ರಿಕರು (ತಮಗೆ ಬೇಕಾದ) ವೈಯಕ್ತಿಕ ಅವಶ್ಯಕ ವಸ್ತುಗಳನ್ನು ತುಂಬಿಸಿಕೊಂಡು, ಕಟ್ಟುತ್ತಾರೆ. ಎರಡನ್ನೂ ಸೇರಿಸಿ ಕಟ್ಟಿ, ಒಂದು ಗಂಟು ಹಾಕಿ, ಎರಡು ಹೊರೆಗಳನ್ನೂ ಆ ಗಂಟಿನಿಂದ ನೇತಾಡುವಂತೆ ಮಾಡಿಕೊಳ್ಳುತ್ತಾರೆ.

ಇದು ಮುಗಿದ ತಕ್ಷಣವೇ ಯಾತ್ರಿಕ, ಇರುಮುಡಿಯನ್ನು ತನ್ನ ತಲೆಯ ಮೇಲಿಟ್ಟುಕೊಂಡು, "ಸ್ವಾಮಿಯೇ ಶರಣಂ ಅಯ್ಯಪ್ಪಾ, ಸ್ವಾಮಿ ಅಯ್ಯಪ್ಪಾ, ನಾನು ನಿನಗೆ ಶರಣಾಗಿದ್ದೇನೆ" ಎಂದು ಹೇಳಿಕೊಂಡು, ಮನೆಯಿಂದ ಹೊರಡುತ್ತಾನೆ. ಅವನು ಹೊರಟಮೇಲೆ ಮನೆಯತ್ತ ತಿರುಗಿ ನೋಡುವಂತಿಲ್ಲ. ತನ್ನ ತಂದೆತಾಯಿಗಳು, ಹೆಂಡತಿ ಅಥವಾ ಮಕ್ಕಳತ್ತಲೂ ನೋಡದೆ ಪ್ರಾಪಂಚಿಕ ಬಾಂಧವ್ಯವನ್ನೇ ಬಿಟ್ಟವನಂತೆ ಹೊರಟುಬಿಡುತ್ತಾನೆ, ನೇರವಾಗಿ.

**ಏರುಮೇಲಿ: ಮಹಾದ್ವಾರ:**

ದೇವಸ್ಥಾನಕ್ಕೆ ಸಾಕಷ್ಟು ಮಾರ್ಗಗಳಿವೆ. ಆದರೆ ಏರುಮೇಲಿಯ ಮೂಲಕ ಹೋಗುವ ರಸ್ತೆ, ಅತ್ಯಂತ ಉದ್ದನೆಯದು ಮತ್ತು ತ್ರಾಸದಾಯಕವಾದದ್ದು. ಅದೇ ಮಾರ್ಗವನ್ನೇ ಭಗವಂತ ಸೂಚಿಸಿದ್ದು ಎನ್ನಲಾಗಿದೆ. ಹಾಗಾಗಿ ಅದೇ ಮಾರ್ಗ ಅತ್ಯಂತ ಪವಿತ್ರವಾದದ್ದು ಎಂದೂ ಗಣಿಸಲಾಗಿದೆ. ಭಗವಂತ ಕರಡಿಯ ಹಾಲನ್ನು ಹುಡುಕಿಕೊಂಡು ಹೋದಾಗ, ಅದೇ ರಸ್ತೆಯಲ್ಲಿ ನಡೆದುಹೋಗಿದ್ದನಂತೆ. ಏರುಮೇಲಿಯಿಂದ ದೇವಸ್ಥಾನದ ಪ್ರಂಗಣ ನಲವತ್ತೈದು ಮೈಲಿಗಳ ಎಂದರೆ ಎಪ್ಪತ್ತೆರಡು ಕಿಲೋಮೀಟರ್‌ಗಳ ದೂರದಲ್ಲಿದೆ. ಏರುಮೇಲಿಯವರೆಗೆ, ಭಕ್ತರು ತಮ್ಮ ಬಸ್ಸುಗಳು ಕಾರುಗಳಲ್ಲಿ ಬಂದು, ಅಲ್ಲಿ ಗಾಡಿಗಳನ್ನು ನಿಲ್ಲಿಸುತ್ತಾರೆ. ಒಂದು



ಕ್ಷಣ, ನೀವು ಆ ಚಿಕ್ಕ ಹಳ್ಳಿಯನ್ನು ಊಹಿಸಿಕೊಳ್ಳಿ. ಅದು ನಾಘರಿಕತೆಯ ಕಡೆಯ ಹೊರಪಾಳೆಯ – ಜನಸಂಖ್ಯೆ ಸುಮಾರು ಸಾವಿರವೋ ಎರಡು ಸಾವಿರವೋ ಅಷ್ಟೆ. ಅಂಥಾ ಸ್ಥಳ ಇದ್ದಕ್ಕಿದ್ದಂತೆ ಮೂರರಿಂದ ನಾಲ್ಕು ಲಕ್ಷ ಮಂದಿಗಳ ಬಂದು ಹೋಗುವ ಜನಸಂಖ್ಯೆಯಿಂದ ಇದ್ದಕ್ಕಿದ್ದಂತೆ ಊದಿಕೊಂಡರೆ – ಅದರಲ್ಲಿಯೂ ಎಲ್ಲಾ ಯಾತ್ರಿಕರೂ ಮತ್ತು ಯಾತ್ರಿಕರಿಗಾಗಿ ಇರುವ ವ್ಯಾಪಾರಗಾರರು ಕಪ್ಪು, ನೀಲಿ ಅಥವಾ ಕಾವಿ ಬಣ್ಣದ ಬಟ್ಟೆಗಳನ್ನು ಧರಿಸಿದ್ದರೆ ಹೇಗಿರಬಹುದು ಎಂಬುದನ್ನು ಒಂದು ಕ್ಷಣ ಊಹಿಸಿಕೊಳ್ಳಿ. ಎಲ್ಲೆಲ್ಲೂ ಭಗವನ್ನಾಮದ ಜಪವೇ ಗಾಳಿಯಲ್ಲಿ ತುಂಬಿರುತ್ತದೆ.

ಏರುಮೇಲಿಯಲ್ಲಿ ವಾವರನ ದೇವಸ್ಥಾನವೂ ಇದೆ. ಭಗವಂತನ ಮುಸ್ಲಿಂ ಭಕ್ತನೇ ವಾವರ. ವಾವರ ಭಗವಂತನೊಂದಿಗೆ ಘೋರವಾಗಿ ಕಾದಾಡಿ, ನಂತರ ಭಗವಂತನ ಭಕ್ತನಾದ. ದ್ರವನನ್ನು ಭಗವಂತ ತನ್ನ ಮೊದಲನೆಯ ಸೇನಾಧಿಕಾರಿಯಾಗಿ (ಕ್ಯಾಪ್ಟನ್ನಿಗಿಂತ ಕೆಳಗಿನ ಅಧಿಕಾರಿ) ಮಡಿಕೊಂಡನು. ವಾವರದ ದೇವಸ್ಥಾನದಲ್ಲಿ ಹಿಂದೂಗಳೂ ಮತ್ತು ಮುಸ್ಲಿಮರೂ ಸೇರಿ ಪೂಜೆ ಮಾಡುತ್ತಾರೆ. ಹಾಗಾಗಿ ಅದು ಹಿಂದೂ ಮುಸ್ಲಿಮರ ಐಕ್ಯತೆಯ ಚಿಹ್ನೆಯಾಗಿದೆ. ಭಾರತ ದೇಶದಲ್ಲಿ ಹಿಂದೂ ಮುಸ್ಲಿಮರ ಮಾನವೀಯತೆಯನ್ನು ಮೇಲೆತ್ತಲೆಂದೇ ಹಿಂದೂ ಮುಸ್ಲಿಮರ ಏಕತೆಯನ್ನು ಬೋಧಿಸಲಾಯಿತು. ಅದನ್ನು ಅಷ್ಟು ಹಿಂದಿನ ಕಾಲದಿಂದಲೇ ಅಭ್ಯಾಸಕ್ಕೆ ತರಲು ಯತ್ನಿಸಿದ್ದು, ಆಶ್ಚರ್ಯದ್ದೇ. ಇಂದಿಗೂ ನಾವು ಅಲ್ಲಿ, ಈ ಎರಡೂ ಧರ್ಮದವರು ಜೊತೆಗೂಡಿ ಪೂಜಿಸುವುದನ್ನು ನೋಡುತ್ತೇವೆ.

ಏರುಮೇಲಿ ದೇವಸ್ಥಾನದಲ್ಲಿನ ಭಗವಂತನ ಮೂರ್ತಿ, ಬೇಟೆಗಾರನ ಆಕಾರದಲ್ಲಿದೆ. ಇಲ್ಲಿಯೇ ಮೊದಲನೆಯ ಸಲ ಬರುವ ಭಕ್ತರು (ಅವರನ್ನು ಶಬರಿಮಲೈನಲ್ಲಿ ಕನ್ನಿಗಳು ಎನ್ನುತ್ತಾರೆ) 'ಪೆಟ್ಟ ಕುಲಾಲ್' ಮಾಡುತ್ತಾರೆ. ಎಂದರೆ, ಅವರು ತಮ್ಮ ಇಡೀ ದೇಹಕ್ಕೆ ವಿವಿಧ ಬಣ್ಣಗಳನ್ನು ಬಳಿದುಕೊಂಡು ಹಾಸ್ಯಾಸ್ಪದವಾಗಿ ಕಾಣುವಂತೆ ಮಾಡಿಕೊಂಡು, ಭಗವಂಥನ ಸೇನಾಧಿಪತಿ ಕರುಪ್ಪಸ್ವಾಮಿಯ ದೇವಾಲಯದಿಂದ ಮೆರವಣಿಗೆ ಹೊರಟು, ಭಗವಂತನ ದೇವಸ್ಥಾನದವರೆಗೂ ತಾಳಕ್ಕೆ ಸರಿಯಾಗಿ ಕುಣಿಯುತ್ತಾ, ನರ್ತಿಸುತ್ತಾ ಸ್ವಾಮಿ ತಿಂತಕಥೋಂ, ಅಯ್ಯಪ್ಪ ತಿಂತಕಥೋಂ ಎಂದು ಹೇಳಿಕೊಂಡು ಬರುತ್ತಾರೆ. ಒಂದು ದಿನದ ಬೇಟೆಯ ನಂತರ, ಬೇಟೆಗಾರ ತನ್ನ ಒಂದು ದಿನದ ಲೂಟಿಯಿಂದ ಪಡೆದ ಸಾಮಾನಿನೊಂದಿಗೆ ಹಿಂದಿರುಗುವುದೇ ಅದು ಎಂದು ನಂಬಲಾಗಿದೆ.

ಇಂದಿನ ಸಾಂಸ್ಕೃತಿಕ ಹಾಗೂ ವಿದ್ಯಾವಂತ ಶ್ರೇಣಿಗಳೆಂದು ಕರೆಸಿಕೊಳ್ಳುವ ವರ್ಗಕ್ಕೆ ಸೇರಿದ ಆಧುನಿಕ ವ್ಯಕ್ತಿಗೆ, ಆ ನಯವಿಲ್ಲದ ಡೋಲುಗಳ ಬಡಿತಕ್ಕೆ ಸರಿಯಾಗಿ ನರ್ತಿಸುವುದು ಮತ್ತು ಅದರಲ್ಲಿಯೂ ತನ್ನ ದೇಹವನ್ನು ವಿವಿಧ

ಬಣ್ಣಗಳಿಂದ ಶೃಂಗರಿಸಿಕೊಂಡು ಒಂದು ಮರದ ಕೋಲನ್ನು ತನ್ನ ತೋಳುಗಳ ಮೇಲಿಟ್ಟುಕೊಂಡು, ಅದನ್ನೂ ಎಲೆಗಳು ಹಾಗೂ ತರಕಾರಿಗಳಿಂದ ಶೃಂಗರಿಸಿಕೊಂಡು ಕುಣಿಯುವುದಂತೂ, ಅಸಹ್ಯ ಬರಿಸಬಹುದೋ ಏನೋ. ಇದು, ತನ್ನನ್ನು ತಾನು ಇತರರಿಗಿಂತ ಉತ್ತಮನು ಎಂದು ಭಾವಿಸಿದವನಿಗೆ, ಅವರಲ್ಲಿ ತಾನೂ ಒಬ್ಬನೆಂದು ಕೊಂಡವನಿಗೆ, ನಿಜಕ್ಕೂ ಮೊದಲನೆಯ ಕಟುವಾದ ಪರೀಕ್ಷೆ. ಅವನ ಹೆಮ್ಮೆಗೆ ಇಲ್ಲಿ ಬಲವಾದ ಒಂದು ಏಟು ಬೀಳುತ್ತದೆ. ಭಗವಂತನು, ನಮ್ಮೆಲ್ಲರನ್ನೂ ತನಗೆ ಶರಣಾಗುವಂತೆ ಆಶಿಸುತ್ತಾನೆ. ಅವನಿಗೆ ನಮ್ಮ ಪವಿತ್ರವಾದ ಮನಸ್ಸು ಬೇಕೇ ಹೊರತು, ನಮ್ಮ ದೇಹವಲ್ಲ.

ಪೆಟ್ಟ ತುಲ್ಲಾಲಿನ ನಂತರ, ಯಾತ್ರಿಕರು ತಮ್ಮ ತಮ್ಮ ಗುಂಪುಗಳಲ್ಲಿ ಕಟ್ಟಿಕೊಂಡು, ಶುಭ್ರವಾದ ಬಟ್ಟೆಗಳನ್ನು ಧರಿಸಿ ಭಗವಂತ ಧರ್ಮಶಾಸ್ತ್ರದ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ಆ ಪವಿತ್ರವಾದ ಬೆಟ್ಟವನ್ನು ಹತ್ತಲು, ಭಗವಂತನ ಅನುಮತಿ ಬೇಡಿ, ನಂತರ ಆ ಸ್ಥಳವನ್ನು ಬಿಟ್ಟು ಹೊರಡುತ್ತಾರೆ.

ಏರುಮೇಲಿಯಿಂದ ಕಾಡಿನ ಮೂಲಕ ಹೋಗಬೇಕಾದ ಅವರ ದೀರ್ಘ ಯಾತ್ರೆಯನ್ನು ಅವರು ಬರಿಗಾಲಿನಲ್ಲಿ ನಡೆದುಹೋಗುವುದರಿಂದ ಆರಂಭಿಸುತ್ತಾರೆ. ಅವರ ಪ್ರಯಾಣದ ಮೊದಲನೆಯ ಘಟ್ಟ ಸುಮಾರು ನಾಲ್ಕೂವರೆಯಿಂದ ಆರು ಕಿಲೋಮೀಟರುಗಳ ದೂರದಲ್ಲಿದ್ದು, ಅದು ಪೆರೂರ್ ತೋಡು ಎಂಬ ಚಿಕ್ಕ ಕಾಲುವೆಯಲ್ಲಿ ಕೊನೆಗೊಳ್ಳುತ್ತದೆ. ಏರುಮೇಲಿಯಿಂದ ಸಂಜೆ ಹೊರಟ ಯಾತ್ರಿಕರು, ಪೆರೂರು ತೋಡು ತಲುಪುವಾಗ ಮುಂಜಾನೆ ಆಗಿರುತ್ತದೆ. ಅವರು ರಾತ್ರಿ ಅಲ್ಲೇ ವಿಶ್ರಮಿಸಿಕೊಳ್ಳುತ್ತಾರೆ. ಏರುಮೇಲಿಯಿಂದ ಸ್ವಲ್ಪ ದೂರ ಹೋದ ಯಾತ್ರಿಕರು, ಒಂದು ಚಿಕ್ಕ ಊರಿನ ರಸ್ತೆ ತಲುಪುತ್ತಾರೆ. ಅವರನ್ನು ಅದು, ಕಾಡಿಗೆ ಒಯ್ಯುತ್ತದೆ. ಅದು ಭಾರಿ ಕಾಡೇ ಆಗಿದ್ದು, ಅದರಲ್ಲಿ ಇಡೀ ಪ್ರದೇಶ ಹಸಿರು ಹುಲ್ಲುಮಾಳದಿಂದ ತುಂಬಿರುತ್ತದೆ. ಅಲ್ಲಲ್ಲಿ ಚಿಕ್ಕ ಚಿಕ್ಕ ಗುಡಿಸಲುಗಳೂ ಇದ್ದು, ಅವುಗಳಲ್ಲಿ ಹತ್ತಿರದ ತೋಟಗಳಲ್ಲಿ ಕೆಲಸ ಮಾಡುವವರು ವಾಸಿಸುತ್ತಾರೆ.

ಮುಂಜಾನೆ ಬೇಗ ಎದ್ದು, ಯಾತ್ರಿಕರು ತಮ್ಮ ನಿತ್ಯದ ಪ್ರಾರ್ಥನೆಗಳನ್ನು ಹೇಳಿ ಮುಗಿಸಿ, ಪೆರೂರ್ ತೋಡು ಎಂಬಲ್ಲಿಗೆ ಏರಲು ಪ್ರಾರಂಭಿಸುತ್ತಾರೆ. ಇಲ್ಲಿನ ಹಾದಿಯ ಎರಡೂ ಕಡೆ ದಟ್ಟವಾದ ಪೊದೆಗಳಿದ್ದು, ಎಲ್ಲೋ ನಡುವೆ ಒಂದೊಂದು ಉದ್ದನೆಯ ಮರಗಳಿರುತ್ತವೆ. ಅವು ಪ್ರಕೃತಿಯ ಪಹರೆಯ ಗೋಪುರಗಳೇ ಎನ್ನಬೇಕು. ಅಲ್ಲಿ ಸೂರ್ಯೋದಯವಾಗುವುದನ್ನು ನೋಡುವುದೇ ಒಂದು ಆನಂದ. ತಣ್ಣನೆಯ ಗಾಳಿ ಬೀಸುತ್ತಿರುತ್ತದೆ. ಪಕ್ಷಿಗಳು ಯಾತ್ರಿಕರನ್ನು ಸ್ವಾಗತಿಸಲು ಕಿಚಕಿಚ ಎಂದು ಕೂಗುತ್ತಿರುತ್ತವೆ. ಆದರೆ ಸೂರ್ಯ ಮೇಲೇರುವಾಗ, ವಾತಾವರಣ ಬಿಸಿಯಾಗಿ, ನಡಿಗೆ ಕಷ್ಟವಾಗುತ್ತದೆ. ಏಕೆಂದರೆ, ಆ ಭಾಗಗಳಲ್ಲಿನ



ರಸ್ತೆಯಲ್ಲಿ ನೆರಳು ನೀಡುವಂಥ ಮರಗಳೇ ಇಲ್ಲ. ರಸ್ತೆಗಳೂ ಚೆನ್ನಾಗಿರುವುದಿಲ್ಲ. ಯಾತ್ರಿಕರು ಇಂಗಿಹೋದ ಕೆರೆಗಳ ಹಾದಿಯಲ್ಲಿ ಕ್ರಮಿಸಿ, ಆಗಾಗ ಬಂಡೆಗಳು, ಪೊದೆಗಳು ಮತ್ತು ಚಿಕ್ಕ ಕಾಡುಮರಗಳ ನಡುವೆ ನಡೆದು ಹೋಗಬೇಕು. ಅಲ್ಲಲ್ಲಿ ಕಾಡುಮೃಗಗಳ ಹಾದಿಯಲ್ಲಿಯೂ ಜನರು ನಡೆಯಬೇಕಾಗುತ್ತದೆ. ಎಲ್ಲಿ ಕಾಡು ಮೃಗಗಳು ಪ್ರತ್ಯಕ್ಷವಾಗುತ್ತವೆಯೋ ಎಂದು ಯಾತ್ರಿಕರು ನಡುಗುತ್ತಾರೆ. ಅಲಸಾನದಿಯ ದಡ ಸಿಕ್ಕಿದಾಗ, ಸುಸ್ತಾದ ಯಾತ್ರಿಕರು ವಿಶ್ರಮಿಸಲು ಆಶಿಸುತ್ತಾರೆ. ಅಲಸಾ ನದಿಗೆ ಅಳುಟ್ಟಾ ಎಂದೂ ಹೆಸರಿದೆ. ಆರು ಮೈಲಿಗಳು ಎಂದರೆ ಸುಮಾರು ೯ ಕಿ.ಮೀ. ನಡೆದು ಈ ಸ್ಥಳಕ್ಕೆ ಬರುತ್ತಾರೆ ಯಾತ್ರಿಕರು.

ಪುರಾಣಗಳು ಹೇಳುವುದು, ಈ ನದಿಯ ದಡದ ಮೇಲೆ ಭಗವಂತ ಮಹಿಷಿಯನ್ನು ದೇವಲೋಕದಿಂದ ಎಸೆದು, ಅವಳ ದೇಹದ ಮೇಲೆ ತನ್ನ ಬ್ರಹ್ಮಾಂಡದ ನೃತ್ಯವನ್ನು ಮಾಡಿ, ಅವಳನ್ನು ದತ್ತನ ಶಾಪದಿಂದ ಮುಕ್ತಳನ್ನಾಗಿ ಮಾಡಿದನು ಎಂತಲೇ ಹೌದು. ಇಂದಿಗೂ ಕನ್ನಿಗಳು ದೇಹವನ್ನು ಹೂತಿದ್ದ ಸ್ಥಳದ ಮೇಲೆ ಎಸೆದು, ಕೆಟ್ಟತನದ ಮೇಲಿನ, ಒಳ್ಳೆಯತನದ ಗೆಲುವನ್ನು ಆಚರಿಸುತ್ತಾರೆ.

**ಅಳುತ್ತದ ಮೊದಲನೆಯ ಘಟ್ಟ:–**

ಅಳುತ್ತ ನದಿ ದೊಡ್ಡ ನದಿ ಅಲ್ಲ. ಅದರೆ ಆಳವಾಗಿದ್ದು, ಆಳವಾದ ದಡಗಳನ್ನೂ ಹೊಂದಿದೆ. ಅದರ ಹಿಂಭಾಗದಲ್ಲಿ ಅಳುತ್ತ ಪರ್ವತ, ಕಡಿದಾಗಿ ಬೆಳೆದುನಿಂತಿದೆ. ಅದೊಂದು ಅದ್ಭುತ ದೃಶ್ಯ. ಏಕೆನ್ನುವಿರೋ? ವಿವಿಧ ಜಾತಿಗಳ ಅಷ್ಟೊಂದು ಜನ ಯಾತ್ರಿಕರು, ಸಾಹುಕಾರರು, ಬಡವರು, ಚಿಕ್ಕವರು, ಮುದುಕರು, ಎಲ್ಲರೂ ಬಿಡುವಿಲ್ಲದೆ, ತಮ್ಮ ತಮ್ಮ ಗುಡಾರಗಳನ್ನು ಹಾಕಿಕೊಳ್ಳುವುದು, ಪರಸ್ಪರ ಸಹಾಯ ಮಾಡುವುದು, ತಮ್ಮ ತಮ್ಮ ಆಹಾರಗಳನ್ನು ಬೇಯಿಸಿಕೊಳ್ಳುವುದು, ಭಗವಂತನ ನಾಮ ಜಪ ಬಿಡದೆ ಮಾಡುವುದು, ಎಲ್ಲವೂ ಅದ್ಭುತಗಳೇ ಅಲ್ಲವೇ? ಸದಾ ಕಾಲ ಭಗವನ್ನಾಮ ಆಕಾಶದಲ್ಲಿ ಕೇಳಿಬರುವುದು. ಸೂರ್ಯಾಸ್ತದ ದೃಶ್ಯವಂತೂ ಮರೆಯಲಾಗದ ದೃಶ್ಯ. ನದಿಯ ಎರಡೂ ದಡಗಳಲ್ಲಿ ಬೆಳಗುವ ದೀಪಗಳ ಸಾಲುಗಳ ದೃಶ್ಯವಂತೂ ಅತಿ ರಮ್ಯ! ಕೆಳಗಿನ ನೀರಿನ ಮಟ್ಟದಿಂದ ನೂರು ಅಥವಾ ಇನ್ನೂರು ಗಜಗಳೆತ್ತರದವರೆಗೆ ದೀಪಗಳು ಕಂಡುಬರುತ್ತವೆ. ಜೊತೆಗೆ ನಿರಂತರವಾದ ಭಗವನ್ನಾಮ ಜಪ, ಅವನನ್ನು ಹೊಗಳುವ ಹಾಡುಗಳು ಎಲ್ಲವೂ ಸಂಗೀತದ ವಾದ್ಯಗಳ ಕಿವಿಗಿಂಪಾದ, ಸುಮಧುರವಾದ, ಸ್ವರಗಳೊಂದಿಗೆ ಅತ್ಯಂತ ರಮ್ಯವಾಗಿರುತ್ತವೆ. ಭಗವಂತನ ದಯೆ ಮತ್ತು ಪ್ರೇಮವಿಲ್ಲದಿದ್ದರೆ, ಅಂಥ ಕಾಡು ಪ್ರದೇಶ, ಪೂರ್ಣ ನಿರ್ಭಯ ಪ್ರದೇಶವಾಗಿ ಮನುಷ್ಯರು ವಾಸಿಸುವ ಸ್ಥಳವಾಗಲು ಸಾಧ್ಯವೇ?

ಒಂದು ದಿನದ ವಿಶ್ರಾಮದ ನಂತರ, ಯಾತ್ರಿಕರು ಮುಂಜಾನೆ ಬೇಗ ಎದ್ದು, ತಮ್ಮ ನಿತ್ಯದ ಪ್ರಾರ್ಥನೆಗಳೊಂದಿಗೆ ಯಾತ್ರೆಯನ್ನು ಮುಂದುವರಿಸುತ್ತಾರೆ. ಅವರ ಕೆಲಸ ಈಗ ಅಝುತ್ತ ಪರ್ವತವನ್ನೇರುವುದೇ ಆಗಿರುತ್ತದೆ. ರಸ್ತೆಯೋ, ದಪ್ಪ ದಪ್ಪ ಬಂಡೆಗಳದ್ದು, ನಡುವೆ ಬಳ್ಳಿಗಳು ಹರಡಿರುತ್ತವೆ. ಅದಲ್ಲದೆ ರಾಕ್ಷಸಾಕಾರದ ಮರಗಳ ದಪ್ಪನೆಯ ಬೇರುಗಳು! ಆ ರಸ್ತೆಯಲ್ಲಿ ನಡೆಯುವಾಗ ಕಣ್ಣೀರು ಹಾಕದೆ ನಡೆಯುವವರು, ಒಬ್ಬರೋ ಇಬ್ಬರೋ ಅಷ್ಟೇ. ಒಬ್ಬರ ಹಿಂದೆ ಮತ್ತೊಬ್ಬರಂತೆ ಭಗವನ್ನಾಮ ಜಪಿಸುತ್ತಾ, ಅವನನ್ನು ಶ್ಲಾಘಿಸುತ್ತಾ ಹೋಗುವ ಯಾತ್ರಿಕರು ನಿಧಾನವಾಗಿ ಹೆಜ್ಜೆ ಹಾಕುತ್ತಾ, ಎಷ್ಟೇ ಕಷ್ಟವಾದರೂ ಸಹಿಸಿಕೊಂಡು ಬೆಟ್ಟದ ತುದಿಯನ್ನು ಕಡೆಗೂ ತಲುಪುತ್ತಾರೆ. ಆ ವೇಳೆಗೆ ಮೊದಲು ಹತ್ತಿ ಹೋಗಿದ್ದವರಾಗಲೇ ಸುಧಾರಿಸಿಕೊಂಡು, ತಮ್ಮ ಇಳಿತವನ್ನು ಪ್ರಾರಂಭಿಸಲು ಉದ್ಯುಕ್ತರಾಗಿರುತ್ತಾರೆ. ಇಳಿಯುವುದಂತೂ ಹತ್ತುವುದಕ್ಕಿಂತಲೂ ಬಹಳ ಕಷ್ಟದ ಕೆಲಸ. ನಿಧಾನವಾಗಿ ಒಬ್ಬರ ಹಿಂದೆ ಒಬ್ಬರಂತೆ ಹುಷಾರಾಗಿ ಹೆಜ್ಜೆ ಹಾಕುತ್ತಾ ಅವರು ಕೆಳಗಿಳಿಯುತ್ತಾರೆ.

ಇಲ್ಲಿ ಕಾಡು, ಅದೆಷ್ಟು ದಟ್ಟವಾಗಿದೆ ಎಂದರೆ, ಮಧ್ಯಾಹ್ನದ ಸಮಯದಲ್ಲಿ ಕೂಡ, ಸೂರ್ಯನ ಕಿರಣಗಳು ಎಲ್ಲಿಂದಲೂ ತೂರಿಬರುವುದೇ ಇಲ್ಲ. ಇಡೀ ಸ್ಥಳ ಒದ್ದೆಯಾಗಿದ್ದು, ನೆಲ ಜಾರಿಕೆಯಾಗಿರುತ್ತದೆ. ಜೊತೆಗೆ, ಪಕ್ಷಿಗಳ ಮತ್ತು ಕಾಡುಪ್ರಾಣಿಗಳ ಕೂಗಾಟಗಳೇ ಎಲ್ಲೆಲ್ಲೂ ಕೇಳಿಬರುತ್ತದೆ. ಆನೆಗಳ ಹಿಂಡುಗಳು ಅಲ್ಲಿ ಓಡಾಡುತ್ತಿರುತ್ತವೆ. ಅವುಗಳ ಹೆಜ್ಜೆಗಳ ಗುರುತನ್ನು ಗುರುತಿಸಿ, ಯಾತ್ರಿಕರು ಆಗಾಗ ತಮ್ಮ ಪ್ರಯಾಣಗಳಲ್ಲಿ ಅವುಗಳ ಹಾದಿಯನ್ನು ದಾಟಿ ಹೋಗುತ್ತಾರೆ.

ಒಂದು ದೊಡ್ಡ ಪಳಗಿದ ಆನೆ, ಸರ್ಕಸ್ಸಿನಲ್ಲಿ ಅಥವಾ ಹಳ್ಳಿಯ ಜಾತ್ರೆಯಲ್ಲಿ, ಸೊಕ್ಕಿದ ಮನುಷ್ಯನ ಆಜ್ಞೆಯನ್ನು ಪಾಲಿಸಿ ಆಟವಾಡುವುದನ್ನು ನಾವು ಗಮನಿಸಲು ಆಸೆಪಟ್ಟು ನೋಡುತ್ತೇವೆ. ಆದರೆ ಇಂಥ ಕಡೆ, ಚೆನ್ನಾಗಿ ಕೊಬ್ಬಿದ ಒಂಟಿ ಆನೆಗಳು ಆಗಾಗ ಕಾಣಿಸಿಕೊಂಡರೆ, ಅವುಗಳ ಎದುರಿಗೆ ನಿಲ್ಲುವುದು ಬೇರೆ ಸಂಗತಿ. ಅಲ್ಲಂತೂ ಆನೆ ತನ್ನ ಕಿವಿಗಳನ್ನು ನಿಮಿರಿಸಿಕೊಂಡು, ಮೇಲೆ ಬೀಳಲು ಕಾತರಿಸುವಂತಿರುತ್ತವೆ. ಪರಮಾತ್ಮನಲ್ಲಿನ ಭಕ್ತಿ ಶ್ರದ್ಧೆಗಳೇ, ಅಂಥ ಆಪತ್ತಿನ ಸಂದರ್ಭಗಳಲ್ಲಿ ಯಾತ್ರಿಕರ ರಕ್ಷಣೆಗೆ ಬರುವುದು.

ಮುಂದೆ ರಸ್ತೆ, ಎರಡು ಎತ್ತರದ ಪರ್ವತಗಳ ನಡುವೆ ಬರುತ್ತದೆ. ಅಝುತ್ತ ಹಿಂದೆ ಇದ್ದರೆ, ಕರಿಮಲ ಎದುರಿಗಿರುತ್ತದೆ. ಆ ರಸ್ತೆ ಕರಿಮಲ ತೋಡು ಎಂಬ ಕಾಲುವೆಯ ಬಳಿ ಕೊನೆಯಾಗುತ್ತದೆ. ಅಝುತ್ತ ಮತ್ತು ಕರಿಮಲಗಳ ನಡುವೆ ಈ ಕಾಲುವೆ ಬಿಟ್ಟರೆ ಬೇರೆ ಯಾವ ನೀರಿನ ವ್ಯವಸ್ಥೆಯೂ ಇಲ್ಲ. ಹಾಗಾಗಿ ಪ್ರಾಕೃತಿಕವಾಗಿ ಈ ಸ್ಥಳ ಅತ್ಯಂತ ಅಪಾಯದ್ದಾಗಿದೆ. ಇಂದಿನ ದಿನಗಳಲ್ಲಿ, ಯಾತ್ರಿಕರು ಅಲ್ಲಿ



ಒಂದು ರಾತ್ರಿ ತಂಗುತ್ತಾರೆ. ಆದರೆ ಅವರ ಅನುಭವಗಳೋ, ಎಷ್ಟು ಹೇಳಿದರೂ ಮುಗಿಯದಂಥವು.

**ಕರಿಮಲ, ಎರಡನೆಯ ಘಟ್ಟ:–**

ಕರಿಮಲ ತೋಡನ್ನು ದಾಟಿ, ಯಾತ್ರಿಕರು ಕರಿಮಲದ ಮೇಲೆ ಹತ್ತಲು ಆರಂಭಿಸುತ್ತಾರೆ. ಅದನ್ನು ಅನೇಕ ಘಟ್ಟಗಳಲ್ಲಿ ಹತ್ತಬೇಕು. ಅಝುತ್ತ ಆದರೋ ನೇರವಾಗಿ ಹತ್ತಬಹುದಾದಂಥದ್ದು. ಕರಿಮಲವನ್ನು ಸುತ್ತಿಕೊಂಡು ಹತ್ತಬೇಕು. ಹೆಸರೇ ಸೂಚಿಸುವಂತೆ, ಆ ಬೆಟ್ಟ ಆನೆಗಳ ತೌರೂರು. ಘಟ್ಟಘಟ್ಟವಾಗಿ ಕಷ್ಟಪಟ್ಟು ಅದನ್ನು ಹತ್ತಿ ಮುಗಿಸಿದ ನಂತರ, ಮೇಲೆ ಯಾತ್ರಿಕರು ಶಿಖರ ತಲುಪುತ್ತಾರೆ. ಅಲ್ಲಿ ಮೊದಲೇ ಆ ಸ್ಥಳ ತಲುಪಿದ್ದ ಯಾತ್ರಿಕರು ವಿಶ್ರಮಿಸುತ್ತಿರುತ್ತಾರೆ. ಬೆಟ್ಟದ ಮೇಲೆ, ಒಂದು ತೊರೆ ಇರುವುದರಿಂದ, ಯಾತ್ರಿಕರು ಅಲ್ಲಿ ಒಂದು ದಿನ ಇದ್ದು, ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ನಂತರ ಆರಂಭವಾಗುವುದು ಗಂಡಾಂತರಕ್ಕೆ ಸಿಕ್ಕಿಕೊಳ್ಳಬಹುದಾದಂಥ ಇಳಿತ. ಒಂದೊಂದು ಹೆಜ್ಜೆ ಇಡುವಾಗಲೂ ಬಹಳ ಹುಷಾರಾಗಿ ಇಡಬೇಕು. ಯಾತ್ರಿಕರೋ ಮೊದಲೇ ದಣಿದಿರುತ್ತಾರೆ. ಜೊತೆಗೆ ಹೊರೆ ಹೊತ್ತಿರುತ್ತಾರೆ. ಹಾಗಾಗಿ ಇಳಿಯುವುದು ಅಪಾಯದ ಕೆಲಸ ಎನಿಸುತ್ತದೆ. ಒಂದು ತಪ್ಪು ಹೆಜ್ಜೆ ಹಾಕಿದರೂ, ಮುಗಿಯಿತು, ಕಥೆ ಎನ್ನುವಂತಾಗುತ್ತದೆ. ಏಕೆಂದರೆ ಆ ಮನುಷ್ಯ ಎಲ್ಲಿ ಬಿದ್ದನೋ ಎಂಬುದರ ಸುಳಿವೂ ಸಿಕ್ಕುವುದಿಲ್ಲ. ಹೇಗೋ ಕಷ್ಟಪಟ್ಟು ಇಳಿದ ನಂತರ, ಯಾತ್ರಿಕರು, ತಾವು ಕಾಯುತ್ತಿದ್ದ 'ಪಂಪ' ಎಂಬ ಸ್ಥಳ ತಲುಪುತ್ತಾರೆ. ರಮಣೀಯ ದೃಶ್ಯವೇ ಅವರ ಸುಸ್ತನ್ನು ನುಂಗಿಹಾಕುತ್ತದೆ. ಹೊಸ ಉತ್ಸಾಹ ಮೂಡುತ್ತದೆ ಅವರಲ್ಲಿ. ಅವರು ಅದರ ದಡ ತಲುಪಿ, ಅಲ್ಲಿ ಕೆಲವು ದಿನಗಳು ಇರಲು ಸಾಧ್ಯವಾಗುವಂತೆ, ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಆ ಘೋರ ಅರಣ್ಯದ ನಡುವೆ, ಎಂದರೆ ದೊಡ್ಡ ಪರ್ವತಗಳಿಂದ ಆವರಿಸಿರುವ ಮತ್ತು ಕಾಡು ಪ್ರಾಣಿಗಳಿಂದಲೂ ತುಂಬಿರುವ ಸ್ಥಳದಲ್ಲಿರುವ ಈ ಮೈದಾನ ಪ್ರದೇಶದ ರೂಪ, ಕಮಲದ ಕೊಳದ ಸ್ತಬ್ಧ ನೀರಿನಲ್ಲಿ ಪೂರ್ಣ ಚಂದ್ರನ ಪ್ರತಿಬಿಂಬ ಕಂಡಂತೆ ಎನ್ನಿಸುತ್ತದೆ. ಆ ನದಿ ದಡದ ಮೇಲೆ ಬೊಂಬುಗಳಿಂದ ಮತ್ತು ಎಲೆಗಳಿಂದ ಕಟ್ಟಿದ ಚಿಕ್ಕ ಮನೆಗಳಂತೆ ಇದ್ದು, ಆಶ್ರಯಗಳನ್ನು ಪೂರ್ವಸಿದ್ಧತೆ ಇಲ್ಲದೆ ಒದಗಿಸುತ್ತವೆ.

**ಪಂಪ–ಸ್ವರ್ಗ:**

ಪವಿತ್ರವಾದ ಪಂಪನ ಕಥೆ ಎಲ್ಲರಿಗೂ ತಿಳಿದಿರುವುದೇ. ಅಂಥ ಸುಂದರವಾದ ಮತ್ತು ನೋವನ್ನು ಕಡಿಮೆ ಮಾಡಿ ಸಂತೈಸುವಂಥ ನದಿ, ಅಂಥ ಘೋರ ಅರಣ್ಯದ ನಡುವೆ ಇದೆ ಎಂದರೆ ನಂಬಲಸಾಧ್ಯ. ಪಂಪಾನದಿ ದಡದಲ್ಲಿ ಆತ್ಮಗಳು

ಬಂದು ಕಾಣಿಕೆಗಳನ್ನು ಆಹುತಿಗಳನ್ನು ದೈಹಿಕವಾಗಿ ಸ್ವೀಕರಿಸುತ್ತವೆ ಎನ್ನಲಾಗಿದೆ. ನೀರು ಸ್ವಚ್ಛವಾಗಿ, ಶುಭ್ರವಾಗಿ ಮತ್ತು ಉಲ್ಲಾಸಕರವಾಗಿ ಇರುತ್ತದೆ. ಆ ಮಂಜಿನಂತೆ ಕೊರೆಯುವ ತಣ್ಣೀರಿನಲ್ಲಿ ಸ್ನಾನ ಮಾಡಿದ ನಂತರ, ಯಾತ್ರಿಕರಿಗೆ ಪ್ರಯಾಣದ ದಣಿವಿನ ಅನುಭವವೇ ಆಗುವುದಿಲ್ಲ ಎಂದರೆ ಅದೇನೂ ಉತ್ಪ್ರೇಕ್ಷೆ ಅಲ್ಲ. ವೈಜ್ಞಾನಿಕವಾಗಿ ಹೇಳಬೇಕೆಂದರೆ, ಆ ನೀರಿನಲ್ಲಿ ಉತ್ತೇಜಿಸುವ ಪ್ರಭಾವ ಹೇಗೆ ಬಂದಿದೆ ಎಂದರೆ, ನದಿ ನೀರು ಸುತ್ತಮುತ್ತಲಿನ ಔಷಧೀಯ ಗಿಡಗಳನ್ನು ಬಳಸಿ ಬರುತ್ತದೆ, ಮತ್ತು ಆ ನೀರು, ಯಾತ್ರಿಕರು ಸೇರುವ ಸ್ಥಳಕ್ಕೆ ಬರುವವರೆಗೆ, ಯಾರಿಂದಲೂ ಕಲುಷಿತಗೊಳಿಸಲ್ಪಟ್ಟಿರುವುದೂ ಇಲ್ಲ.

ಪುರಾಣಗಳು ಹೇಳುವುದು, ಭಗವಂತನೇ ಮಣಿಕಂಠನಾಗಿ ಆ ನದಿಯ ದಡಗಳ ಮೇಲೆ ಪಂತಲಂನ ರಾಜ ರಾಜಶೇಖರನಿಗೆ ಮೊದಲು ಕಾಣಿಸಿಕೊಂಡ ನೆಂತಲೇ ಹೌದು. ಭಗವಂತನೇ ಪಂಪಾನದಿ ನೀರು ಗಂಗೆಯಷ್ಟೇ ಶ್ರೇಷ್ಠವಾದದ್ದು ಮತ್ತು ಶಬರಿಮಲೈ ಕಾಶಿಯಷ್ಟೇ ಪವಿತ್ರವಾದದ್ದು ಎಂದು ಹೇಳಿದ್ದಾನೆ. ಸಮಪ್ರದೇಶದಿಂದ ಒಂದೂವರೆ ಕಿ.ಮೀ. ಎತ್ತರದಲ್ಲಿ ಕಲ್ಲರ್ ಮತ್ತು ಪಂಪಾನದಿಗಳು ಸೇರಿವೆ. ಆ ಸಂಗಮವನ್ನು 'ತ್ರಿವೇಣಿ' ಎನ್ನುತ್ತಾರೆ.

ಆ ಸ್ಥಳದಲ್ಲಿ ಮುಂಜಾನೆ ಮತ್ತು ಮುಸ್ಸಂಜೆಗಳ ದೃಶ್ಯ ಅದ್ಭುತವಾದದ್ದು. ಮೊದಲು ಉದ್ದನೆಯ ಚಿನ್ನದ ಬಾಣಗಳು ಆಕಾಶವನ್ನು ಹಾದುಹೋಗುತ್ತವೆ, ಕತ್ತಲೆಯನ್ನು ಓಡಿಸುತ್ತಾ. ನಂತರ ಆ ಚಿನ್ನದ ಬಾಣಗಳು, ಬೆಳ್ಳಿಯ ಬಾಣಗಳಾಗಿ ಬದಲಾಗುತ್ತವೆ. ಕಡೆಗೆ ಸೂರ್ಯ, ತನ್ನ ಸಾರ್ವಭೌಮತ್ವದೊಂದಿಗೆ ಹುಟ್ಟಿ ಬಂದು, ಆ ಮಬ್ಬನ್ನು ಚದುರಿಸುತ್ತಾನೆ. ನಾವು ಆರಾಮವಾಗಿ ಮಂಚದ ಮೇಲೆ ಎಚ್ಚೆತ್ತೇ ಮಲಗಿದ್ದರೂ, ನಾವು ಗಡಿಯಾರದ ಮುಳ್ಳಿನ ಶಬ್ದ ಕೇಳಿಸಿಕೊಳ್ಳುತ್ತಾ, ಏನಾದರೂ ಶಬ್ದವಾಯಿತೆಂದರೆ ತಟಕ್ಕನೆ ಎದ್ದು ಸುತ್ತಲೂ ನೋಡಿ, ನಂತರ, ಏನೂ ಕೆಟ್ಟದ್ದಾಗಿಲ್ಲವೆಂಬ ಸಮಾಧಾನದಿಂದ ಮತ್ತೆ ಮಲಗುತ್ತೇವೆ. ಆಗ ಮನಸ್ಸು ಕೆಲಸ ಮಾಡುತ್ತಿರುತ್ತದೆ. ರಾತ್ರಿ ಪೂರ್ತಿ ಬೇಡದ ಭಾವನೆಗಳೇ ನಮ್ಮ ತಲೆಯಲ್ಲಿ ತುಂಬಿದ್ದು, ಬೆಳಗಾಗುವುದನ್ನೇ ಕಾಯುತ್ತಿದ್ದು, ನಾವು ನಮ್ಮ ಆತಂಕಗಳನ್ನು ಕೊನೆಗಾಗಣಿಸಲಿಷ್ಟ ಪಡುತ್ತೇವೆ. ಮನೆಯಲ್ಲಿ ಆರಾಮವಾಗಿ ಇರುವಾಗಲೇ ಈ ಸ್ಥಿತಿಯಾದರೆ, ಅಷ್ಟೊಂದು ಜನ ಯಾತ್ರಿಕರು ಆಕಾಶದ ಕೆಳಗೆ ಮಲಗಿ, ಕಾಡಿನಲ್ಲಿ, ಎಲ್ಲಾ ರೀತಿಗಳ ಕೆಟ್ಟ ಶಬ್ದಗಳೂ ಮತ್ತು ಪ್ರಾಣಘಾತಕ ಪ್ರಾಣಿಗಳೂ ತುಂಬಿರುವಾಗ, ಎಲ್ಲಾ ಶಬ್ದಗಳನ್ನೂ ಕೇಳಿಸಿಕೊಳ್ಳಬೇಕು ಎಂದರೆ, ಅದೆಷ್ಟು ಕಷ್ಟದ ಕೆಲಸ ಅಲ್ಲವೇ? ಆದರೂ ಅಲ್ಲಿ ಅವರು ಭಗವಂತನ ಕೋಮಲ ರಕ್ಷಣೆಯಲ್ಲಿ ರಾತ್ರಿ ನಿದ್ರಿಸುತ್ತರೆ. ಅವರೂ ಬೆಳಗಾಗುವುದನ್ನೇ ಕಾಯುತ್ತಿರುತ್ತಾರೆ. ಆದರೆ ಕೆಟ್ಟ ಯೋಚನೆಗಳಲ್ಲಿ ಮುಳುಗಿರದೆ,



ಭಗವಂತನಲ್ಲೇ ಆಶ್ರಯ ಪಡೆಯುವ ಭಾವನೆಯಿಂದ, ಅವನ ದಯೆ ಹಾಗೂ ರಕ್ಷಣೆಯಲ್ಲಿ ಪೂರ್ಣ ಶ್ರದ್ಧೆ ಇಟ್ಟು ಪ್ರಾರ್ಥಿಸುತ್ತಿರುತ್ತಾರೆ.

ಸೂರ್ಯಾಸ್ತವಾದಾಗ ಅದೇ ಬೇರೆ ರೀತಿಯದಾಗಿರುತ್ತದೆ. ಆ ದೂರದ ಸ್ಥಳದಲ್ಲಿ ಮುಸ್ಸಂಜೆ ಇರುವುದಿಲ್ಲ. ಸಂಜೆ ತಣ್ಣಗಾಗುತ್ತಲೇ ಹೋಗುತ್ತಿದ್ದು, ಕಡೆಗೆ ಇದ್ದಕ್ಕಿದ್ದಂತೆ, ಸೂರ್ಯ, ಎತ್ತರ ಮರಗಳ ಹಿಂದೆ ಮತ್ತು ಕತ್ತಲೆಯಲ್ಲಿ ಮಾಯವಾಗುತ್ತಾನೆ. ಆಗ ಕತ್ತಲೆಯೋ ಕತ್ತಲೆ– ಕಗ್ಗತ್ತಲು.

ಆ ಪಂಪಾ ನದಿ ತೀರದಲ್ಲಿ ಮೂರರಿಂದ ನಾಲ್ಕು ದಿನಗಳನ್ನು ಕಳೆಯುವವರೂ ಇರುತ್ತಾರೆ. ಆ ಸ್ಥಳ ಸುಂದರವಾಗಿದ್ದು, ಪವಿತ್ರವಾಗಿರುವುದರಿಂದ, ಯಾರೂ ಪಶ್ಚಾತ್ತಾಪ ಪಡದೆ ಅಲ್ಲಿಂದ ಹೊರಡುವುದೇ ಇಲ್ಲ. ಆ ನದಿಯ ದಡದಲ್ಲಿ ತಲೆಗಳ ಸಾಗರ ಕಂಡುಬರುತ್ತದೆ. ತಾತ್ಕಾಲಿಕ ತಂಗುದಾಣಗಳೂ ಇದ್ದು, ಕೆಲವು ಸುಧಾರಿತ ಅಡುಗೆ ಮನೆಗಳಿಂದ ಹೊಗೆ ಬರುತ್ತಿರುತ್ತದೆ. ಆದರೆ ಮತ್ತೊಂದು ದಡ ಖಾಲಿ ಇರುತ್ತದೆ. ಮಕರ ಜ್ಯೋತಿಯ ದರ್ಶನಕ್ಕೆ ಎರಡು ದಿನಗಳ ಮುಂಚೆ ಈ ಸ್ಥಳ, ಎಂದರೆ ಕೇವಲ ಕಾಡಾನೆಗಳು, ಚಿರತೆಗಳ ಮನೆಯಾಗಿರುವ ಸ್ಥಳ, ಒಂದು ವಾಸ್ತವವಾದ ನಗರ– ಆಗಿ, ಎಲ್ಲೆಲ್ಲಿಯೂ ಎಂದರೆ ಎಪ್ಪತ್ನಾಲ್ಕು ಘಂಟೆಗಳವರೆಗೂ ನಾಮಜಪ ನಡೆಯುವ ಸ್ಥಾನವಾಗಿರುತ್ತದೆ. ವಿಶ್ವದಲ್ಲಿ ಎಲ್ಲಿಯಾದರೂ ಈ ರೀತಿಯ ಸ್ಥಳವಿದ್ದು, ಅಲ್ಲಿ ಭಗವಂತನ ಮಕ್ಕಳೆಲ್ಲರೂ ಇಷ್ಟು ಲಕ್ಷಣವಾಗಿ ಸಹೋದರಭಾವ ವ್ಯಕ್ತಪಡಿಸುವರೇ ಎಂದು ಆಶ್ಚರ್ಯಪಡುವಂತಾಗುತ್ತದೆ. ಆ ಗುಂಪಿನಲ್ಲಿ, ವಿವಿಧ ಸಾಮಾಜಿಕ ಅಂತಸ್ತು ಮತ್ತು ಶ್ರದ್ಧೆಯುಳ್ಳವರು ಹೆಂಗಸರು, ಗಂಡಸರು ಎಂಬ ಭೇದವಿಲ್ಲದವರು, ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವವರು, ಪರಸ್ಪರ ಸಹಾಯ ಮಾಡುವವರು, ಎಲ್ಲವನ್ನೂ ಗಮನಿಸಿದರೆ, ಅವರೆಲ್ಲರೂ ಹುಟ್ಟಿನಿಂದಲೇ ಸ್ನೇಹಿತರಾಗಿರಬಹುದೇ ಎನ್ನಿಸುತ್ತದೆ.

**ಪಂಪ ವಿಳಕ್ಕು:**

ಮಕರ ಸಂಕ್ರಾಂತಿಗೆ ಒಂದು ದಿನ ಹಿಂದೆ ಮಕರ ವಿಳಕ್ಕು ಬಂದಿರುತ್ತಾನೆ ಎನ್ನಲಾಗಿದೆ. ಆದ್ದರಿಂದ ಎಲ್ಲಾ ತಂಗುದಾಣಗಳಲ್ಲಿಯೂ, ದೀಪಗಳು ಮತ್ತು ಮೋಂಬತ್ತಿಗಳು ಉರಿಯುತ್ತಿರುತ್ತವೆ.

ಚಿಕ್ಕ ದೋಣಿಗಳನ್ನು ದೀಪಗಳಿಂದ ಶೃಂಗರಿಸಿ, ನದಿಯ ಮೇಲೆ ತೇಲಿಸುತ್ತಾರೆ. ದೂರದಿಂದ ನೋಡಿದಾಗ, ಪ್ರಕೃತಿ ಮಾತೆ, ಆ ಸ್ಥಲವನ್ನು ಸುಂದರವಾದ ಹೊಳೆಯುವ ಹೂವುಗಳ ಮಾಲೆಯಿಂದ ಆಶೀರ್ವದಿಸಿದ್ದಾಳೆಯೋ ಎನ್ನಿಸುತ್ತದೆ.

ಮಕರ ಸಂಕ್ರಾಂತಿಯ ದಿನ (ಮಕರ ವಿಳಕ್ಕು) ಯಾತ್ರಿಕರು ಪೂಜೆ ಮಾಡುತ್ತಾರೆ,

ಮತ್ತು ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ. ನಂತರ ಒಲ್ಲದ ಮನಸ್ಸಿನಿಂದಲೋ ಎಂಬಂತೆ, ದೇವಸ್ಥಾನದ ಕಡೆಯ ಘಟ್ಟವನ್ನು ತಲುಪಲು ಹತ್ತಲಾರಂಭಿಸುತ್ತಾರೆ.

ಎರುಮೇಲಿಯಿಂದ ಪಂಪದವರೆಗೆ ಯಾತ್ರಿಕರು, ತಮ್ಮ ವೈಯಕ್ತಿಕ ಗುಂಪುಗಳನ್ನು, ದೊಡ್ಡ ಗುಂಪುಗಳಾಗಿ ಮಾಡಿ ಕಳುಹಿಸಿ, ವಿವಿಧ ಸ್ಥಳಗಳಲ್ಲಿ ಇಳಿದುಕೊಳ್ಳಲು ಅನುಕೂಲತೆಗಳನ್ನು ಮಾಡಿಸುತ್ತಾರೆ. ಆದರೆ ಪಂಪದಿಂದ ಮುಂದೆ, ಎಲ್ಲರೂ ಚಿಕ್ಕ ಗುಂಪುಗಳಲ್ಲೇ ಹೋಗುತ್ತಾರೆ.

ಆಗ ಅವರ ಮುಂದಿರುವ ಕೆಲಸ ನೀಲಿ ಪರ್ವತವನ್ನು ಹತ್ತುವುದು. ಭವ್ಯವಾದ ನೀಲಿ ಪರ್ವತ, ಅಝುತ್ತ ಮತ್ತು ಕರಿಮಲಕ್ಕೆ ಹೋಲಿಸಿದರೆ, ಪರ್ವತಗಳ ಚಕ್ರವರ್ತಿಯೇನೋ ಎಂಬಂತೆ ನಿಂತಿರುತ್ತದೆ. ನೀಲಿ ಬೆಟ್ಟ, ಬಹಳ ಎತ್ತರದ, ಕಡಿದಾದ, ಜಾರುವ ಪರ್ವತ. ಇದನ್ನು ಹತ್ತುವುದು, ಹಿಂದಿನೆರಡು ಬೆಟ್ಟಗಳನ್ನು ಹತ್ತಿದ್ದುದ್ದಕ್ಕಿಂತಲೂ, ಬಹಳ ಕಷ್ಟದ ಕೆಲಸ. ಆದರೂ ಯಾತ್ರಿಕರು ನಿಧಾನವಾಗಿ ನಡೆಯುತ್ತಾ, ಒಬ್ಬರ ಹಿಂದೆ ಒಬ್ಬರಂತೆ ಹೋಗುತ್ತಾ 'ಶಬರಿ ಪೀಠಂ' ತಲುಪುತ್ತಾರೆ. ಇದೇ ಸ್ಥಳದಲ್ಲಿ ರಾಮಾಯಣದ ಶಬರಿ, ತಪಸ್ಸು ಮಾಡಿ, ಭಗವಂತನಿಂದ ನಿರ್ವಾಣ ಪಡೆದಳು. ಭಗವಂತ ಆಗ ಅವಳ ಮುಂದೆ ಭಗವಂತ ಧರ್ಮಶಾಸ್ತನಾಗಿ ಕಾಣಿಸಿ ಕೊಂಡಿದ್ದನು.

ಇದೇ ಸ್ಥಳದ ಹತ್ತಿರದಲ್ಲಿ ಪೊನ್ನಂಪಲ ಮೇಡು ಎಂಬ ಸ್ಥಳವಿದೆ. ಭಗವಂತ ಕರಡಿಯ ಹಾಲನ್ನು ಹುಡುಕಿಕೊಂಡು ಬಂದಾಗ, ಹಿರಿಯ ಋಷಿಗಳು, ತಮ್ಮ ತಾಪಸಿಕ ಶಕ್ತಿಯಿಂದ ಭಗವಂತನನ್ನು ಕೂಡಿಸಲೆಂದು ಒಂದು ಚಿನ್ನದ ದೇವಸ್ಥಾನವನ್ನು ಸೃಷ್ಟಿಸಿದರು. ಅಲ್ಲಿ ನಿಂತು, ನಾವು ಸುತ್ತಲೂ ನೋಡಿದರೆ, ಒಂದು ಅದ್ಭುತವಾದ ಸಮಗ್ರ ದೃಶ್ಯವೇ ನಮ್ಮ ಕಣ್ಣಿಗೆ ಕಾಣಿಸುತ್ತದೆ. ಹಸಿರು ಕಣಿವೆಗಳು, ಆಳವಾದ ಕಂದಕಗಳು, ಬೃಹತ್ತಾದ ಪರ್ವತಗಳು ನಾಲ್ಕೂ ಕಡೆ ಕಾಣಿಸುವುದರೊಂದಿಗೆ, ಕಾಡಿನ ಜೀವನವೂ ಕಾಣಿಸುತ್ತದೆ. ಎಂದರೆ ಬೇರೆ ಎಲ್ಲಿಯೂ ಕಾಣಸಿಗದಂಥ ದೃಶ್ಯ ಕಂಡುಬರುತ್ತದೆ. ಅಂಥ ಭಾವನೆಗಳು ಅಲ್ಲಿಗೆ ಪಿಕ್‌ನಿಕ್‌ಗಾಗಿ ಬಂದವರಿಗೆ ಅಥವಾ ಆನಂದಕ್ಕಾಗಿ ಬಂದವರಿಗೆ ಉಂಟಾಗಲು ಸಾಧ್ಯ. ಆದರೆ ಯಾತ್ರಿಕರಿಗೆ ಅಂಥ ಸೆಳೆತಗಳಿಂದ ಆನಂದ ಉಂಟಾಗುವುದಿಲ್ಲ. ಏಕೆಂದರೆ ಅವರ ಹೃದಯಗಳೆಲ್ಲಾ ಭಗವಂತನ ದೇವಸ್ಥಾನದ ಕಡೆಗಿರುತ್ತವೆ. ಹಾಗಾಗಿ ಅವರು ಸಮಯ ವ್ಯರ್ಥ ಮಾಡದೆ ಮುಂದೆ ನಡೆಯುತ್ತಿರುತ್ತಾರೆ.

ಇಲ್ಲಿಂದ ಮುಂದೆ ಅರ್ಧ ಘಂಟೆ ನಡೆದರೆ, ಸಮನಾದ ನೆಲದ ಮೇಲೆ ಇರುವುದು ಸರಂಕುಟ್ಟಿಯಾಲು. ಅದೇ ಸ್ಥಳವನ್ನು ಪಂತಲಮ್‌ನ ರಾಜ, ಭಗವಂತನ ದೇವಸ್ಥಾನ ಕಟ್ಟಲು ಸೂಕ್ತವೆಂದು ತನ್ನ ದಿವ್ಯದೃಷ್ಟಿಯಿಂದ ಕಂಡಿದ್ದನು. ಆದರೆ



ಅಲ್ಲಿ ಈಗ ಅಶ್ವತ್ಥ ವೃಕ್ಷ ಇಲ್ಲ. ಆದರೂ ಅದೊಂದು ದಿವ್ಯವಾದ ಪವಿತ್ರವಾದ ಸ್ಥಳ ಎಂದೇ ಎಲ್ಲರ ಭಾವನೆ.

ಸರಂಕುಟ್ಟಿಯಾಲುವಿನಿಂದ ಕೇವಲ ಹತ್ತು ನಿಮಿಷಗಳು ನಡೆದರೆ ದೇವಸ್ಥಾನ ಸಿಕ್ಕುತ್ತದೆ. ಅದು ಸರಂಕುಟ್ಟಿಯಾಲುವಿನಿಂದಲೂ ಕಾಣಿಸುತ್ತದೆ. ಆ ದೇವಸ್ಥಾನ ಕಂಡ ತಕ್ಷಣ, ಯಾತ್ರಿಕರೆಲ್ಲರ ಮೈ ನವಿರೇಳುತ್ತದೆ.

ನಂತರ ಅವರು ಪವಿತ್ರವಾದ ಹದಿನೆಂಟು ಮೆಟ್ಟಿಲುಗಳನ್ನು ತಲುಪುತ್ತಾರೆ. ಅಲ್ಲಿಗೆ ತಲುಪಿದ ನಂತರವೂ, ಯಾತ್ರಿಕರು ತಮ್ಮ ಇರುಮುಡಿಯನ್ನು ತಲೆಯ ಮೇಲೇ ಹೊತ್ತಿದ್ದು ಭಗವಂತನ ದರ್ಶನವಾಗುವವರೆಗೆ ಕಾಯಬೇಕು, ಎಷ್ಟೇ ಹೊತ್ತಾದರೂ ಸರಿ ಎಂಬ ಸಂಪ್ರದಾಯವಿದೆ.

**ಪವಿತ್ರವಾದ ಹದಿನೆಂಟು ಮೆಟ್ಟಿಲುಗಳು:**

ದೇವಸ್ಥಾನ ಸುಮಾರಾಗಿ ಎತ್ತರದಲ್ಲೇ ಇದೆ. ಆದ್ದರಿಂದ ಯಾತ್ರಿಕರು ಅದನ್ನು ತಲುಪಲು ಹದಿನೆಂಟು ಮೆಟ್ಟಿಲುಗಳನ್ನು ಹತ್ತಿ ಹೋಗಿ, ಅಲ್ಲಿ ಸ್ವಾಮಿಯ ದರ್ಶನ ಮಾಡಬೇಕು. ಈ ಹದಿನೆಂಟು ಮೆಟ್ಟಿಲುಗಳು ಪವಿತ್ರವಾದ ಮೆಟ್ಟಿಲುಗಳು. ಅವುಗಳು ಏನನ್ನು ಪ್ರತಿನಿಧಿಸುತ್ತವೆ ಎಂಬುದನ್ನು ನಾವು ಮೊದಲೇ ತಿಳಿಸಿದ್ದೇವೆ. ಯಾರು ಈ ಕಟ್ಟುನಿಟ್ಟುಗಳನ್ನು ಪಾಲಿಸುವುದಿಲ್ಲವೋ ಅವರು ಈ ಮೆಟ್ಟಿಲುಗಳನ್ನು ಹತ್ತಲು ಯೋಗ್ಯರಲ್ಲ, ಎನ್ನಬಹುದು.

ಮೊದಲನೆಯ ಮೆಟ್ಟಿಲಿನ ಮುಂದೆ ಬಂದು ಯಾತ್ರಿಕರು ನಮಸ್ಕರಿಸುವಾಗ ಅವರ ಹೃದಯಗಳು ಹೊಡೆದುಕೊಳ್ಳುತ್ತಿರುತ್ತವೆ. ಆನಂದದಿಂದ ಕಣ್ಣುಗಳು ನೀರಿನಿಂದ ತುಂಬಿಲ್ಲದೆ ಇರುವುದು ಅಪರೂಪ. ನಿಧಾನವಾಗಿ ಅವರು ಮೆಟ್ಟಿಲುಗಳನ್ನು ಹತ್ತುತ್ತಾರೆ, ಒಂದೊಂದಾಗಿ. ಅವರ ಯಾತ್ರೆ ಎಷ್ಟನೆಯದೋ ಆ ಮೆಟ್ಟಿಲಿನಲ್ಲಿ ತಾವು ತಂದ ತೆಂಗಿನಕಾಯಿ ಒಡೆಯುತ್ತಾರೆ. ಹದಿನೆಂಟನೆಯ ಮೆಟ್ಟಿಲಿನ ಮೇಲೆ ನಿಂತು, ಅವರು ಭವ್ಯ ಸ್ವಾಮಿಯನ್ನು ನೋಡುತ್ತಾರೆ.

ಹದಿನೆಂಟು ಮೆಟ್ಟಿಲುಗಳನ್ನು ಹತ್ತಿದ ಮೇಲೆ, ಅವರು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹೋಗಿ, ಮೊದಲು ಗಣೇಶನ ದರ್ಶನ ಮಾಡಿ, ನಂತರ ಸ್ವಾಮಿ ಕಾರ್ತಿಕೇಯನ ದರ್ಶನ ಮಾಡಿ, ಕಡೆಯಲ್ಲಿ ಭಗವಂತ ಧರ್ಮಶಾಸ್ತನ ದರ್ಶನ ಮಾಡುತ್ತಾರೆ. ಅವನ ದರ್ಶನಕ್ಕಾಗಿಯೇ ಅಲ್ಲವೇ, ಅವರು ಅಷ್ಟೆಲ್ಲಾ ಕಷ್ಟಪಟ್ಟು, ನೋವುಗಳನ್ನೂ ಸಹಿಸಿಕೊಂಡು ಬಂದದ್ದು. ಸ್ವಾಮಿ ಧರ್ಮಶಾಸ್ತನ ದರ್ಶನ ಮಾತ್ರದಿಂದ ಅವರ ಮೈ ನವಿರೇಳುತ್ತದೆ. ಅವರ ಹೃದಯಗಳಲ್ಲಿ ಆನಂದ ತುಂಬಿ ತುಳುಕಾಡುತ್ತದೆ. ಅವರ ಕಣ್ಣುಗಳಿಂದ ಆನಂದಾಶ್ರುಗಳು ಹರಿಯಲಾರಂಭಿಸುತ್ತವೆ.

ನಂತರ ನಿಧಾನವಾಗಿ ಅವರೆಲ್ಲರೂ ತಮ್ಮ ತಮ್ಮ ಶಿಖರಗಳಿಗೆ ಹೋಗುತ್ತಾರೆ. ಅವೂ ಅಲ್ಲೇ ಅಕ್ಕಪಕ್ಕದಲ್ಲಿರುತ್ತವೆ.

ಈಗ ಉಳಿದಿರುವ ಕೆಲಸವೆಂದರೆ ತೆಂಗಿನಕಾಯಿಯಿಂದ ಹೊರಕ್ಕೆ ತೆಗೆದ ತುಪ್ಪದಿಂದ ಅಭಿಷೇಕ ಮಾಡುವುದು. ಅದನ್ನು ಅವರೆಲ್ಲರೂ ತಮಗೆ ಅನುಕೂಲವಾದ ರೀತಿಯಲ್ಲಿ ಮಾಡಿ ಮುಗಿಸುತ್ತಾರೆ.

ಮೇಲೆ ಹದಿನೆಂಟನೆಯ ಮೆಟ್ಟಿಲಿನ ಎದುರಿಗೆ, ಕರ್ಪೂರವು ಹಗಲೂ–ರಾತ್ರಿ ಉರಿಯುತ್ತಿರುವುದು, ಆ ದಿನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯ. ಮಕರ ಸಂಕ್ರಾಂತಿಯ ದಿನವಂತೂ, ಸಾವಿರಾರು ರೂಪಾಯಿಗಳು ಬಾಳುವಷ್ಟು ಕರ್ಪೂರ ಉರಿದಿರುತ್ತದೆ. ಅಂಥ ದೃಶ್ಯ ಕಂಡುಬರುವ ದೇವಸ್ಥಾನ ಬೇರೆ ಯಾವುದಾದರೂ ಇದೆಯೇ?

ದೇವಸ್ಥಾನ ಕೂಡ ಚಿಕ್ಕದೇ. ಅದರ ಪ್ರಾಂಗಣದಲ್ಲಿ ಹೆಚ್ಚೆಂದರೂ ಎರಡು ಸಾವಿರ ಜನರಿಗೆ ಮಾತ್ರ ಸ್ಥಳವಿರುತ್ತದೆ. ಆದರೆ ಆ ಸಂದರ್ಭದಲ್ಲಿ ಬೇರೆ ಬೇರೆ ದಿಕ್ಕುಗಳಿಂದ ಹತ್ತು ಲಕ್ಷಕ್ಕಿಂತ ಹೆಚ್ಚು ಮಂದಿ ಬಂದು ಸೇರಿರುತ್ತಾರೆ. ಜೊತೆಗೆ ಎಲ್ಲರೂ ತಮ್ಮ ಹೃದಯಕ್ಕೆ ತೃಪ್ತಿಯಾಗುವಂತೆ ಭಗವಂತನ ದರ್ಶನ ಮಾಡಿ ಹಿಂದಿರುಗುತ್ತಾರೆ.

ಸಂಜೆ ಆಗುತ್ತಿದ್ದಂತೆ, ಭಗವಂತನೇ ತನ್ನ ಮಕರಜ್ಯೋತಿ ಹಚ್ಚುತ್ತಾನೆ. ಭಕ್ತರು ಆ ಜ್ಯೋತಿ ಹತ್ತಿದ ನಂತರ, ಭಗವಂತನ ದರ್ಶನ ಮಾಡುತ್ತಾರೆ. ಅದೇ ಹೊತ್ತಿನಲ್ಲಿ, ಈಶಾನ್ಯ ದಿಕ್ಕಿನಲ್ಲಿ ದಿಗಂತದಲ್ಲಿ ವರ್ಣಿಸಲಸಾಧ್ಯವಾದ ಪ್ರಕಾಶವುಳ್ಳ ಜ್ಯೋತಿ ಕಾಣಿಸುತ್ತದೆ. ಅದನ್ನು ಕಾಂತಮಾಲ ಎನ್ನುತ್ತಾರೆ. ಅದರಲ್ಲಿ ಭಗವಂತನೇ ಜ್ಯೋತಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಮಕರ ಸಂಕ್ರಾಂತಿ ದಿನ, ಪರಮಾತ್ಮ ಕಾಂತಮಾಲದಿಂದ ಶಬರಿಮಲೈಗೆ ಇಳಿದು ಬಂದು ಭಕ್ತರನ್ನು ಸ್ವಾಗತಿಸಿ, ಆಶೀರ್ವದಿಸುತ್ತಾನೆ ಎಂಬ ನಂಬಿಕೆ ಇದೆ.

ಸ್ವಾಮಿಗೆ ಅಭಿಷೇಕ ಮಾಡಿದ ನಂತರ, ಯಾತ್ರಿಕರು, ಮಲಿಕಾಪ್ಪುರಂಗೆ ಎಂದರೆ, ಭಗವಂತನ ಶಕ್ತಿಯ ಗುಡಿಗೆ ಹೋಗಿ, ಅಲ್ಲಿ ತಮ್ಮ ಕಾಣಿಕೆಗಳನ್ನು ಅರ್ಪಿಸುತ್ತಾರೆ. ಅಲ್ಲಿ ಅವರು ತಮ್ಮ ಅಭ್ಯಾಸದ ಪ್ರಾರ್ಥನೆಗಳನ್ನು ಹೇಳಿಕೊಂಡು, ತಾವು ತಂಗಿದ ಸ್ಥಳಕ್ಕೆ ಹಿಂದಿರುಗುತ್ತಾರೆ.

ಪ್ರಸಾದ ಸ್ವೀಕರಿಸಿದ ನಂತರ, ಯಾತ್ರಿಕರು, ಒಬ್ಬೊಬ್ಬರಾಗಿ ಆ ಹದಿನೆಂಟು ಮೆಟ್ಟಿಲುಗಳನ್ನೂ ಇಳಿಯುತ್ತಾರೆ. ಹಾಗೆ ಇಳಿಯುವಾಗ ಸ್ವಾಮಿಯ ಕಡೆಗೆ ಮುಖ ಮಾಡಿಕೊಂಡು ಹಿಂದೆ ಹೆಜ್ಜೆ ಹಾಕುತ್ತಾ ಇಳಿಯುತ್ತಾರೆ. ನಂತರ ಅವರೆಲ್ಲರೂ ತಮ್ಮ ಸಾಂಸಾರಿಕ ಜೀವನ ಮುಂದುವರಿಸಲು ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ.

ಹೆಚ್ಚಿನವರು ಅದೇ ದಿನ ರಾತ್ರಿ, ಅಲ್ಲಿಂದ ಹೊರಟು, ಮರುದಿನ ಏರುಮೇಲಿ



ತಲುಪುತ್ತಾರೆ. ವಾಪಸ್ಸು ಬರಲು, ಮೌಂಟ್ ಎಸ್ಟೇಟ್ ಮತ್ತು ವಂದಿಪೆರಿಯಾನ್‌ನ ಮೂಲಕ ವಾಪಸ್ಸು ಬರಬಹುದು. ಈ ಮಾರ್ಗದಲ್ಲಿಯೂ, ದಟ್ಟವಾದ ಕಾಡಿನಲ್ಲಿ ನಾಲ್ಕರಿಂದ ಐದು ಮೈಲಿಗಳು ಎಂದರೆ ಸುಮಾರು ಎಂಟು ಕಿ.ಮೀ.ಗಳ ಮಾರ್ಗವನ್ನು ಹತ್ತಿಕೊಂಡೇ ಬರಬೇಕು. ನಂತರ ದೊಡ್ಡ ಹುಲ್ಲುಗಾವಲು ಎದುರಾಗುತ್ತದೆ. ಹುಲ್ಲಿನ ಮೇಲೆ ನಡೆಯುವುದೇ ಸುಸ್ತಾಗಿಸುತ್ತದೆ. ಸುಮಾರು ಹತ್ತು ಕಿ.ಮೀ.ಗಳಷ್ಟು ನಡೆದ ನಂತರ, ಯಾತ್ರಿಕರು ಛತ್ರದ ಬಳಿಗೆ ಬರುತ್ತಾರೆ. ಆ ಸಮಯದಲ್ಲಿ, ಸಾರ್ವಜನಿಕ ವಾಹನಗಳು ಸಾಕಷ್ಟು ಇದ್ದು, ಜನರನ್ನು ಅವರವರ ಊರುಗಳಿಗೆ ತಲುಪಿಸುತ್ತವೆ.

ಕಾಡಿನ ಆ ದೇವಸ್ಥಾನದಲ್ಲಿ, ಹಾಗೆ ಕೋಟ್ಯಾಂತರ ಮಂದಿ ಯಾತ್ರಿಕರನ್ನು ಸೆಳೆಯುವ ಆ ಶಕ್ತಿಯುತವಾದ ಅಯಸ್ಕಾಂತದಂಥ ಶಕ್ತಿ ಏನಿದೆ ಎಂದು, ಅಷ್ಟೊಂದು ಜನ, ಅಪಾರ ಶಕ್ತಿ ಪರೀಕ್ಷೆಗಳನ್ನು ಮತ್ತು ತೊಂದರೆಗಳನ್ನು ಸಹಿಸಿಕೊಂಡು, ವಾತಾವರಣವನ್ನು ಎದುರಿಸಿ, ಕಾಡು ಪ್ರಾಣಿಗಳ ಅಪಾಯಗಳ ಭಯವನ್ನೂ ಲೆಕ್ಕಿಸದೆ ಹೋಗುತ್ತಾರೆ ಎಂದು ಯಾರಾದರೂ ಆಶ್ಚರ್ಯ ಪಡಬಹುದು. ಆದರೆ, ಭಗವಂತನೇ ಹೇಳಿಲ್ಲವೇ:–

**ಅನನ್ಯಾಶ್ಚಿಂತಯಂತೋ ಮಾಮ್ ಯೇ ಜನಾಃ ಪರ್ಯುಪಾಸತೇ।**
**ತೇಷಾಂ ನಿತ್ಯಾಭಿಯುಕ್ತಾನಾಮ್ ಯೋಗಕ್ಷೇಮಂ ವಹಾಮ್ಯಹಂ॥**

**ವಿವರಣಾತ್ಮಕ ಚಿತ್ರಗಳು:**

೧. **ಪಂಪ–** ಸ್ವರ್ಗ. ಈ ಪವಿತ್ರ ನದಿಯ ದಡದಲ್ಲಿಯೇ, ಭಗವಂತನನ್ನು ಮಣಿಕಂಠನನ್ನಾಗಿ, ಪಂತಾಳಂನ ರಾಜ ರಾಜಶೇಖರ, ಮೊದಲು ನೋಡಿದ್ದು.

೨. **ಕೆಟ್ಟುನಿರ–** 'ಇರುಮುಡಿ'ಯನ್ನು ತುಂಬಿಸುವುದು. (ಒಂದು ಹತ್ತಿಯ ದಾರದ ಚೀಲದಲ್ಲಿ ಎರಡು ಭಾಗಗಳಿರುತ್ತವೆ) ಎಂದರೆ ತುಪ್ಪ ತುಂಬಿಸಿದ ತೆಂಗಿನಕಾಯಿ ಮತ್ತು ಭಗವಂತನಿಗೆ ಅರ್ಪಿಸಬೇಕಾದ ಇತರ ಕಾಣಿಕೆಗಳು.

೩. **ಪಂಪಾನದಿ ತೀರದಲ್ಲಿ ಯಾತ್ರಿಕರು–** ಅವರು ಬೊಂಬುಗಳು ಮತ್ತು ಎಲೆಗಳಿಂದ ತಂಗುದಾಣಗಳನ್ನು ಕಟ್ಟಿಕೊಂಡು, ಒಂದೆರಡು ದಿನಗಳವರೆಗೆ ಇಲ್ಲಿ ಸುಧಾರಿಸಿಕೊಂಡು, ನಂತರ ಅತ್ಯಂತ ಎತ್ತರದ ನೀಲಿ ಪರ್ವತವನ್ನು ಹತ್ತುತ್ತಾರೆ. ಇಲ್ಲಿರುವ ಯಾತ್ರಿಕರೊಂದಿಗೆ ಪಾಶ್ಚಾತ್ಯರನ್ನೂ ಕಾಣಬಹುದು.

೪. **ಮಕರ ಸಂಕ್ರಾಂತಿಯ ದಿನ–** ಸಂಜೆಯ ಹೊತ್ತಿನಲ್ಲಿ, ದಿಗಂತದ ಈಶಾನ್ಯ ದಿಕ್ಕಿನಲ್ಲಿ ಒಂದು ವಿವರಿಸಲಸದಳವಾದ ತೇಜಸ್ಸಿನ ಜ್ಯೋತಿ ಕಾಣಿಸುವುದರಿಂದ ಮಾನವರ ಸಮುದ್ರವೇ ಅಲ್ಲಿ ನೆರೆದಿರುತ್ತದೆ.

**೫. ಪವಿತ್ರವಾದ ಹದಿನೆಂಟು ಮೆಟ್ಟಿಲುಗಳು–** ಅವು ಐದು ಇಂದ್ರಿಯಗಳು, ಎಂಟು ರಾಗಗಳು, ಮೂರು ಗುಣಗಳು, ವಿದ್ಯೆ ಮತ್ತು ಅವಿದ್ಯೆಯನ್ನು ಪ್ರತಿನಿಧಿಸುತ್ತವೆ. ಯಾರು ಅತ್ಯಂತ ನಿಷ್ಠೆಯಿಂದ ಆಚರಣೆಗಳನ್ನು ಮಾಡಿದ್ದಾರೆಯೋ, ಅವರು ಮಾತ್ರ ಆ ಮೆಟ್ಟಿಲುಗಳನ್ನು ಹತ್ತಲು ಯೋಗ್ಯರು ಎಂಬ ನಂಬಿಕೆ ಇದೆ.

೬. ಸ್ವಾಮಿ ಅಯ್ಯಪ್ಪನ ಪವಿತ್ರವಾದ ದೇವಸ್ಥಾನ, ಶಬರಿ ಬೆಟ್ಟಗಳ ಮೇಲೆ, ಪವಿತ್ರವಾದ ವಾತಾವರಣದಲ್ಲಿ ನೆಲೆಗೊಂಡಿದೆ. ಇಲ್ಲಿ ಯಾತ್ರಿಕರು ತಮ್ಮ ಸರದಿಗಾಗಿ ಕಾಯುತ್ತಾ ಹದಿನೆಂಟು ಮೆಟ್ಟಿಲುಗಳನ್ನು ಇಳಿಯಲು ಸಿದ್ಧರಾಗಿ ನಿಂತಿದ್ದಾರೆ. ಅವರು ಇಳಿಯುವಾಗಲೂ ಭಗವಂತನನ್ನೇ ದೃಷ್ಟಿಸುತ್ತಾ ಹಿಂದಕ್ಕೆ ಇಳಿಯುತ್ತಾ ಹೋಗುತ್ತಾರೆ.

* * * *